# ಯುಗರಶ್ಮಿ

★ ಇಸ್ಲಾಂ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ

★ ಪಾಪ ವಿಮೋಚನೆ

★ ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ

★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

★ ಅಹ್ಮದಿಯಾ ವಿರುದ್ಧ ಝಿಯಾ ಆರ್ಡಿನೆನ್ಸ್

★ ಝಿಯಾ ಜನಮತಗಣನೆ

ತ್ರೈಮಾಸಿಕ

ಜನವರಿ 1985

ಬೆಲೆ: ರೂ. 1-00

ಯಾವುದಾದರೊಂದು ಜನಾಂಗದ ಮೇಲಿನ ದ್ವೇಷವು ಅವರೊಡನೆ ನ್ಯಾಯ ಪಾಲಿಸದಿರಲು ನಿಮ್ಮನ್ನು ಪ್ರೇರೇಪಿಸದಿರಲಿ. ನೀವು ನೀತಿ ಪಾಲಿಸಿರಿ; ಅದು ದೈವಭಕ್ತಿಗೆ ಅತ್ಯಂತ ಸಮೀಪವಾದ್ದಾಗಿದೆ.

—ಪವಿತ್ರ ಖುರ್‌ಆನ್ (5:9)

# ಯುಗರಶ್ಮಿ ತ್ರೈಮಾಸಿಕ

10-23-1008, ಅನ್ಸಾರಿ ರೋಡ್, ಬಂದರ್, ಮಂಗಳೂರು 575 001

ಬಿಡಿ ಪ್ರತಿ : ರೂ. 1-00

ವಾರ್ಷಿಕ ಚಂದಾ : ರೂ. 4-00

ಅಂಚೆ ಮೂಲಕ : ರೂ. 5-00


ವಿಷಯ ಸೂಚಿಕೆ : ಪುಟ


| | | |
|---|---|---|
| * ದೈವಿಕ ಜ್ಞಾನ—ಪಾಪ ವಿಮುಕ್ತಿ | ... | 1 |
| * ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು | ... | 2 |
| * ಇಸ್ಲಾಂ ಧರ್ಮದಲ್ಲಿ ವಿವಾಹ ವಿಚ್ಛೇದನ ನಿಯಮ | ... | 3 |
| * ಪಾಪ ವಿಮೋಚನೆ | ... | 16 |
| * ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ | ... | 18 |
| * ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ—6 | ... | 29 |
| * ಅಹ್ಮದಿಯಾ ವಾರ್ತೆಗಳು | ... | 32 |
| * ಅಹ್ಮದಿಯಾ ವಿರುದ್ಧ ಝಿಯಾ ಆರ್ಡಿನೆನ್ಸ್ ಬಗ್ಗೆ | ... | 35 |
| * ಝಿಯಾ ಜನಮತ ಗಣನೆ | ... | 36 |
| * ಇಂದಿರಾ ನೆನಹು | ... | 38 |



## FREE ENGLISH LITERATURE

1. The Contribution of Islam to the Solution of World Problems
2. Islam The Need of the Hour
3. Islam and Communism
4. Muhammad the Liberator of Women
5. The Last Message of the Prince of Peace

Apply with 15 Paise Stamp for each book to :

**Book Secretary, Ahmadiyya Muslim Mission,**

10-23-1008, Ansari Road, MANGALORE-575 001.

بسم الله الرحمن الرحيم

نحمده ونصلي على رسوله الكريم


# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

| | | |
|---|---|---|
| ಸಂಪುಟ: 10 | ಜನವರಿ 1985 / ಸುಲ್ಹ್ 1364 | ಸಂಚಿಕೆ: 2 |


# ದೈವಿಕ ಜ್ಞಾನ - ಪಾಪ ವಿಮುಕ್ತಿ

"ಸರ್ವಲೋಕ ಸೃಷ್ಟಿಕರ್ತನೂ ನಿಯಾಮಕನೂ ಆದ ದೇವನನ್ನು ಸರಿಯಾಗಿ ಅರಿತುಕೊಂಡು ಅವನೊಂದಿಗೆ ಸಜೀವ ಸಂಬಂಧವನ್ನು ಏರ್ಪಡಿಸಿ ಪರಿಶುದ್ಧವೂ ಪರಿಪಾವನವೂ ಆದ ಜೀವನವನ್ನು ನಡೆಸಿಕೊಂಡು ಅವನ ಸೃಷ್ಟಿಗಳೊಡನೆ ಹೃತ್ಪೂರ್ವಕವಾದ ಅನುಕಂಪದಿಂದಲೂ ಸ್ನೇಹದಿಂದಲೂ ವರ್ತಿಸುವುದೇ ಸರ್ವಮತಗಳ ಮೂಲ ತತ್ವ. ಆದರೆ ಈ ಉದ್ದೇಶ ನಿರ್ಮೂಲ ನಾಶಗೊಂಡದ್ದಾಗಿ ನಾನು ಕಾಣುತ್ತಿದ್ದೇನೆ. ಬಹುಪಕ್ಷ ಜನರು ನಾಸ್ತಿಕತ್ವದ ಯಾವುದಾದರೊಂದು ಶಾಖೆಯನ್ನು ಕರಗತಮಾಡಿಟ್ಟುಕೊಂಡಿದ್ದಾರೆ. ದೈವಜ್ಞಾನ (ಮಅ್‌ರಿಫತ್)ದ ಅಭಾವ ಕಾರಣದಿಂದ ಭೂಮಿಯಲ್ಲಿ ದಿನದಿಂದ ದಿನಕ್ಕೆ ಪಾಪಗಳು ವೃದ್ಧಿಗೊಳ್ಳುತ್ತಿವೆ. ಒಂದು ವಿಷಯದ ಕುರಿತು ಸರಿಯಾದ ಜ್ಞಾನ ಇಲ್ಲವಾದರೆ ಅದರ ಮೌಲ್ಯವೂ ಗಣನೆಯೂ ಸಾಮೀಪ್ಯವೂ ಹೃದಯದಲ್ಲಿ ಉಂಟಾಗುವುದಿಲ್ಲ. ಎಲ್ಲಾ ವಿಧ ಸ್ನೇಹವೂ ಭಯವೂ ಜ್ಞಾನದಿಂದ ಉದ್ಭವಿಸುತ್ತವೆ. ಇಂದು ಲೋಕದಲ್ಲಿ ಪಾಪ ವರ್ಧಿಸುತ್ತಿರುವುದರ ಪ್ರಧಾನ ಕಾರಣ ದೈವಿಕಜ್ಞಾನದ ಕೊರತೆಯೆಂಬುದು ಸ್ಪಷ್ಟ. ಒಂದು ಯಥಾರ್ಥ ಮತವನ್ನು ಗುರುತಿಸಿ ಅರಿಯುವ ಕುರುಹುಗಳಲ್ಲಿ ಪ್ರಧಾನವಾದುದು ಅದರಲ್ಲಿರುವ ದೈವಿಕ ಜ್ಞಾನ ಸಂಪಾದನೆಗಿರುವ ಮಾರ್ಗಗಳಾಗಿವೆ. ಹಾಗಿದ್ದರೆ ಮಾತ್ರವೇ ಮನುಷ್ಯನಿಗೆ ಪಾಪ ಕರ್ಮಗಳಿಂದ ತನ್ನನ್ನು ರಕ್ಷಿಸಿ ದೇವನ ಯಥಾರ್ಥ ಅಸ್ತಿತ್ವವನ್ನು ಅರಿತು ಅವನೊಂದಿಗೆ ಪರಿಪೂರ್ಣ ಸಂಬಂಧವನ್ನೂ ಪ್ರೀತಿಯನ್ನೂ ಸ್ಥಾಪಿಸಲು ಸಾಧ್ಯವಾಗುವುದು. ಅಲ್ಪ ಕಾಲಕ್ಕಾದರೂ ದೇವನೊಡನಿರುವ ಸಂಬಂಧವನ್ನು ಬೇರ್ಪಡಿಸುವುದು ಅವನಿಗೆ ನರಕತುಲ್ಯವಾದ ಅನುಭವವಾಗಬಹುದು. ಪಾಪವಿಮುಕ್ತನಾಗಿ ದೇವನೊಡನೆ ಸ್ನೇಹಬಂಧವನ್ನು ಸ್ಥಾಪಿಸುವುದು ಮನುಷ್ಯನ ಅತ್ಯಂತ ಮಹತ್ತಾದ ಜನ್ಮೋದ್ದೇಶವಾಗಿದೆ. ಯಥಾರ್ಥವಾದ ಈ ಮನಃಸಂತೃಪ್ತಿಯನ್ನು ನಾವು ಸ್ವರ್ಗೀಯ ಜೀವಿತವೆಂದು ಅರ್ಥೈಸುತ್ತೇವೆ. ದೇವ ಸಂಪ್ರೀತಿಗೆ ವಿರುದ್ಧವಾದ ಎಲ್ಲಾ ಇಚ್ಛೆಗಳು ನರಕಾಗ್ನಿಗೆ ತುಲ್ಯವಾಗಿವೆ. ಇಂತಹ

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ಒಬ್ಬ ಜನಸೇವಕನ ಕಾರ್ಯದಲ್ಲಿ ದೇವರು ಒಳಿತು ಇಚ್ಛಿಸುವಾಗ ಒಳ್ಳೆಯ ಸಲಹೆಗಾರರು ಆತನಿಗೆ ಲಭಿಸುತ್ತಾರೆ. ಆತನು ತನ್ನ ಕರ್ತವ್ಯಗಳನ್ನು ಮರೆಯುವಾಗ ಅವರು ಅದನ್ನು ನೆನಪಿಸುವರು. ಆತನು ಅದನ್ನು ಜ್ಞಾಪಿಸುವಾಗ ಆ ಹೊಣೆಗಾರಿಕೆ ನಿರ್ವಹಿಸಲಿಕ್ಕೆ ಅವರು ಆತನಿಗೆ ನೆರವೀಯುವರು. ಆದರೆ ಆತನ ಕಾರ್ಯದಲ್ಲಿ ದೇವರು ಬೇರೊಂದು ಇಚ್ಛಿಸುವುದಾದರೆ ದುರ್ಬೋಧಕರು ಆತನ ಸುತ್ತು ಸೇರುವರು. ಆತನು ತನ್ನ ಕರ್ತವ್ಯಗಳನ್ನು ಮರೆತಿರುವಾಗ ಅವರು ನೆನಪಿಸಲಿಕ್ಕಿಲ್ಲ. ಆತನು ಸ್ಮರಿಸುವಾಗ ಅವರು ಆತನಿಗೆ ಸಹಾಯ ಮಾಡಲಿಕ್ಕೂ ಇಲ್ಲ.

2. ದುರ್ಬಲ ವರ್ಗದ ಹಕ್ಕುಗಳನ್ನು ಸಂರಕ್ಷಿಸದ ಜನತೆಯನ್ನು ದೇವರು ಅನುಗ್ರಹಿಸಲಿಕ್ಕಿಲ್ಲ.

3. ಅಲ್ಲಾಹನಿಗೆ ಅವಿಧೇಯತೆ ತೋರಿಸುವುದರ ಹೊರತು ಇತರ ಎಲ್ಲಾ ವಿಚಾರಗಳಲ್ಲೂ ಮುಸ್ಲಿಮನು ಆಡಳಿತಾಧಿಕಾರಿಯ ಆಜ್ಞೆಯನ್ನು ಅನುಸರಿಸಬೇಕು. ಅಲ್ಲಾಹನಿಗೆ ಅವಿಧೇಯತೆ ತೋರಿಸುವ ಆಜ್ಞೆಯನ್ನು ಪಾಲಿಸಲಿಕ್ಕೆ ಅವನು ಬಾಧ್ಯನಲ್ಲ.

4. ಅಧಿಕಾರ ಸ್ಥಾನಗಳಿಗೆ ನೇಮಿಸಲ್ಪಡಲಿಕ್ಕೆ ಆಶಿಸಬೇಡಿರಿ. ನೀವು ಕೇಳಿ ಅದು ನೀಡಲ್ಪಟ್ಟರೆ ಆ ಸಂಕಲೆಯಿಂದ ನೀವು ಬಂಧಿಸಲ್ಪಡುವಿರಿ. ಕೇಳದೆ ನಿಮಗದು ನೀಡಲ್ಪಟ್ಟರೆ ಕರ್ತವ್ಯ ನಿಭಾಯಿಸುವರೆ ನಿಮಗೆ ದೈವಿಕ ಸಹಾಯ ಲಭಿಸುವುದು.

5. ಅಧಿಕಾರ ಸ್ಥಾನದಲ್ಲಿರುವವನು ತನ್ನ ಸಂರಕ್ಷಣೆಯಲ್ಲಿರುವವರಿಗೆ ವಿಶ್ವಾಸ ವಂಚನೆ ಮಾಡುವುದಾದರೆ ಆತನು ನರಕಾಗ್ನಿಗೆ ಗುರಿಯಾಗುವನು.

**(ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಬರೆದ Wisdom of the Holy Prophet ಎಂಬ ಪುಸ್ತಕದಿಂದ ಆಯ್ದುದು)**

---

( 1ನೇ ಪುಟದಿಂದ )

ಇಚ್ಛೆಗಳಿಗೆ ಅಧೀನವಾಗಿರುವ ಜೀವನ ನರಕಜೀವನವಾಗಿರಬಹುದು. ಈ ರೀತಿಯ ನರಕ ಜೀವಿತದಿಂದ ಹೇಗೆ ಮೋಕ್ಷ ಲಭಿಸುವುದು ಎಂಬುದಾಗಿದೆ ಇಲ್ಲಿರುವ ಪ್ರಶ್ನೆ.

ಇದಕ್ಕೆ ದೇವರಿಂದ ಲಭಿಸಿದ ತಿಳುವಳಿಕೆಯನುಸಾರ ನನಗೆ ಹೇಳಲಿಕ್ಕಿರುವುದೇನೆಂದರೆ ಈ ನರಕಾಗ್ನಿಯಿಂದ ಮೋಕ್ಷವು ಯಥಾರ್ಥವೂ ಪರಿಪೂರ್ಣವೂ ಆದ ದೈವಿಕ ಜ್ಞಾನದೊಂದಿಗೆ ಸಂಬಂಧವಿರಿಸಿಕೊಂಡಿದೆ. ಕಾರಣವೇನೆಂದರೆ, ಮಾನಸಿಕವಾದ ಇಚ್ಛೆಗಳೂ ವಿಕಾರಗಳೂ ಮನುಷ್ಯನ ಸತ್ಯವಿಶ್ವಾಸವನ್ನು ಬೇರು ಸಹಿತ ನಾಶಪಡಿಸುವ ಒಂದು ಜಲಪ್ರವಾಹವಾಗಿದೆ. ಪರಿಪೂರ್ಣವಾದ ದೈವಿಕ ಜ್ಞಾನದಿಂದ ಮಾತ್ರ ಈ ಜಲಪ್ರವಾಹವನ್ನು ತಡೆದುನಿಲ್ಲಿಸಲು ಸಾಧ್ಯವಾಗುವುದು. ಆದ್ದರಿಂದ ಮೋಕ್ಷ ಪ್ರಾಪ್ತಿಗಾಗಿ ಪರಿಪೂರ್ಣವಾದ ದೈವಿಕಜ್ಞಾನ ಅತ್ಯಾವಶ್ಯಕವಾಗಿದೆ. ಲೋಹವನ್ನು ಲೋಹದಿಂದ ಮಾತ್ರವೇ ಭೇದಿಸಲು ಸಾಧ್ಯವೆಂಬುದು ಪ್ರಖ್ಯಾತ ಉದಾಹರಣೆಯಷ್ಟೇ. ಒಂದು ವಸ್ತುವಿನ ಕುರಿತು ಸ್ನೇಹವಾಗಲಿ ಭೀತಿಯಾಗಲಿ ಅದರ ಕುರಿತಿರುವ ಜ್ಞಾನದಿಂದಲೇ ಲಭ್ಯವಾಗುವುದು." (ಲೆಕ್ಚರ್ ಲಾಹೋರ್)

—ಹಝ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಇಸ್ಲಾಂ ಧರ್ಮದಲ್ಲಿ
# ವಿವಾಹ ವಿಚ್ಛೇದನ ನಿಯಮ

★ ಮೌಲಾನ ಬಿ. ಅಬ್ದುಲ್ಲಾ H. A.

ಇಂದು ಮುಸ್ಲಿಮರು ಇಸ್ಲಾಮೀ ಉಪದೇಶಗಳೆಂದು ಅನುಸರಿಸುತ್ತಿರುವ ಸಂಪ್ರದಾಯಗಳೂ ಆಚಾರಗಳೂ ಯಥಾರ್ಥದಲ್ಲಿ ಇಸ್ಲಾಮಿಕವೆಂದಾಗಲಿ, ಸ ರ ಕಾ ರ ವು ಮುಸ್ಲಿಂ ನಿಯಮಗಳೆಂದು ಅಂಗೀಕರಿಸಿದುವೆಲ್ಲಾ ಇಸ್ಲಾಮಿನ ಅಧ್ಯಾಪನಗಳ ಸಾರವೆಂದಾಗಲಿ ಭಾವಿಸುವುದು ಸರಿಯಲ್ಲ. ವಿವಾಹ, ವಿವಾಹ ವಿಚ್ಛೇದನ, ವಾರೀಸು ಹಕ್ಕು ಮುಂತಾದ ಹಲವು ವಿಚಾರಗಳಲ್ಲಿ ವಿಭಿನ್ನವಾದ ಹಲವು ಕಟ್ಟಳೆಗಳನ್ನು ವಿವಿಧ ಮುಸ್ಲಿಂ ಪಂಗಡಗಳು ಅಂಗೀಕರಿಸಿವೆ. ಆ ನಿಯಮಗಳೆಲ್ಲ ಇಸ್ಲಾಮಿಕವಾಗಲಾರವೆಂಬುದು ಸುಸ್ಪಷ್ಟ. ಈ ಬಗ್ಗೆ ವಿವರಿಸಿ ಲೇಖನವನ್ನು ದೀರ್ಘ ಮಾಡಲು ನಾನಿಲ್ಲಿ ಬಯಸುವುದಿಲ್ಲ.

ಪ್ರತಿಯೊಂದು ಮತದ ಅನುಯಾಯಿಗಳು ಕಾಲಾಂತರದಲ್ಲಿ ವಿಭಿನ್ನ ಅಭಿಪ್ರಾಯ ಹೊಂದಿದ ಪಂಗಡಗಳಾಗಿ ಬೇರ್ಪಟ್ಟು ಧರ್ಮದ ನಿರ್ದೇಶನಗಳಿಗೆ ಅವರು ಹಲವಿಧ ವ್ಯಾಖ್ಯಾನಗಳನ್ನು ನೀಡಿ, ಕೊನೆಗೆ ಅವರು ಅದರ ನಿಜವಾದ ಅಧ್ಯಾಪನಗಳಿಂದ ಅಗಲಿಹೋಗುವುದು ಸ್ವಾಭಾವಿಕವೂ ಮತಚರಿತ್ರೆಯಿಂದ ಮನದಟ್ಟಾಗುವ ಸತ್ಯ ವಿಚಾರವೂ ಆಗಿದೆ. ಈ ಪರಿವರ್ತನ ಸ್ವಭಾವಕ್ಕೆ ಮುಸ್ಲಿಮರು ಸಹ ಹೊರತಲ್ಲ. ಆದ್ದರಿಂದ, ಅವರ ಇಂದಿನ ಆಚಾರಾನುಷ್ಠಾನಗಳೆಲ್ಲಾ ಇಸ್ಲಾಮಿಕವೆಂದು ತಿಳಿದುಕೊಳ್ಳುವುದು ಸರಿಯಾಗಲಾರದು. ಆದರೆ ಇಸ್ಲಾಮಿಕ ನಿಯಮದ ಮೂಲಾಧಾರವಾದ ಪವಿತ್ರ ಖುರ್‌ಆನ್, ಒಂದೇ ಒಂದು ಕಾಗುಣಿತವಾಗಲಿ ವ್ಯತ್ಯಾಸವಾಗದ ರೀತಿಯಲ್ಲಿ ಸುರಕ್ಷಿತವಾಗಿರುವುದೆಂದೂ ಮುಹಮ್ಮದ್ ಪೈಗಂಬರರ(ಸ.) ಉಪದೇಶಗಳೂ ನಿರ್ದೇಶಗಳೂ ವಿಶ್ವಾಸಯೋಗ್ಯವೂ ಪ್ರಬಲವೂ ಆದ ರೀತಿಯಲ್ಲಿ ದಾಖಲಿಸಲ್ಪಟ್ಟಿವೆ ಎಂಬುದೂ ಇಸ್ಲಾಂ ಧರ್ಮದ ಒಂದು ವೈಶಿಷ್ಟ್ಯವಾಗಿದೆ. ಆದುದರಿಂದ, ನಿಜವಾದ ಇಸ್ಲಾಮೀ ನಿಯಮ ನಿರ್ದೇಶನಗಳೇನೆಂದೂ ಮುಸ್ಲಿಮರು ಇಂದು ಆಚರಿಸಿಕೊಂಡು ಬರುತ್ತಿರುವ ಸಂಪ್ರದಾಯಗಳಲ್ಲೂ ಮುಸ್ಲಿಂ ನಿಯಮಗಳೆಂದು ಸರಕಾರ ಅಂಗೀಕರಿಸಿರುವ ನಿಯಮಗಳಲ್ಲೂ ಇಸ್ಲಾಮಿಕವಲ್ಲದ ಅಂಶಗಳು ಯಾವುವೆಂದೂ ಅನ್ವೇಷಣ ಬುದ್ಧಿಯುಳ್ಳವರಿಗೆ ಸುಲಭದಲ್ಲಿ ಮನಗಾಣಲು ಸಾಧ್ಯವಾಗಬಹುದು.

ಪ್ರಕೃತ, ನಾವು ಪ್ರಥಮವಾಗಿ ಚಿಂತಿಸಬೇಕಾದುದೇನೆಂದರೆ, ವಿವಾಹ ವಿಚ್ಛೇದನ ಯಾವ ರೀತಿಯಲ್ಲಾದರೂ ಸಮರ್ಥನೀಯವೇ ಎಂದು. ಈ ವಿಷಯದ ಬಗ್ಗೆ ವಿಸ್ತರಿಸಿ ಹೇಳುವ ಬದಲು ಬಹಳ ಚುಟುಕಾಗಿ ಹೇಳಬಹುದು. ವಿವಾಹ ವಿಚ್ಛೇದನ ಯಾವ ವಿಧದಲ್ಲೂ ಸಮರ್ಥನೀಯವಲ್ಲವೆಂದು ಉಪದೇಶಿಸುವ ಧರ್ಮಗಳಲ್ಲಿ ಇಸ್ಲಾಂ ಸೇರುವುದಿಲ್ಲ. ಪತಿ-ಪತ್ನಿಯರು ಸಾಧ್ಯವಾದಷ್ಟು ದಾಂಪತ್ಯ ಬಂಧವನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ ಆ ಸಂಬಂಧ ಮುರಿಯದಂತೆ ಇಬ್ಬರೂ ಜಾಗ್ರತೆ ವಹಿಸಬೇಕೆಂದೂ ಇಸ್ಲಾಂ ಬಲವಾಗಿ ಉಪದೇಶಿಸುವುದಾದರೂ, ಇಬ್ಬರಿಗೂ ತಮ್ಮ ದಾಂಪತ್ಯ ಜೀವನವನ್ನು ಸುಗಮವಾಗಿ ಮುಂದುವರಿಸಿಕೊಂಡು ಹೋಗಲು ಅಸಾಧ್ಯವೆಂದು ಕಾಣುವಾಗ ವಿವಾಹ ವಿಚ್ಛೇದ ಮಾಡಬಹುದೆಂದೂ ಅದು ಸಮ್ಮತಿಯನ್ನೀಯುತ್ತದೆ. ಗಂಡ-ಹೆಂಡಿರು ಅನ್ಯೋನ್ಯ ಕಲಹವನ್ನುಂಟುಮಾಡಿ ದಾಂಪತ್ಯ ಬಂಧವನ್ನು ಶಿಥಿಲೀಕರಿಸಿ ಹೆಸರಿಗೆ ಮಾತ್ರ ದಂಪತಿಗಳಾಗಿ ಜೀವಿಸುವುದಕ್ಕಿಂತ ಗುಣಕರವೂ ಪ್ರಾಯೋಗಿಕವೂ ಯಾವುದೆಂದರೆ, ತಮ್ಮ ಜೀವಿತವನ್ನು ಮನುಷ್ಯ ಜೀವಿತವನ್ನಾಗಿ ಮಾಡಲು ಅವರು ಪರಸ್ಪರ ಬೇರ್ಪಡುವುದಾಗಿದೆಯೆಂಬುದು ಸುಗ್ರಾಹ್ಯ. ಕೆಲವೊಮ್ಮೆ ಪತಿಗಿರುವ ನಿವಾರಿಸಲಾಗದಂತಹ ಕೆಲವು ದೋಷಗಳ ಕಾರಣ ಪತ್ನಿಗೆ ಆತನೊಂದಿಗೆ ಜೀವನ ನಡೆಸುವುದು

ದುಸ್ಸಹ ಮತ್ತು ನರಕೀಯವಾಗಿ ಭವಿಸಬಹುದು. ಇದೇ ಪ್ರಕಾರವೇ, ಪತ್ನಿಗಿರುವ ಹೋಗಲಾಡಿಸದಂತಹ ದೋಷಗಳ ಕಾರಣದಿಂದ ಪತಿಗೆ ಅವಳನ್ನು ತನ್ನ ಸಹಧರ್ಮಿಣಿಯಂತೆ ನಡೆಸಿಕೊಂಡು ಹೋಗುವುದು ದುಸ್ತರವೂ ದುಃಖದಾಯಕವೂ ಆಗಬಹುದು. ಹೀಗಿರುವ ಸಂದರ್ಭದಲ್ಲಿ ಸಹ ವಿವಾಹ ವಿಚ್ಛೇದ ಮಾಡದೆ ದಂಪತಿಗಳು ನರಕ ಜೀವನವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಇಸ್ಲಾಂ ವಿಧಿಸುವುದಿಲ್ಲ. ಇಂತಹ ಅನಿವಾರ್ಯ ಘಟ್ಟದಲ್ಲಿ ವಿವಾಹ ವಿಚ್ಛೇದನಕ್ಕೆ ಇಸ್ಲಾಂ ಸಮ್ಮತಿ ನೀಡಿರುವುದು ಅತ್ಯಂತ ವಿವೇಕಪೂರ್ಣವೆಂದು ಚಿಂತಿಸುವವರಿಗೆ ಸುಲಭದಲ್ಲಿ ಮನಗಾಣಬಹುದು. ದಾಂಪತ್ಯ ಜೀವಿತದಲ್ಲಿ ಕೆಲವೊಮ್ಮೆ ಇಂತಹ ವೈಷಮ್ಯಗಳು ಎದುರಾಗುವುದರಿಂದಾಗಿ, ಅವುಗಳಿಗೆ ಪರಿಹಾರ ಮಾರ್ಗ ಇಲ್ಲದಿರುವ ಪಕ್ಷದಲ್ಲಿ ದಾಂಪತ್ಯ ಜೀವಿತ ಅತ್ಯಂತ ದುಃಖಹೇತುಕ ಆದೀತೆಂದು ಇರುವುದರಿಂದಾಗಿಯೇ, ಅನಿವಾರ್ಯ ಘಟ್ಟದಲ್ಲಿ ವಿವಾಹ ವಿಚ್ಛೇದ ಸಮ್ಮತನೀಯವೆಂದು ಇಸ್ಲಾಂ ಬೋಧಿಸಿದೆ.

ಸಂಕ್ಷಿಪ್ತವಾಗಿ, ವೈವಾಹಿಕ ಬಂಧದ ಕುರಿತು ಇಸ್ಲಾಂ ಹೇಳುವುದೇನೆಂದರೆ, ಆ ಸಂಬಂಧವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಾಗುವಾಗ ಬೇರ್ಪಡಿಸಲು ಸಾಧ್ಯವಾಗುವ ಒಂದು ಕರಾರು (Contract) ಎಂದಾಗಿದೆ. ಈ ನಿರ್ದೇಶ ಅತ್ಯಂತ ಪ್ರಾಯೋಗಿಕವೂ ಅನುಷ್ಠಾನ ಯೋಗ್ಯವೂ ಆಗಿದೆಯೆಂಬುದಕ್ಕೆ ಲೋಕಾನುಭವ ಸಾಕ್ಷ್ಯ ವಹಿಸುತ್ತದೆ. ವಿವಾಹಬಂಧ ಒಂದು ಒಪ್ಪಂದ ಅಲ್ಲ, ಅವಿಚ್ಛಿನ್ನವಾದ ಒಂದು ಆತ್ಮಸಂಸ್ಕಾರ ಅಥವಾ 'ಸಾಕ್ರಮೆಂಟ್' (Sacrament) ಎಂದು ನಂಬುವ ಹಲವು ಮತಸ್ಥರು ಸಹ ವಿವಾಹ ವಿಚ್ಛೇದ ಆವಶ್ಯಕವೆಂದು ಒಪ್ಪಿಕೊಂಡು ನಿಯಮ ನಿರ್ಮಾಣ ಮೂಲಕ ಅದನ್ನು ರೂಢಿಗೊಳಿಸಲು ಶ್ರಮಿಸುತ್ತಾರೆ. ಕ್ರೈಸ್ತಮತ ತತ್ವ ಪ್ರಕಾರ ವಿವಾಹವು ಅವಿಚ್ಛೇದ್ಯವಾದ ಒಂದು ಮತಸಂಸ್ಕಾರವಾಗಿದೆ. ಆದರೆ ಇಂದು ಯುರೋಪು ಮತ್ತು ಅಮೇರಿಕ ಕಾನೂನು ಮೂಲಕ ವಿವಾಹ ವಿಚ್ಛೇದವನ್ನು ನಿಯಮಬದ್ಧಗೊಳಿಸಿ ಜ್ಯಾರಿಗೆ ತಂದಿದೆ. ಹಿಂದೂಗಳಿಗೆ ಸಹ ಶಾಸ್ತ್ರೋಕ್ತವಾದ ವಿವಾಹ, ಪರಿಚ್ಛೇದನಗೊಳಿಸಲಾರದಂತಹ ಒಂದು ಬಂಧವಾಗಿದೆ. ಆದರೆ ಇಂದು ಅವರು ವಿವಾಹ ವಿಚ್ಛೇದವನ್ನು ನಿಯಮಬದ್ಧಗೊಳಿಸಲು ಕಾನೂನಿನ ಮೊರೆಹೋಗುತ್ತಾರೆ. ಸ್ವಾಮಿ ದಯಾನಂದ ಸರಸ್ವತಿ ವಿವಾಹ ವಿಚ್ಛೇದನ ವೇದ ಪ್ರಕಾರ ನಿಷಿದ್ಧವೆಂದು ಬೋಧಿಸಿದ್ದರೂ ಅವರ ಅನುಯಾಯಿಗಳಾದ ಆರ್ಯಸಮಾಜಿಗಳು ಕಾನೂನು ಮೂಲಕ ವಿವಾಹ ವಿಚ್ಛೇದನವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಹೀಗಿರುವ ಪರಿಶ್ರಮಗಳಿಗೆಲ್ಲಾ ಕಾರಣವೇನೆಂದರೆ, ಕೆಲವು ಬಾರಿ ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗುವುದು ಅಸಾಧ್ಯವಾಗುವುದರಿಂದ, ಆ ಬಂಧದಿಂದ ದಂಪತಿಗಳು ವಿಮುಕ್ತರಾಗದ ಪಕ್ಷದಲ್ಲಿ ಅವರು ದು:ಖ–ದುರಂತಗಳಿಗೂ ಕಷ್ಟ-ನಷ್ಟಗಳಿಗೂ ಈಡಾಗುತ್ತಾರೆಂಬ ಅನುಭವವೇ ಆಗಿದೆ.

ಪತಿ-ಪತ್ನಿಯರಿಗೆ ಸರಸ-ಸಾಮರಸ್ಯದ ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗಲು ದುಸ್ಸಹವಾದ ಘಟ್ಟದಲ್ಲಿ ವಿವಾಹ ವಿಚ್ಛೇದ ಮಾಡಿಕೊಳ್ಳಬಹುದೆಂದು ಒಂದು ಕಡೆಯಲ್ಲಿ ಇಸ್ಲಾಂ ಒಪ್ಪುವುದಾದರೆ, ಇನ್ನೊಂದು ಕಡೆಯಲ್ಲಿ, ದಂಪತಿಗಳು ಮರಣದ ವರೆಗೆ ಪರಸ್ಪರ ಪ್ರೀತಿಯಿಂದ ವರ್ತಿಸಿ ತಮ್ಮ ಸಂಬಂಧವನ್ನು ನಿರ್ಬಾಧೆಯಿಂದ ಮುಂದುವರಿಸಿಕೊಂಡು ಹೋಗಲು ಶ್ರಮಿಸಬೇಕೆಂದು ಬಹಳ ಬಲವಾಗಿ ಉಪದೇಶಿಸುತ್ತದೆ. ದಾಂಪತ್ಯ ಜೀವಿತವನ್ನು ಸೌಹಾರ್ದದಿಂದ ನಡೆಸಿಕೊಂಡು ಹೋಗಲು ಅಸಾಧ್ಯವಾಗಿ ಪರಿಣಮಿಸುವ ಸಂದರ್ಭದಲ್ಲಿ ಕೂಡ ವಿವಾಹ ವಿಚ್ಛೇದನ ಮಾಡಬಾರದೆಂದು ಇಸ್ಲಾಂ ವಿಧಿಸುವ ಪಕ್ಷದಲ್ಲಿ, ಅದು ಇಸ್ಲಾಂ ಧರ್ಮದ ಪರಿಪೂರ್ಣತಾವಾದಕ್ಕೂ, ಅದರ ಸರ್ವಜನೀನ ದೌತ್ಯಕ್ಕೂ ಕಳಂಕಕರವಾಗುವುದು. ಅದೇ ಪ್ರಕಾರವೇ, ಕ್ಷುಲ್ಲಕ ಕಾರಣಗಳಿಗೆ ಯಥೇಷ್ಟ ವಿವಾಹ ವಿಚ್ಛೇದ ಮಾಡಿಕೊಳ್ಳಲು ಇಸ್ಲಾಂ ಸಮ್ಮತಿ ನೀಡುವುದಾದರೆ ಅದು ಇಸ್ಲಾಮಿನ ಮಹನೀಯವೂ ಸುಗಮವೂ ಆದ ತತ್ವಗಳಿಗೆ ಹಾನಿಕರವಾಗುವುದು. ಕೆಲವು ಅನಿವಾರ್ಯ ಘಟ್ಟಗಳಲ್ಲಿ ವಿವಾಹ ವಿಚ್ಛೇದ ಮಾಡಬಹುದೆಂದು ಇಸ್ಲಾಂ ಒಪ್ಪುವುದಾದರೆ ಈ ಒಪ್ಪಿಗೆ ಪುರುಷರಿಗಿರುವಂತೆಯೇ ಸ್ತ್ರೀಯರಿಗೂ ಇದೆಯೆಂದು ಅದು ಬೋಧಿಸುತ್ತದೆ. ಈ ನಿಜಾಂಶವನ್ನು ಪವಿತ್ರ ಖುರ್‌ಆನಿನಿಂದಲೂ ಪ್ರವಾದಿ ವಚನಗಳಿಂದಲೂ ಮನಗಾಣಬಹುದು. ಆದರೆ ಗಂಡಂದಿರಿಗೆ ಹೆಚ್ಚಿನ ಅಧಿಕಾರವೂ ಸ್ವಾತಂತ್ರ್ಯವೂ ಇರುವುದರಿಂದ ಅವರೇ ಹೆಂಡಂದಿರಿಗಿಂತ ಹೆಚ್ಚಾಗಿ ವಿವಾಹ ಬಂಧವನ್ನು ಮುರಿಯಲು ಪ್ರೇರಿತರಾಗುತ್ತಾರೆ, ಆದ್ದರಿಂದಲೇ ಗಂಡಂದಿರಿಗೆ ದಾಂಪತ್ಯಬಂಧವನ್ನು ಸುಲಭದಲ್ಲಿ ವಿಚ್ಛೇದಿಸಲು ಸಾಧ್ಯವಾಗದಂತೆ ಹಲವು ಪ್ರತಿಬಂಧಕಗಳನ್ನು ಇಸ್ಲಾಂ ಧರ್ಮ ಏರ್ಪಡಿಸಿದೆ.

ಒಂದನೆಯದಾಗಿ, ಪತ್ನಿಯೊಂದಿಗೆ ಸ್ನೇಹದಿಂದಲೂ ಉದಾರ ಭಾವದಿಂದಲೂ ವರ್ತಿಸಲಿಕ್ಕೆ ಇಸ್ಲಾಂ ಆಜ್ಞಾಪಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ :

"ಹೆಂಡಂದಿರಿಗೆ ಗಂಡಂದಿರೊಡನೆ ಹೊಣೆಗಾರಿಕೆಗಳಿರುವಂತೆಯೇ ನ್ಯಾಯವಾದ ರೀತಿಯಲ್ಲಿ ಗಂಡಂದಿರಿಗೆ ಹೆಂಡಂದಿರೊಡನೆ ಸಹ ಹೊಣೆಗಾರಿಕೆಗಳಿವೆ." (2:229)

"ನೀವು ಮಡದಿಯರನ್ನು ಒಳ್ಳೆಯ ರೀತಿಯಲ್ಲಿ ಇರಿಸಿಕೊಳ್ಳಿರಿ; ಅಥವಾ ನ್ಯಾಯೋಚಿತವಾಗಿ ಬಿಡುಗಡೆ ಮಾಡಿರಿ; ನೀವು ಅಕ್ರಮಿಗಳಾಗುವ ತರದಲ್ಲಿ ಅವರನ್ನು ಪೀಡಿಸಲಿಕ್ಕಾಗಿ ತಡೆದಿರಿಸಬಾರದು; ಹಾಗೆ ಮಾಡುವವನು ತನಗೇ ಕೇಡನ್ನುಂಟುಮಾಡುತ್ತಾನೆ. ಅಲ್ಲಾಹನ ಆಜ್ಞೆಗಳನ್ನು ನೀವು ಪರಿಹಾಸ್ಯಕ್ಕೆ ಈಡು ಮಾಡಬೇಡಿರಿ." (2:232)

ನೀವು ಪತ್ನಿಯರೊಡನೆ ಒಳ್ಳೆಯ ರೀತಿಯಲ್ಲೂ ಔದಾರ್ಯದಿಂದಲೂ ವರ್ತಿಸಿರಿ; ನೀವು ಅವರೊಡನೆ ವಿರಕ್ತಿಭಾವ ಹೊಂದುವ ಪಕ್ಷದಲ್ಲಿ, ನೀವು ವಿರಕ್ತಿ ತೋರಿಸುವ ಅವರಲ್ಲಿ ಅಲ್ಲಾಹನು ಬಹಳ ಒಳಿತನ್ನು ಉಂಟುಮಾಡಲೂಬಹುದು." (4:20)

ಈ ಮೇಲಿನ ಖುರ್‌ಆನ್ ವಾಕ್ಯಗಳಿಂದ ತಿಳಿದುಬರುವುದೇನೆಂದರೆ, ಹೆಂಡಂದಿರೊಡನೆ ಗಂಡಂದಿರು ಔದಾರ್ಯದಿಂದ ವರ್ತಿಸಬೇಕೆಂದೂ ಅವರ ಹಕ್ಕುಗಳನ್ನು ಅವರಿಗೆ ನೀಡಬೇಕೆಂದೂ ಅವರನ್ನು ಪರಿತ್ಯಜಿಸುವುದಾದರೆ ನ್ಯಾಯವಾದ ರೀತಿಯಲ್ಲಿ ಹಾಗೆ ಮಾಡಬೇಕೆಂದೂ ಅವರನ್ನು ಪೀಡಿಸಲಿಕ್ಕೂ ಕಾಡಿಸಲಿಕ್ಕೂ ಬೇಕಾಗಿ ಮಾತ್ರ ಹೆಸರಿಗೆ ಹೆಂಡಂದಿರಾಗಿ ಇರಿಸಿಕೊಳ್ಳಬಾರದೆಂದೂ, ಯಾವ ಕಾರಣದಿಂದಾದರೂ ಅವರ ಮೇಲೆ ವಿರಕ್ತಿಭಾವ ಉಂಟಾದರೆ ಅವರನ್ನು ತಕ್ಷಣ ಬಿಟ್ಟುಬಿಡದೆ ಸಾಧ್ಯವಾದಷ್ಟು ಅವರೊಡನೆ ಸಹಕರಿಸಿ ವರ್ತಿಸಬೇಕೆಂದೂ, ಹೀಗೆ ಮಾಡುವುದು ದೈವಾನುಗ್ರಹಕ್ಕೆ ಹೇತುವಾಗುವುದೆಂದೂ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹಲವೆಡೆಗಳಲ್ಲಿ ಉಪದೇಶಿಸಿದೆ; ಮಾತ್ರವಲ್ಲ ಪ್ರವಾದಿ ಮುಹಮ್ಮದ್(ಸ.) ಸಹ ಈ ವಿಷಯದಲ್ಲಿ ಬಲವಾಗಿ ಉಪದೇಶಿಸಿದ್ದಾರೆ. ಮುಹಮ್ಮದ್ ಪೈಗಂಬರ್ ಹೀಗೆ ನುಡಿದಿದ್ದಾರೆ :

"ಸ್ತ್ರೀಯರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂಬ ಉಪದೇಶವನ್ನು ನೀವು ಸ್ವೀಕರಿಸಿರಿ." (ಬುಖಾರಿ)

"ನಿಮ್ಮ ಪೈಕಿ ತನ್ನ ಪತ್ನಿಯೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸುವವನೇ ನಿಮ್ಮಲ್ಲಿ ಉತ್ತಮನು."(ತಿರ್ಮಿದಿ)

ಮುಹಮ್ಮದ್ ಪೈಗಂಬರರು ಹೀಗೆ ಅನೇಕ ಸಂದರ್ಭಗಳಲ್ಲಿ ಉಪದೇಶಿಸಿದ್ದು ಮಾತ್ರವಲ್ಲ, ಮರಣಶಯ್ಯೆಯಲ್ಲಿರುವಾಗ ಸಹ "ಸ್ತ್ರೀಯರೊಡನೆ ನೀವು ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದು ನಾನಿದೋ ನಿಮಗೆ ಉಪದೇಶಿಸುತ್ತೇನೆ" ಎಂದು ನುಡಿದರು. ಈ ಪ್ರಕಾರದ ವಚನಗಳಿಂದ ಪೈಗಂಬರರು ತನ್ನ ಅನುಯಾಯಿಗಳಿಗೆ ಪ್ರಬೋಧಿಸಿರುವುದೇನೆಂದರೆ, ಪತ್ನಿಯರಿಗೆ ಹಾನಿ ಉಂಟುಮಾಡಬಾರದೆಂದೂ ಕ್ಷುಲ್ಲಕ ವಿಷಯಗಳಿಗಾಗಿ ಅವರನ್ನು ತ್ಯಜಿಸಬಾರದೆಂದೂ ಆಗಿದೆ. ಮಾತ್ರವಲ್ಲ, ಪತ್ನಿ ಪತಿಗೆ ಅವಿಧೇಯತೆ ತೋರಿಸಿದರೆ, ಅಥವಾ ಇಬ್ಬರಿಗೂ ಪರಸ್ಪರ ಸೌಹಾರ್ದದಿಂದ ಸಹವಾಸ ಮಾಡಲು ಸಾಧ್ಯವಿಲ್ಲವೆಂದು ಕಂಡುಬರುವುದಾದರೆ ಸಹ ತಕ್ಷಣ ಪತಿಯು ಪತ್ನಿಯನ್ನು ಬಿಟ್ಟುಬಿಡಬಾರದೆಂದೂ ಅವರ ಮಧ್ಯೆ ಸರಸ ಮತ್ತು ಸಾಮರಸ್ಯ ಉಂಟುಮಾಡಲು ಎರಡು ಕಡೆಗಳಿಂದಲೂ ಮಧ್ಯಸ್ಥರನ್ನು ನೇಮಿಸಿ ಯುಕ್ತವಾಗಿ ಪ್ರವರ್ತಿಸಬೇಕೆಂದು ಸಹ ಪವಿತ್ರ ಖುರ್‌ಆನ್ ಬೋಧಿಸುತ್ತದೆ. (4:35, 36)

ಮುಹಮ್ಮದ್ ಪೈಗಂಬರರು ವಿವಾಹ ವಿಚ್ಛೇದದ ಕುರಿತು ಹೀಗೆ ಹೇಳಿದ್ದಾರೆ : "ವಿವಾಹ ವಿಚ್ಛೇದ ಮಾಡಬಹುದಾದರೂ ಅದು ಅಲ್ಲಾಹನಿಗೆ ಅತ್ಯಂತ ಅಪ್ರಿಯವಾದುದು." (ಅಬೂ ದಾವೂದ್)

ಹೀಗೆ ಗಂಡಂದಿರು ಹೆಂಡಂದಿರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದೂ ಸಾಧ್ಯವಾದಷ್ಟರ ಮಟ್ಟಿಗೆ ದಾಂಪತ್ಯಬಂಧವನ್ನು ಬೇರ್ಪಡಿಸದಿರಬೇಕೆಂದೂ ಇರುವ ಇಸ್ಲಾಮಿನ ಉಪದೇಶ ಯಥೇಷ್ಟ ವಿವಾಹ ವಿಚ್ಛೇದನ ಮಾಡದಿರಲಿಕ್ಕಾಗಿ ಪ್ರಧಾನವಾದ ತಡೆಯಾಗಿದೆ.

ಎರಡನೆಯದಾಗಿ, ದಾಂಪತ್ಯಬಂಧವನ್ನು ಸುಲಭದಲ್ಲಿ ಮುರಿಯದಿರಲು ಇಸ್ಲಾಂ ಏರ್ಪಡಿಸಿದ ಮತ್ತೊಂದು ತಡೆಯೇನೆಂದರೆ, ಪತಿಯು ಪತ್ನಿಗೆ 'ಮಹರ್' ಎಂಬ ಕನ್ಯಾಶುಲ್ಕ ನೀಡಬೇಕಾದುದು ಕಡ್ಡಾಯವೆಂದು ಮಾಡಿರುವ ನಿಯಮವಾಗಿದೆ. ಈ ಮೊತ್ತ ಇಷ್ಟೇ ಎಂದು ಇಸ್ಲಾಂ ನಿರ್ದಿಷ್ಟಪಡಿಸಲಿಲ್ಲವಾದರೂ ಪತಿ ತನ್ನ ಸ್ಥಾನಮಾನಕ್ಕನುಸಾರವಾಗಿ ತಕ್ಕುದಾದ ಒಂದು ಮೊತ್ತವನ್ನು ಪತ್ನಿಗೆ ನೀಡಬೇಕಾದುದು ಅವಶ್ಯವಾಗಿದೆ. ಈ ಮೊತ್ತವನ್ನು ಕೂಡಲೇ ಕೊಡಬೇಕೆಂಬ ನಿರ್ಬಂಧವಿಲ್ಲವಾದರೂ ಅದನ್ನು ಕೊಡದಿರ

ಲಿಕ್ಕೆ ಪತಿಗೆ ನಿರ್ವಾಹವಿಲ್ಲ. ಪತ್ನಿಯಾದರೋ ಇಂತಹ ಯಾವ ಹಣವನ್ನಾಗಲಿ ಪತಿಗೆ ಕೊಡಲಿಕ್ಕೆ ಬಾಧ್ಯಳಲ್ಲ. ಆದ್ದರಿಂದ, ಗಂಡ ಹೆಂಡತಿಯನ್ನು ತ್ಯಜಿಸುವುದಾದರೆ, ಪ್ರಸ್ತುತ ಮೊತ್ತ ಆತನಿಗೆ ನಷ್ಟವಾಗುತ್ತದೆ. ಹೀಗೆ, ಪತಿಯು ಪತ್ನಿಗೆ ವಿವಾಹಶುಲ್ಕವಾಗಿ ಒಂದು ಮೊತ್ತವನ್ನು ಕೊಡಬೇಕೆಂದು ಇಸ್ಲಾಂ ವಿಧಿಸಿರುವುದರ ಒಂದು ಅವಶ್ಯ ವೇನೆಂದರೆ, ಪತಿ ಕ್ಷುಲ್ಲಕ ಸಂಗತಿಗೆ ಪತ್ನಿಯನ್ನು ತಲಾಖ್ ಹೇಳಿ ಬಿಟ್ಟುಬಿಡದಿರಲಿಕ್ಕೇ ಆಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ :

"ಮಡದಿಯರಿಗೆ ಪಾರಿತೋಷಕವಾಗಿ ಅವರ ವಧು ದಕ್ಷಿಣೆಯನ್ನು ನೀಡಿರಿ." (4:5)

"ನೀವು ಒಬ್ಬಳು ಪತ್ನಿಯ ಸ್ಥಾನದಲ್ಲಿ ಇನ್ನೊಬ್ಬಳು ಪತ್ನಿಯನ್ನು ವರಿಸಲು ಬಯಸುವುದಾದರೆ, ಅವರಲ್ಲೊಬ್ಬ ಳಿಗೆ ನೀವು ಬಹಳ ಹೆಚ್ಚು ಸಂಪತ್ತನ್ನು ಕೊಟ್ಟಿದ್ದರೂ ಅದರಿಂ ದ ಏನನ್ನೂ ನೀವು ವಾಪಾಸು ಪಡೆಯಬಾರದು."(4:21)

"ಅವರಿಗಾಗಿ ನಿಗದಿಪಡಿಸಲಾದ ಪ್ರತಿಫಲವನ್ನು ನೀವು ಅವರಿಗೆ ನೀಡಿರಿ." (4:25)

ಈ ವಾಕ್ಯಗಳಿಂದೆಲ್ಲಾ ಸ್ಪಷ್ಟವಾಗುವುದೇನೆಂದರೆ, ಗಂಡ ಹೆಂಡತಿಗೆ ತನ್ನ ಸ್ಥಾನಮಾನ ಮತ್ತು ಸಾಮರ್ಥ್ಯವ ನ್ನನುಸರಿಸಿ ವಿವಾಹ ಶುಲ್ಕವಾಗಿ ಒಂದು ಮೊತ್ತವನ್ನು ಕೊಡಬೇಕೆಂದೂ ಹೆಂಡತಿಯನ್ನು ತ್ಯಜಿಸಬೇಕಾದ ಘಟ್ಟದಲ್ಲಿ ಆ ಮೊತ್ತ ಎಷ್ಟು ಹೆಚ್ಚಾಗಿದ್ದರೂ ವಾಪಾಸು ತೆಗೆದು ಕೊಳ್ಳಬಾರದೆಂದೂ ಆಗಿದೆ. ಮುಹಮ್ಮದ್ ಪೈಗಂಬರರು ಈ ಬಗ್ಗೆ ಹೀಗೆ ಹೇಳಿದ್ದರು: "ನೀವು ಸ್ತ್ರೀಯನ್ನು ಯಾವ ನಿಬಂಧನೆಯಂತೆ ಪತ್ನಿಯಾಗಿ ವರಿಸುತ್ತೀರೋ, ಅದುವೇ ನೀವು ನಿರ್ವಹಿಸಬೇಕಾದ ನಿಬಂಧನೆಗಳ ಪೈಕಿ ಅತಿ ಪ್ರಧಾನ ವಾದುದು." (ಬುಖಾರಿ)

ಗಂಡ ಹೆಂಡತಿಗೆ ವಧುದಕ್ಷಿಣೆಯಾಗಿ ತಕ್ಕುದಾದ ಒಂದು ಮೊತ್ತವನ್ನು ನೀಡಬೇಕೆಂಬ ಇಸ್ಲಾಮಿನ ಈ ಆಜ್ಞೆ ಅವನಿಗೆ ಇಚ್ಛಾನುಸಾರ ಪತ್ನಿಯನ್ನು ಬಿಡುವುದಕ್ಕೆ ಒಂದು ಪ್ರತಿಬಂಧಕವಾಗಿದೆ. ನಿಜವಾಗಿ, ವಿವಾಹ ಶುಲ್ಕವೆಂಬುದು ಗಂಡ ಹೆಂಡತಿಗೆ ಕಡ್ಡಾಯವಾಗಿ ಕೊಡಬೇಕಾದ ವಧು ದಕ್ಷಿಣೆಯಾಗಿದೆ. ಆದರೆ ನಿರ್ಭಾಗ್ಯವಶಾತ್ ಇಂದು ಹಲ ವೆಡೆಗಳಲ್ಲಿ ಇಸ್ಲಾಮಿನ ಈ ನಿರ್ದೇಶನಕ್ಕೆ ತೀರಾ ವಿರುದ್ಧ ವಾಗಿ ಗಂಡ ಹೆಂಡತಿಯಿಂದ ವರದಕ್ಷಿಣೆ ಪಡೆಯುತ್ತಾನೆ.

ಇಸ್ಲಾಮಿಕವಲ್ಲದ ಈ ಸಂಪ್ರದಾಯ ಅಭಿಮಾನಕ್ಕೂ ನೀತಿಗೂ ಅನುಯೋಜ್ಯವಲ್ಲದ್ದೂ ಸಮುದಾಯದಲ್ಲಿ ಸ್ತ್ರೀಗಿ ರುವ ಸ್ಥಾನವನ್ನು ಅಧಃಪತನಗೊಳಿಸುವಂಥದ್ದೂ ಅನೇಕ ಯುವತಿಯರು ಗಂಡುಗಳು ಸಿಗದೆ ಕಷ್ಟಪಡುವುದಕ್ಕೆ ಕಾರಣ ಭೂತವೂ ಆಗಿದೆ. ಸ್ತ್ರೀಯಿಂದ ತುಂಬಾ ಧನವನ್ನು ಕಸಿದು ಕೊಂಡು ಅವಳನ್ನು ಪತ್ನಿಯಾಗಿ ವರಿಸುವುದು ಖಂಡಿತ ವಾಗಿಯೂ ಪೌರುಷ್ಯಕ್ಕೂ ನೀತಿಗೂ ವಿರುದ್ಧವಾದುದು. ದುರದೃಷ್ಟವಶಾತ್ ಇಂದು ಮುಸ್ಲಿಮರು ಇಸ್ಲಾಮಿನ ವಿಧಿ ವಿಧಾನ ಸ್ತ್ರೀಗೆ ಕೊಡಬೇಕಾದ ವಧು ದಕ್ಷಿಣೆಯನ್ನು ಕೇವಲ ಒಂದು ವಿನೋದವೆಂದು ಬಗೆದು ಸ್ತ್ರೀಯಿಂದ ದೊಡ್ಡದಾ ದೊಂದು ಮೊತ್ತವನ್ನು ಕಸಿದುಕೊಂಡು ಅದನ್ನು ವರ ದಕ್ಷಿಣೆಯೆಂದು ಕರೆಯುತ್ತಾರೆ. ಇಂದು ಮುಸ್ಲಿಮರಲ್ಲಿ ಕಂಡುಬರುವ ಈ ಸಂಪ್ರದಾಯವನ್ನು ಇಸ್ಲಾಮಿಕವೆಂದು ಯಾರಾದರೂ ತಿಳಿಯುವರಾದರೆ ಅದು ತಪ್ಪೆಂದು ಹೇಳದೆ ಗತ್ಯಂತರವಿಲ್ಲ.

ಮೂರನೆಯದಾಗಿ, ಪತಿ-ಪತ್ನಿಯರು ವಿವಾಹಬಂಧ ದಿಂದ ಬೇರ್ಪಡದೆ ಸರಸದಲ್ಲಿ ಜೀವನ ನಡೆಸಲು ಸಾಧ್ಯ ವಾಗುವಂತೆ ಇಸ್ಲಾಂ ನಿರ್ದೇಶಿಸಿರುವ ಮತ್ತೊಂದು ಉಪಾಯವೇನೆಂದರೆ, ಗಂಡ ಹೆಂಡತಿಗೆ ತಲಾಖ್ ಹೇಳಿ ವಿವಾಹ ವಿಚ್ಛೇದ ಮಾಡುವುದು ಅವಳು ಮುಟ್ಟಿನ ಕಾಲಾ ವಧಿ ಕಳೆದು ಶುದ್ಧಿಯಾಗಿ, ಅನಂತರ ಅವಳೊಡನೆ ಸಂಭೋಗ ನಡೆಸದಿರುವ ಸಂದರ್ಭದಲ್ಲಿ ಮಾತ್ರವೇ ಸಾಧ್ಯ ಎಂಬುದಾಗಿದೆ. ಈ ನಿಯಮವನ್ನನುಸರಿಸಿ ಒಬ್ಬ ಮುಸ್ಲಿಂ ತನ್ನ ಪತ್ನಿಯ ವಿವಾಹ ವಿಚ್ಛೇದ ಮಾಡುವುದಾದರೆ ಅದು ಅವಳು ಋತುಕಾಲ ಕಳೆದು ಶುದ್ಧಳಾಗಿ ಅವಳೊಡನೆ ರತಿ ಕ್ರೀಡೆ ಮಾಡದಿರುವ ಘಟ್ಟದಲ್ಲಿ ಆಗಬೇಕಾಗಿದೆ. ಪತ್ನಿ ರಜಸ್ವಲೆಯಾಗಿರುವ ಸಮಯದಲ್ಲಿ ಅಥವಾ ಮುಟ್ಟು ಕಳೆದು ಶುದ್ಧಳಾಗಿರುವ ಸಂದರ್ಭದಲ್ಲಿ ಅವಳೊಡನೆ ಸಂಸರ್ಗ ಮಾಡಿದ ಬಳಿಕ ಪತಿ ತಲಾಖ್ ಹೇಳುವುದಾದರೆ ಅದು ಸಿಂಧುವಾಗದು. ಈ ಬಗ್ಗೆ ಖುರ್‌ಆನ್ ಹೀಗೆ ಹೇಳುತ್ತದೆ: "ನೀವು ಮಡದಿಯರನ್ನು ಪರಿತ್ಯಜಿಸುವುದಾ ದರೆ ಅದಕ್ಕೆ ನಿರ್ಣಯಿಸಲಾದ ಕಾಲದಲ್ಲಿ ಅವರನ್ನು ಬಿಡಿರಿ. ಆ ನಿಗದಿತ ಕಾಲವನ್ನು ನೀವು ಲೆಕ್ಕ ಹಾಕಿರಿ. ನಿಮ್ಮ ರಕ್ಷಕ ನಾದ ಅಲ್ಲಾಹನ ಭಯ ನಿಮಗಿರಲಿ." (65:2)

ಈ ವಾಕ್ಯದಲ್ಲಿ ಹೇಳಲಾದ ನಿಗದಿತ ಕಾಲ ಯಾವು ದೆಂದು ಮುಹಮ್ಮದ್ ಪೈಗಂಬರರು ಸ್ಪಷ್ಟಪಡಿಸಿದ್ದಾರೆ.

ಹಝ್ರತ್ ಉಮರ್ (ರ) ಅವರ ಮಗ ಹಝ್ರತ್ ಅಬ್ದುಲ್ಲಾ(ರ) ತನ್ನ ಪತ್ನಿಯನ್ನು ಋತುಮತಿಯಾದ ಕಾಲದಲ್ಲಿ ತಲಾಖ್ ಹೇಳಿದುದಾಗಿ ಹಝ್ರತ್ ಉಮರ್ ಮೂಲಕ ತಿಳಿದಾಗ ಪೈಗಂಬರರು ಕೋಪಾವಿಷ್ಟರಾಗಿ ಹೀಗೆ ನುಡಿದರು : "ಆತನು ಆಕೆಯನ್ನು ವಾಪಾಸು ಸ್ವೀಕರಿಸಿ ತನ್ನೊಂದಿಗೆ ಇರಿಸಿಕೊಳ್ಳಲಿ; ನಂತರ ಆಕೆ ಶುದ್ಧಳಾಗಿ, ಇನ್ನೊಮ್ಮೆ ಮುಟ್ಟಾಗಿ ಶುದ್ಧಳಾದ ಬಳಿಕ, ಆಕೆಯನ್ನು ತ್ಯಜಿಸಲು ಬಯಸುವುದಾದರೆ ಆಕೆಯೊಡನೆ ಸಂಭೋಗ ಮಾಡದ ಸ್ಥಿತಿಯಲ್ಲಿ ಆತನು ಆಕೆಗೆ ವಿಚ್ಛೇದನ ನೀಡಲಿ. ಅಲ್ಲಾಹನು ವಿಧಿಸಿದ ಪ್ರಕಾರ ತಲಾಖಿಗಿರುವ ನಿಶ್ಚಿತ ಕಾಲ ಇದಾಗಿದೆ." (ಬುಖಾರಿ)

ಅತ್ಯಂತ ವಿಶ್ವಾಸಯೋಗ್ಯವಾದ ಬುಖಾರಿ, ಮುಸ್ಲಿಂ ಎಂಬೀ ಹದೀಸು ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ ಪ್ರವಾದಿ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ಒಬ್ಬ ಮುಸ್ಲಿಮನಿಗೆ ತನ್ನ ಪತ್ನಿಯನ್ನು ಅವಳು ಋತುಮತಿಯಾಗಿರುವ ಕಾಲದಲ್ಲಾಗಲಿ, ಮುಟ್ಟು ಕಳೆದು ಶುದ್ಧಕಾಲದಲ್ಲಿ ಅವಳೊಂದಿಗೆ ಸಂಭೋಗ ನಡೆಸಿದ ಸ್ಥಿತಿಯಲ್ಲಾಗಲಿ, ತಲಾಖ್ ಹೇಳಿ ವಿಚ್ಛೇದಗೊಳಿಸಬಾರದೆಂದಾಗಿದೆ. ಪವಿತ್ರ ಖುರ್ ಆನ್ ಹೇಳುತ್ತದೆ: "ತಲಾಖ್ ಪಡೆದ ಸ್ತ್ರೀಯರು ಮೂರು ಆರ್ತವಕಾಲ ಕಾಯಬೇಕಾಗಿದೆ"(2:229). ಈ ಖುರ್‌ಆನ್ ವಾಕ್ಯದಿಂದಲೂ ಸ್ತ್ರೀಯು ಮುಟ್ಟು ಕಳೆದು ಶುದ್ಧಳಾಗಿರುವ ಕಾಲದಲ್ಲೇ ವಿವಾಹ ವಿಚ್ಛೇದ ಮಾಡಬಹುದೆಂದು ತಿಳಿದು ಬರುತ್ತದೆ. ಹೀಗೆ ಸ್ತ್ರೀ ಮುಟ್ಟುಕಾಲ ಕಳೆದು ಶುಚಿಯಾದ ಕಾಲದಲ್ಲಿ ತಲಾಖ್ ಹೇಳಲಾಗುವುದಾದರೆ ಮಾತ್ರವೇ ಮೂರು ಋತುಕಾಲ ಕಳೆಯುವ ವರೆಗೆ ಅವಳು ಇನ್ನೊಬ್ಬ ಪತಿಯನ್ನು ವರಿಸಬಾರದೆಂಬ ಪ್ರಸ್ತುತ ಆಜ್ಞೆ ಅರ್ಥವತ್ತಾಗುತ್ತದೆ. ಒಟ್ಟಾರೆ, ಇಸ್ಲಾಮೀ ನಿಯಮವನ್ನನುಸರಿಸಿ, ಮೇಲೆ ವಿವರಿಸಿದ ವಿಧದಲ್ಲಿ ಹೊರತು, ಗಂಡ ಬಯಸುವ ಯಾವ ಸಮಯದಲ್ಲೂ ಹೆಂಡತಿಯೊಡನೆ "ನಾನು ನಿನ್ನನ್ನು ಪರಿತ್ಯಜಿಸುತ್ತೇನೆ"ಎಂದು ಹೇಳುವುದರಿಂದ ಮಾತ್ರ ವಿವಾಹ ಬಂಧ ಬೇರ್ಪಡುವುದಿಲ್ಲ; ಹಾಗೆ ಒಮ್ಮೆ ಹೇಳುವುದರಿಂದಾಗುವ ಅಗಲುವಿಕೆ ಇಸ್ಲಾಂ ಧರ್ಮದಲ್ಲಿರುವ ವಿವಾಹ ವಿಚ್ಛೇದನ ನಿಯಮ ಪ್ರಕಾರ ಸಿಂಧುವೆನಿಸುವುದಿಲ್ಲ. ಇಸ್ಲಾಂ ಇಂತಹ ನಿಯಮ ಇರಿಸಿಕೊಂಡಿರುವುದು ದಾಂಪತ್ಯಬಂಧವನ್ನು ಸುಲಭದಲ್ಲಿ ಮುರಿದುಬಿಡಲು ಅಸಾಧ್ಯವಾಗುವಂತೆ ಸುದೃಢಗೊಳಿಸಲಿಕ್ಕಾಗಿದೆ. ಮುಟ್ಟುಕಾಲದಲ್ಲಿ ಪತ್ನಿಯನ್ನು ಭೋಗಿಸಲು ಅನುಕೂಲ ಪರಿಸ್ಥಿತಿ ಇಲ್ಲವಾದುದರಿಂದ ಚಪಲ ಹೃದಯಿಯಾದ ಗಂಡ ಕ್ಷುಲ್ಲಕ ಕಾರಣಕ್ಕಾಗಿ ಅವಳಿಗೆ ತಲಾಖ್ ಕೊಡಲು ಪ್ರೇರಿತನಾಗಬಹುದು. ಆದರೆ ಅವಳು ಮುಟ್ಟು ಕಳೆದು ಶುದ್ಧಳಾಗಿರುವ ಸಂದರ್ಭದಲ್ಲಿ ಅವಳೊಡನೆ ರತಿಕ್ರೀಡೆ ನಡೆಸಲು ಅವನು ಪ್ರೇರಿತನಾಗುವುದರಿಂದ ಆ ಘಟ್ಟದಲ್ಲಿ ಅವನ ಕ್ಷೋಭವಿಕಾರ ಸ್ವಾಭಾವಿಕವಾಗಿಯೇ ಶಾಂತಗೊಂಡು ಅವನು ಅವಳನ್ನು ಪ್ರೀತಿಸಲಿಕ್ಕೆ ತೊಡಗುವುದು ಸಂಭವನೀಯ. ಹಾಗೆ ಅವರು ಪರಸ್ಪರ ಸರಸದಿಂದ ರತಿಕೇಳಿ ನಡೆಸಿದ ನಂತರ ಮತ್ತೂ ಯಾವುದೇ ಕಾರಣವಶಾತ್ ಪರಸ್ಪರ ಅಗಲುವರಾದರೆ, ಸಂಭೋಗ ಉಂಟಾದುದರಿಂದ ವಿವಾಹಬಂಧವನ್ನು ತುಂಡರಿಸುವುದು ನಿಯಮಬದ್ಧವಾಗುವುದಿಲ್ಲ. ಅದಕ್ಕೆ ಆತನು ಮುಂದಿನ ಋತುಕಾಲ ಕಳೆಯುವ ವರೆಗೆ, ಅಥವಾ ಸ್ತ್ರೀ ಗರ್ಭ ಧರಿಸಿದ್ದಾಳೆಯೇ ಎಂದು ತಿಳಿಯುವ ವರೆಗೆ ಕಾದಿರಬೇಕಾಗಿದೆ. ಇಷ್ಟು ಕಾಲದ ನಿರೀಕ್ಷೆಯೊಳಗೆ ಅವನ ಕೋಪ ಸಾಕಷ್ಟು ಶಾಂತಗೊಳ್ಳಲಿಕ್ಕೂ ಅವಳನ್ನು ತೊರೆಯಬೇಕೆಂಬ ಭಾವನೆಯಿಂದ ಅವನು ಹಿಮ್ಮೆಟ್ಟಲಿಕ್ಕೂ, ಹಾಗೆ ಅವರೊಳಗೆ ಅನ್ಯೋನ್ಯ ಇನ್ನೊಮ್ಮೆ ಸರಸವುಂಟಾಗಲಿಕ್ಕೂ ಹೇತುವಾಗಬಹುದು. ಆದ್ದರಿಂದಲೇ, ಸ್ತ್ರೀ ರಜಸ್ವಲೆಯಾಗಿರುವ ಕಾಲದಲ್ಲಾಗಲಿ, ಶುದ್ಧಿಕಾಲದಲ್ಲಿ ಸಂಭೋಗ ನಡೆದ ಸ್ಥಿತಿಯಲ್ಲಾಗಲಿ ಅವಳಿಗೆ ತಲಾಖ್ ಕೊಡಬಾರದೆಂದು ಇಸ್ಲಾಂ ಅನುಶಾಸಿಸುತ್ತದೆ. ಇದು ವಿವಾಹ ವಿಚ್ಛೇದವನ್ನು ಸಾಕಷ್ಟು ತಡೆಯುವ ಒಂದು ಉಪಾಯವೇ ಆಗಿದೆ.

ನಾಲ್ಕನೆಯದಾಗಿ, ವಿವಾಹಬಂಧವನ್ನು ಯಥೇಷ್ಟ ಮುರಿಯದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ನಿಯಮವೇನೆಂದರೆ, ತಲಾಖ್ ಪಡೆದ ಸ್ತ್ರೀ ಮೂರು ತಿಂಗಳ ತನಕ ಇನ್ನೊಬ್ಬ ಗಂಡನನ್ನು ವರಿಸಬಾರದೆಂದಾಗಿದೆ. (ಪವಿತ್ರ ಖುರ್‌ಆನ್–2:229). ಒಬ್ಬನು ಯಾವುದಾದರೂ ಕಾರಣದಿಂದ ತನ್ನ ಹೆಂಡತಿಯ ತಲಾಖ್ ಹೇಳುವುದಾದರೆ ಸಹ 'ಇದ್ದಃ' ಎಂದು ಕರೆಯಲಾಗುವ ಆ ನಿಗದಿತ ಕಾಲ— ಮೂರು ಮಾಸ–ಕಳೆಯುವುದಕ್ಕಿಂತ ಮೊದಲು ಬೇಕಾದರೆ ಆತನು ಆಕೆಯನ್ನು ಪುನಃ ಸ್ವೀಕರಿಸಬಹುದು. ಆತನು ತಾತ್ಕಾಲಿಕವಾದ ಕ್ಷೋಭವಿಕಾರದಿಂದಾಗಲಿ ಯಾವುದಾದರೂ ಕ್ಷುಲ್ಲಕ ಕಾರಣವನ್ನು ಆಸ್ಪದ ಮಾಡಿಯಾಗಲಿ ಹೆಂಡತಿಯ ತಲಾಖ್ ಹೇಳುವುದಾದರೆ, ಆ ಮೂರು ಮುಟ್ಟು ಕಾಲ ಕಳೆಯುವುದರೊಳಗೆ ಆತನು ಶಾಂತಚಿತ್ತನಾಗಲಿಕ್ಕೂ

ಮರುಚಿಂತನೆಯ ಫಲವಾಗಿ ಆತನ ಕೋಪ ಉಪಶಮನ ಗೊಳ್ಳಲಿಕ್ಕೂ, ಹಾಗೆ ಆತನು ಪತ್ನಿಯನ್ನು ವಾಪಾಸು ಸ್ವೀಕರಿಸಲಿಕ್ಕೆ ಪ್ರೇರಿತನಾಗಲಿಕ್ಕೂ ಅವಕಾಶವಿದೆಯಷ್ಟೇ. ಮೂರು ಋತುಘಟ್ಟ ಕಳೆದ ನಂತರ ಅವಳನ್ನು ಸ್ವೀಕರಿಸಲು ಆತನು ಇಚ್ಛಿಸುವನಾದರೆ, ಪುನರ್ವಿವಾಹ ಮೂಲಕ ಹಾಗೆ ಮಾಡಬಹುದಾಗಿದೆ. ಹೀಗೆ ಎರಡು ಸಲ ತಲಾಖ್ ಹೇಳಿದರೂ ಕಾಲಾವಧಿಯೊಳಗಾದರೆ, ಹೊಸ ವಿವಾಹ ಕರ್ಮವಿಲ್ಲದೆಯೂ ಕಾಲಾವಧಿಯ ಬಳಿಕವಾದರೆ ಹೊಸ ವಿವಾಹ ಕರ್ಮದ ಮೂಲಕವೂ ಆಕೆಯನ್ನೇ ಪುನಃ ಪತ್ನಿಯಾಗಿ ವರಿಸಬಹುದು. "ತಲಾಖ್ ಎರಡು ಸಲವಾಗಿದೆ; ನಂತರ ಒಂದೋ ನ್ಯಾಯೋಚಿತವಾಗಿ ಅವಳನ್ನು ಇರಿಸಿಕೊಳ್ಳಬೇಕು ಅಥವಾ ಒಳ್ಳೆಯ ರೀತಿಯಲ್ಲಿ ಬಿಡುಗಡೆ ಮಾಡಬೇಕು." (2:230) ಎಂಬ ಖುರ್‌ಆನ್ ವಾಕ್ಯದಿಂದ ಈ ವಿಚಾರ ಸ್ಪಷ್ಟವಾಗುತ್ತದೆ. "ನೀವು ಸ್ತ್ರೀಯರನ್ನು ತಲಾಖ್ ಹೇಳಿ ಪರಿತ್ಯಜಿಸಿ ಅವರ ಕಾಲಾವಧಿ ಕಳೆದರೆ, ನ್ಯಾಯೋಚಿತವಾಗಿ ಅನ್ಯೋನ್ಯ ಇಷ್ಟಪಡುವ ಪಕ್ಷದಲ್ಲಿ ಅವರು ಅವರ ಗಂಡಂದಿರನ್ನೇ ಮದುವೆಯಾಗುವುದರಿಂದ (ಎಲೈ ಸ್ತ್ರೀಯರ ಬಂಧುಗಳೇ) ನೀವು ಅವರನ್ನು ತಡೆಯಬಾರದು." (2:233) ಎಂಬ ಖುರ್‌ಆನ್ ವಾಕ್ಯದಲ್ಲಿ ತಲಾಖ್ ಪಡೆದ ಸ್ತ್ರೀಯರು ಅವರ ಕಾಲಾವಧಿ ಕಳೆದರೆ ತಮ್ಮನ್ನು ತಲಾಖ್ ಹೇಳಿ ಅಗಲಿದ ಗಂಡಂದಿರನ್ನೇ ಮದುವೆ ಮಾಡಿಕೊಳ್ಳಬಹುದೆಂದು ಪ್ರಸ್ತಾವಿಸಲಾದುದು, ಒಂದು ಸಲವಾಗಲಿ ಎರಡು ಸಲವಾಗಲಿ ತಲಾಖ್ ಕೊಟ್ಟು ಕಾಲಾವಧಿ ಪಡೆದ ಸ್ತ್ರೀಯರನ್ನು ಪುನಃ ವಿವಾಹ ಕರ್ಮ ಮೂಲಕ ಸ್ವೀಕರಿಸುವುದರ ಕುರಿತಾಗಿದೆ. ಪ್ರಸ್ತುತ ಖುರ್‌ಆನ್ ವಚನಕ್ಕೆ ಹಝ್ರತ್ ಇಬ್ನು ಅಬ್ಬಾಸ್(ರ) ಹೇಳಿರುವ ವ್ಯಾಖ್ಯಾನ ಈ ರೀತಿಯಾಗಿದೆ: "ಮೂರನೆಯ ಬಾರಿ ಒಬ್ಬನು ತನ್ನ ಪತ್ನಿಗೆ ತಲಾಖ್ ಹೇಳಿದರೆ, ನಂತರ ಅವನಿಗೆ ಅವಳನ್ನು ಪುನಃ ಹೆಂಡತಿಯಾಗಿ ಸ್ವೀಕರಿಸಲಾಗದು. ಆದರೆ ಇನ್ನೊಬ್ಬನು ಅವಳನ್ನು ಮದುವೆಯಾಗಿ ಪತ್ನಿಯಾಗಿ ಸ್ವೀಕರಿಸಿದ ಬಳಿಕ ಅವನು ಇಸ್ಲಾಮೀ ನಿಯಮಾನುಸಾರ ಸ್ವಇಚ್ಛೆಯಿಂದ ಅವಳಿಗೆ ತಲಾಖ್ ಹೇಳಿ ಬೇರ್ಪಟ್ಟು ಅವಳ 'ಇದ್ದಃ' ಎಂಬ ಕಾಲಾವಧಿ ಕಳೆದರೆ ಮಾತ್ರ ಮೊದಲಿನ ಗಂಡನಿಗೆ ಬೇಕೆಂದಾದರೆ ಅವಳನ್ನು ವಿವಾಹ ಮಾಡಿಕೊಳ್ಳಬಹುದು." ಆದ್ದರಿಂದಲೇ, ಎರಡು ಸಲ ತಲಾಖ್ ಹೇಳಿದ ಬಳಿಕ ಗಂಡ ಅವಳನ್ನು ನ್ಯಾಯೋಚಿತವಾಗಿ ಪತ್ನಿಯಾಗಿ ಇರಿಸಿಕೊಳ್ಳಬೇಕು ಅಥವಾ ಒಳ್ಳೆಯ ರೀತಿಯಲ್ಲಿ ಅವಳನ್ನು ಬಿಡುಗಡೆ ಮಾಡಬೇಕೆಂದು ಹೇಳಿದುದನ್ನು ಮುಂದುವರಿಸಿ ಪವಿತ್ರ ಖುರ್‌ಆನ್ ಈ ರೀತಿ ಹೇಳಿರುತ್ತದೆ : "ನಂತರ (ಮೂರನೆಯ ಸಲ) ಅವನು ಅವಳ ತಲಾಖ್ ಹೇಳುವುದಾದರೆ, ಆ ನಂತರ ಅವಳು ಅವನಿಗೆ ಹೆಂಡತಿಯಾಗಲಾರಳು, ಅವಳು ಇನ್ನೊಬ್ಬ ಗಂಡನನ್ನು ವರಿಸಿದ ಬಳಿಕ ಹೊರತು" (2:231). ಹೀಗೆ ಒಮ್ಮೆ ತಲಾಖ್ ಹೇಳಿದ ನಂತರ ನಿರ್ದಿಷ್ಟ ಕಾಲಾವಧಿಯೊಳಗಾದರೆ ಪುನರ್ವಿವಾಹದ ವಿನಾ ಮತ್ತು ಕಾಲಾವಧಿ ಕಳೆದರೆ ಪುನರ್ವಿವಾಹ ಮೂಲಕ, ಅದೇ ಪ್ರಕಾರವೇ ಎರಡನೇ ಸಲ ತಲಾಖ್ ಹೇಳಿದರೂ ಕಾಲಾವಧಿಯೊಳಗೆ ವಿವಾಹ ಇಲ್ಲದೆಯೂ ಕಾಲಾವಧಿ ಕಳೆದರೆ ವಿವಾಹ ಮೂಲಕವೂ ಅವಳನ್ನು ಮತ್ತೊಮ್ಮೆ ಪತ್ನಿಯಾಗಿ ಸ್ವೀಕರಿಸಬಹುದೆಂದು ಇಸ್ಲಾಂ ನಿರ್ದೇಶಿಸಿರುವುದು ಪತಿ-ಪತ್ನಿಯರು ಸಾಧ್ಯವಿದ್ದಷ್ಟರ ಮಟ್ಟಿಗೆ ದಾಂಪತ್ಯಬಂಧವನ್ನು ಪಾಲಿಸಿಕೊಂಡು ಹೋಗಲಿಕ್ಕೇ ಆಗಿದೆ. ಒಟ್ಟಾರೆ, ಇಸ್ಲಾಮಿನ ಈ ನಿಯಮವು ವಿವಾಹಬಂಧವನ್ನು ಕೊನೆಗೊಳಿಸದಿರಲಿಕ್ಕಾಗಿ ಅದು ನಿರ್ದೇಶಿಸುವ ಒಂದು ಉಪಾಯವೆಂದೇ ಹೇಳಬಹುದು. ಗಂಡ-ಹೆಂಡಿರು ತಮ್ಮ ಈ ಸಂಬಂಧವನ್ನು ಬೇರ್ಪಡಿಸಿ ಇನ್ನೊಮ್ಮೆ ಅವರು ತಮ್ಮೊಳಗೆ ಒಂದುಗೂಡಲಿಕ್ಕೆ ಒಂದು ಸೀಮೆಯನ್ನು ನಿಶ್ಚಯಿಸದಿದ್ದ ಪಕ್ಷದಲ್ಲಿ ವಿವಾಹಬಂಧವು ಅರ್ಥರಹಿತವೂ ವಿವಾಹ ವಿಚ್ಛೇದನ ವಿನೋದವೂ ಆಗಿ ಮಾರ್ಪಡುವುವು. ಆದುದರಿಂದ, ಎರಡು ಸಲ ತಲಾಖ್ ಹೇಳಿಬಿಟ್ಟ ಹೆಂಡತಿಯನ್ನು ತಿರುಗಿ ಸ್ವೀಕರಿಸಬಹುದಾದರೂ, ಮೂರನೆಯ ಬಾರಿ ತಲಾಖ್ ಹೇಳಿದರೆ ನಂತರ ಅವಳನ್ನು ಆ ರೀತಿಯಲ್ಲಿ ತಿರುಗಿ ಪಡೆಯುವ ಹಕ್ಕು ಇಲ್ಲದಾಗುತ್ತದೆಂದು ಇಸ್ಲಾಂ ವಿಧಿಸಿರುತ್ತದೆ. ಆದ್ದರಿಂದಲೇ, ಮೂರನೆಯ ಬಾರಿ ತಲಾಖ್ ಪಡೆದ ಸ್ತ್ರೀಯನ್ನು ಪುನಃ ವರಿಸುವುದರ ಕುರಿತು ಪ್ರಸ್ತುತ ಖುರ್‌ಆನ್ ವಚನದಲ್ಲಿ ಪ್ರಸ್ತಾಪಿಸಲಾಗಿದೆಯೆಂದು ಹೇಳುವುದು ಸಹ.

ಐದನೆಯದಾಗಿ, ವಿವಾಹಬಂಧವನ್ನು ಕೊನೆಗೊಳಿಸದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ನಿಯಮವೇನೆಂದರೆ, ಒಬ್ಬನು ತನ್ನ ಪತ್ನಿಯನ್ನು ಒಂದೇ ಸಂದರ್ಭದಲ್ಲಿ ಮೂರು ಬಾರಿ ತಲಾಖ್ ಹೇಳಬಾರದೆಂದಾಗಿದೆ. ಗಂಡನು ಎಷ್ಟು ಅವಿವೇಕಿಯೂ ಕ್ಷುಭಿತನೂ ಆಗಿದ್ದರೂ ಅವನಿಗೆ ತನ್ನ ಹೆಂಡತಿಯನ್ನು ಕ್ಷುಲ್ಲಕ ಕಾರಣಕ್ಕಾಗಿ ಬೇರ್ಪಡಿಸಲು

ಸಾಧ್ಯವಾಗದಿರಲಿಕ್ಕಾಗಿಯೇ ಒಮ್ಮೆಲೇ ಮೂರು ತಲಾಖ್ ಸಹ ಹೇಳಬಾರದೆಂದು ಇಸ್ಲಾಂ ವಿಧಿಸುತ್ತದೆ. ತಾತ್ಕಾಲಿಕವಾದ ಉದ್ವೇಗದಿಂದ ಒಬ್ಬನು ಪತ್ನಿಗೆ ತಲಾಖ್ ಹೇಳುವುದಾದರೆ ಕೂಡ ಅವನಿಗೆ ಒಂದು ಸಂದರ್ಭದಲ್ಲಿ ಒಮ್ಮೆ ಮಾತ್ರ ತಲಾಖ್ ಹೇಳಲು ಸಾಧ್ಯ. ಹಾಗೆ ಒಮ್ಮೆ ತಲಾಖ್ ಹೇಳಿದರೆ, ಅವನಿಗೆ ಕಾಲಾವಧಿಯೊಳಗೆ ಬೇರೆ ವಿವಾಹ ಕರ್ಮವಿಲ್ಲದೆಯೂ ಕಾಲಾವಧಿ ಕಳೆದರೆ ಹೊಸ ವಿವಾಹ ಕರ್ಮದ ಮೂಲಕವೂ ಅವಳನ್ನು ಪುನಃ ಪತ್ನಿಯಾಗಿ ಸ್ವೀಕರಿಸಬಹುದು. ಹೀಗೆ ಎರಡು ಸಲ ಆಗಬಹುದೆಂದು ಇಸ್ಲಾಂ ಸಮ್ಮತಿಸುತ್ತದೆ. ಇಷ್ಟು ಅನುಕೂಲತೆ ಲಭಿಸಿಯೂ ಅವನು ಮೂರನೆಯ ಸಲ ಸಹ ಹೆಂಡತಿಗೆ ತಲಾಖ್ ಹೇಳಿ ಅಗಲುವುದಾದರೆ ಮಾತ್ರ ನಂತರ ಅವನಿಗೆ ಅವಳನ್ನು ಸ್ವೀಕರಿಸಲಿಕ್ಕೆ ಸಾಧ್ಯವಿಲ್ಲ. ಒಂದೇ ಸಂದರ್ಭದಲ್ಲಿ ಮೂರು ಸಲ ತಲಾಖ್ ಹೇಳುವುದು ಇಸ್ಲಾಮಿಕ ಅಧ್ಯಾಪನಗಳಿಗೆ ವಿರುದ್ಧ. ಈ ಸತ್ಯಾಂಶ, "ತಲಾಖ್ ಎರಡು ಸಲವಾಗಿದೆ. ನಂತರ ಒಂದೋ ಅವಳನ್ನು ನ್ಯಾಯೋಚಿತವಾಗಿ ಇರಿಸಿಕೊಳ್ಳಬೇಕು ಅಥವಾ ಔದಾರ್ಯಪೂರ್ವಕ ಬಿಟ್ಟುಬಿಡಬೇಕು" (2:230) ಎಂಬ ಖುರ್‌ಆನ್ ವಾಕ್ಯದಿಂದ ಸ್ಪಷ್ಟವಾಗಿಯೂ, ತಲಾಖ್ ಹೇಳಿದ ಬಳಿಕ ಕಾಲಾವಧಿ ಪಡೆದ ಸ್ತ್ರೀಯನ್ನು ಪುನಃ ವಿವಾಹವಾಗಬಹುದು (2:233) ಎಂದೂ ಮೂರನೆಯ ತಲಾಖ್ ಹೇಳಿದ ಬಳಿಕ ಅವಳನ್ನು ವಿವಾಹವಾಗಬಾರದು (2:231) ಎಂಬ ಖುರ್‌ಆನ್ ವಚನಗಳಿಂದ ಸೂಚ್ಯವಾಗಿಯೂ ಗ್ರಾಹ್ಯವಾಗುತ್ತದೆ. ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಹೇಳಬಾರದೆಂದು ಪ್ರವಾದಿ ಮುಹಮ್ಮದ್ (ಸ) ಸಹ ಹೇಳಿದ್ದಾರೆ. ಒಂದು ಹದೀಸ್ ಈ ರೀತಿ ಇದೆ: "ಒಬ್ಬನು ತನ್ನ ಪತ್ನಿಗೆ ಒಂದೇ ಸಂದರ್ಭದಲ್ಲಿ ಮೂರು ಸಲ ತಲಾಖ್ ಹೇಳಿದುದಾಗಿ ಮುಹಮ್ಮದ್ ಪೈಗಂಬರರು ಅರಿತಾಗ ಅವರು ಕೋಪದಿಂದ ಎದ್ದು ನಿಂತುಕೊಂಡು, 'ನಾನು ನಿಮ್ಮ ಮಧ್ಯೆ ಇರುವಾಗಲೇ ಮಹಾಮಹಿಮನಾದ ಅಲ್ಲಾಹನ ಗ್ರಂಥದೊಂದಿಗೆ ಆತನು ವಿನೋದವಾಡುವುದೇ?' ಎಂದು ನುಡಿದರು." (ನಸಾಯೀ). ಇದರಿಂದ ಒಮ್ಮೆಲೇ ಮೂರು ತಲಾಖ್ ಹೇಳುವುದನ್ನು ಮುಹಮ್ಮದ್‌ಪೈಗಂಬರರು ವಿರೋಧಿಸಿರುವರು ಎಂದು ಮಾತ್ರವಲ್ಲ, ಅದು ಅಲ್ಲಾಹನ ಗ್ರಂಥವಾದ ಪವಿತ್ರ ಖುರ್‌ಆನಿನ ಉಪದೇಶವನ್ನು ನಿರ್ಲಕ್ಷ್ಯ ಮಾಡಿ ಅದನ್ನು ಆಟಿಕೆಯನ್ನಾಗಿ ಮಾಡುವ ಒಂದು ಪ್ರವೃತ್ತಿ ಕೂಡ ಆಗಿದೆಯೆಂದು ಮನದಟ್ಟಾಗುತ್ತದೆ,

ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಸಹ ಹೇಳಬಾರದೆಂದೂ, ಹೇಳಿದರೆ ಸಹ ಅದನ್ನು ಒಂದು ತಲಾಖ್ ಮಾತ್ರವೆಂದು ಗಣಿಸಲಾಗುವುದೆಂದೂ ಇಸ್ಲಾಂ ಕಲಿಸುತ್ತದೆ.

ಹದೀಸಿನ ಪಂಡಿತರಾದ ಕೆಲವರೂ ಇಮಾಮಿಯ್ಯ ಪಂಥದವರೂ ಅಹ್ಲುಬೈತಿಗೆ ಸೇರಿದ ಕೆಲವರೂ ಇಮಾಂ ಇಬ್ನು ಹಸ್ಮ್ ಮೊದಲಾದವರೂ, ಒಂದೇ ಕಾಲದಲ್ಲಿ ಒಮ್ಮೆಲೇ ಹೇಳಲ್ಪಡುವ ಮೂರು ತಲಾಖ್ ನಿಯಮ ವಿರುದ್ಧವಾದುದರಿಂದ ಒಂದು ತಲಾಖ್ ಸಹ ಆಗಲಾರದೆಂದು ಹೇಳಿದ್ದಾರೆ. ಹದೀಸಿನ ಪಂಡಿತರಲ್ಲಿ ಅಧಿಕಾಂಶರೂ ಹಝ್ರತ್ ಮುಹಮ್ಮದಿಬ್ನು ಇಸ್‌ಹಾಕ್, ಅತ್ವಾ, ಇಕ್ರಿಮ ಮುಂತಾದ ತಾಬಿಯೀಗಳೂ, ಇಬ್ನು ತೀಮಿಯ್ಯ, ಇಬ್ನು ಖಯ್ಯಿಂ, ಮುಹಮ್ಮದಿಬ್ನು ಇಬ್ರಾಹೀಂ, ಶೌಕಾನಿ ಮೊದಲಾದ ಪಂಡಿತರೂ, ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖ್ ಒಂದು ತಲಾಖ್ ಎಂದೇ ಪರಿಗಣಿಸಲಾಗುವುದೆಂದು ಹೇಳಿದ್ದಾರೆ. ಹಝ್ರತ್ ಇಬ್ನು ಅಬ್ಬಾಸ್‌ರವರ ಅಭಿಪ್ರಾಯ ಸಹ ಇದೇ ಪ್ರಕಾರವಾಗಿತ್ತೆಂದು ಒಂದು ಹೇಳಿಕೆಯಿಂದ ಮನವರಿಕೆಯಾಗುತ್ತದೆ. ಮಾತ್ರವಲ್ಲ, ಅವರು ನಿವೇದಿಸಿದ ಒಂದು ಹದೀಸಿನಲ್ಲಿ, ಒಂದೇ ಸಮಯದಲ್ಲಿ ಹೇಳುವ ಮೂರು ತಲಾಖ್ ಒಂದೆಂದು ಮಾತ್ರ ಎಣಿಸಲಾಗುವುದೆಂದು ಮುಹಮ್ಮದ್ ಪೈಗಂಬರರು ನುಡಿದಿದ್ದಾರೆಂದು ಪ್ರಸ್ತಾವಿಸಲಾಗಿದೆ.

ಆರನೆಯದಾಗಿ, ಇಚ್ಛಾನುಸಾರ ವಿವಾಹ ವಿಚ್ಛೇದಗೊಳಿಸದಿರಲಿಕ್ಕೆ ಇಸ್ಲಾಂ ನಿರ್ದೇಶಿಸಿರುವ ಉಪಾಯ, ಮೂರು ಸಲ ತಲಾಖ್ ಹೇಳಿ ಪರಿತ್ಯಜಿಸಿದ ಪತ್ನಿಯನ್ನು ಪುನಃ ಮೊದಲ ಪತಿ ಸ್ವೀಕರಿಸಬಾರದೆಂಬ ನಿಯಮವಾಗಿದೆ. ಮತ್ತೆ ಅವನಿಗೆ ಅವಳು ಸ್ವೀಕರಿಸಲರ್ಹಳಾಗಬೇಕಾದರೆ, ಬೇರೊಬ್ಬನು ಅವಳನ್ನು ಮದುವೆಯಾಗಿ ಆವನು ಅವಳನ್ನು ಸ್ವಂತ ಇಚ್ಛೆಯಿಂದ ತಲಾಖ್ ಹೇಳಿ ಬಿಡುಗಡೆ ಮಾಡಬೇಕಾಗಿದೆ. ಅಂದರೆ, ಮೊದಲ ಗಂಡ ಅವಳನ್ನು ತನ್ನ ಸಹಧರ್ಮಿಣಿಯನ್ನಾಗಿ ಮಾಡಲು ಸ್ವಇಚ್ಛೆಯಿಂದ ಮದುವೆಯಾಗಿರುವ ಪ್ರಕಾರವೇ; ಅವರು ತಮ್ಮ ದಾಂಪತ್ಯಬಂಧ ಮುರಿದ ಬಳಿಕ, ಇನ್ನೊಬ್ಬನು ಅವಳನ್ನು ಎಂದೆಂದಿಗೂ ತನ್ನ ಸಹಧರ್ಮಿಣಿ ಮಾಡುವ ಉದ್ದೇಶದಿಂದ ಮದುವೆ ಮಾಡಿಕೊಂಡು, ಅನಂತರ ಇವರಿಗೆ ವಿವಾಹಬಂಧ

ವನ್ನು ನಿರಾತಂಕವಾಗಿ ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಾಗುವಾಗ ಈ ಎರಡನೆಯ ಗಂಡ ಸ್ವಇಚ್ಛೆ ಯಿಂದ ಅವಳನ್ನು ಪರಿತ್ಯಜಿಸಿದರೆ ಮಾತ್ರ ಮೊದಲ ಪತಿಗೆ ಬೇಕಾದರೆ ಅವಳನ್ನು ಮದುವೆಯಾಗಿ ತನ್ನ ಹೆಂಡತಿಯನ್ನಾಗಿ ಸ್ವೀಕರಿಸಬಹುದು. ಹೀಗೆ ಇಸ್ಲಾಂ ಒಂದು ನಿಯಮವನ್ನು ನಿರ್ದೇಶಿಸಿರುವುದು, ಗಂಡ ಹೆಂಡತಿಯನ್ನು ಸಾಧ್ಯವಾದಷ್ಟರ ಮಟ್ಟಿಗೆ ವಿವಾಹ ವಿಚ್ಛೇದನ ಮಾಡದಿರಲಿಕ್ಕೇ ಆಗಿದೆ. ಏಕೆಂದರೆ, ಎರಡನೆ ಪತಿ ಅವಳನ್ನು ಪರಿತ್ಯಜಿಸಿದ ನಂತರ ಮೊದಲ ಪತಿಗೆ ಪುನಃ ಅವಳನ್ನು ವಿವಾಹ ಮಾಡಿಕೊಳ್ಳಲು ಸಾಧ್ಯವಾಗುವ ಸಂದರ್ಭ ಬಹಳ ಅಪೂರ್ವವಾಗಿ ಮಾತ್ರ ಲಭಿಸಬಹುದು. ಆದ್ದರಿಂದ, ಮೂರು ತಲಾಖ್ ಸಹ ಹೇಳಿಬಿಟ್ಟರೆ, ನಂತರ ಪತ್ನಿಯನ್ನು ಪುನಃ ಸ್ವೀಕರಿಸಲಿಕ್ಕೆ ತನಗೆ ಅಸಾಧ್ಯವಾಗಬಹುದೆಂದು ಹೆದರಿ ಪತಿ ಅವಳಿಗೆ ಮೂರು ತಲಾಖ್ ಕೂಡಾ ಹೇಳಿ ಅಗಲುವುದರ ಬಗ್ಗೆ ಜಾಗ್ರತೆ ವಹಿಸುತ್ತಾನೆ.

ಒಟ್ಟಿನಲ್ಲಿ, ಪತಿ ಇಷ್ಟ ಬಂದಾಗ ತನ್ನ ಪತ್ನಿಯ ತಲಾಖ್ ಹೇಳುವುದರಿಂದ ಅವರ ವಿವಾಹಬಂಧ ಬೇರ್ಪಡುವುದೆಂದೂ ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖ್ ಮೂರಾಗಿಯೇ ಗಣಿಸಲಾಗುವುದೆಂದೂ ಮುಸ್ಲಿಮರು ಸರ್ವಸಾಮಾನ್ಯವಾಗಿ ಅಂಗೀಕರಿಸಿರುವರಾದರೂ ಅದು ಇಸ್ಲಾಮಿನ ಅಧ್ಯಾಪನಕ್ಕೆ ವಿರುದ್ಧವಾದುದರಿಂದ ಇಸ್ಲಾಮಿಕ ನಿಯಮವಾಗುವುದೇ ಇಲ್ಲ.

ಇಸ್ಲಾಮಿನ ಅಧ್ಯಾಪನ ಪ್ರಕಾರ ಯಾರಿಗೂ ತನ್ನ ಪತ್ನಿಯನ್ನು ಯಥೇಷ್ಟ ತಲಾಖ್ ಹೇಳಿ ಬಿಟ್ಟುಬಿಡಲಿಕ್ಕೆ ಆಗದೆಂದೂ ಯೋಗ್ಯ ಕಾರಣದಿಂದ, ಅದು ಸಹ ಕೆಲವು ಪ್ರತ್ಯೇಕ ನಿಬಂಧನೆಗಳಿಗೆ ವಿಧೇಯವಾದ ತರದಲ್ಲಿಮಾತ್ರವೇ ಹಾಗೆ ಮಾಡಬಹುದೆಂದೂ ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ; ಮಾತ್ರವಲ್ಲ, ಯಾರೂ ತಲಾಖ್ ಹೇಳುವುದು ಸ್ವಂತ ಇಷ್ಟಾನುಸಾರವೂ ಪ್ರಜ್ಞಾಸಹಿತವಾಗಿಯೂ ಆಗಿರಬೇಕೆಂದು ಸಹ ಅದರಿಂದ ಮನಗಾಣಬಹುದು. ಆದ್ದರಿಂದ, ಗಂಡ ಹೆಂಡತಿಯೊಡನೆ ನಾನು ನಿನ್ನ ವಿವಾಹಬಂಧವನ್ನು ಮುರಿದಿದ್ದೇನೆ ಎಂದು ಮೂರು ಬಾರಿ ಒಂದೇಸವನೆ ಹೇಳಿದರೆ ಅದರಿಂದ ಆ ದಾಂಪತ್ಯಬಂಧ ಬೇರ್ಪಡುವುದಿಲ್ಲ. ಹಾಗೆಯೇ ಒಬ್ಬನು ಮದ್ಯದ ಅಮಲಿನಲ್ಲಿ ಹೇಳಿದರೆ ಸಹ ಇಸ್ಲಾಮಿಕ ನಿಯಮ ಪ್ರಕಾರ ಅದು ಸಿಂಧುವಾಗುವುದಿಲ್ಲ. ಒಬ್ಬ ಮುಸ್ಲಿಂ ಮದ್ಯಪಾನ ಮಾಡುವುದು ಯಾವ ರೀತಿ ಇಸ್ಲಾಮಿಕ ಪ್ರವೃತ್ತಿಯಲ್ಲವೋ ಅದೇ ರೀತಿ ಮದ್ಯದ ಗುಂಗಿನಲ್ಲಿ ಅವನು ತನ್ನ ಹೆಂಡತಿಗೆ ತಲಾಖ್ ನೀಡಿ ಅಗಲುವುದು ಇಸ್ಲಾಮಿಕವಲ್ಲ. ಒಟ್ಟಾರೆ, ಹಾಗೆ ಮತ್ತೇರಿದ ಸಂದರ್ಭದಲ್ಲಿ ಹೇಳುವ ತಲಾಖ್ ಸಿಂಧುವಾಗದು. ತಲಾಖ್ ಹೇಳುವುದು ದಾಂಪತ್ಯ ಜೀವನವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದ ಹಂತದಲ್ಲಿ ಮಾತ್ರವಾಗಿರಬೇಕು ಹಾಗೂ ಮುಟ್ಟಾದ ಕಾಲದಲ್ಲಾಗಲಿ ಸಂಯೋಗ ಉಂಟಾದ ಶುದ್ಧಿಕಾಲದಲ್ಲಾಗಲಿ ತಲಾಖ್ ಹೇಳಬಾರದೆಂಬ ಇಸ್ಲಾಮಿನ ಉಪದೇಶದಿಂದಲೇ, ಮದ್ಯದ ಮತ್ತಿನಲ್ಲಿ ಹೇಳುವ ತಲಾಖ್ ಸಿಂಧುವಾಗದೆಂದು ಮನವರಿಕೆಯಾಗುತ್ತದೆ. ಏಕೆಂದರೆ ಮತ್ತೇರಿ ತಲೆಗೆ ನಿಯಂತ್ರಣವಿಲ್ಲದ ಯಾವನಾದರೂ ಈ ನಿಬಂಧನೆಗಳನ್ನು ಪಾಲಿಸಲಿಕ್ಕೆ ಸಾಧ್ಯವಿಲ್ಲ. ಮಾತ್ರವಲ್ಲ, ಇಸ್ಲಾಂ ಧರ್ಮದ ಅಧ್ಯಾಪನ ಪ್ರಕಾರ, ಒಬ್ಬನು ಮಾಡಿದ ಕೆಲಸ ಅವನದೆಂದು ಗಣಿಸಲ್ಪಡಬೇಕಾದರೆ ಅದು ಅವನು ಸ್ವತಂತ್ರ ಬುದ್ಧಿಯಿಂದಲೂ ಯಾರ ನಿರ್ಬಂಧವಾಗಲಿ ಪ್ರೇರಣೆಯಾಗಲಿ ಇಲ್ಲದೆಯೂ ಮಾಡಿರಬೇಕಾಗಿದೆ. ಈ ನಿಯಮ ಪ್ರಕಾರ ಮದ್ಯದ ಅಮಲಿನಲ್ಲಿ ಹೇಳುವ ತಲಾಖ್ ಇಸ್ಲಾಮಿಕ ತಲಾಖ್ ಎಂದು ಗಣಿಸಲ್ಪಡಲಾರದು. ಮಾತ್ರವಲ್ಲ, ಪ್ರವಾದಿ ಮುಹಮ್ಮದ್(ಸ) ಹೀಗೆ ನುಡಿದಿದ್ದಾರೆ: "ಬುದ್ಧಿ ಸ್ವಾಧೀನದಲ್ಲಿಲ್ಲದವನ ಮತ್ತು ಭ್ರಾಂತನ ತಲಾಖ್ ಹೊರತು ಎಲ್ಲಾ ತಲಾಖ್ ಸಮ್ಮತನೀಯ" (ತಿರ್ಮಿದಿ). "ನಿರ್ಬಂಧಪೂರ್ವಕವಾದ ತಲಾಖ್ ನ್ಯಾಯಬದ್ಧವಲ್ಲ" (ಅಬೂ ದಾವೂದ್). ಬುದ್ಧಿ ಸ್ಥಿಮಿತದಲ್ಲಿಲ್ಲದವರು ಹೇಳುವ ತಲಾಖ್ ಸಿಂಧುವಾಗದೆಂದು ಹಝ್ರತ್ ಉಸ್ಮಾನ್, ಹಝ್ರತ್ ಅಲೀ, ಹಝ್ರತ್ ಇಬ್ನು ಅಬ್ಬಾಸ್ ಮೊದಲಾದ ಮಹನೀಯರು ಹೇಳಿರುವರೆಂದು ಇಮಾಂ ಬುಖಾರಿ ತನ್ನ ಹದೀಸ್ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಒಟ್ಟಿನಲ್ಲಿ ಮದ್ಯದ ಮತ್ತಿನಲ್ಲಿ ಹೇಳುವ ತಲಾಖ್ ಎಂದಿಗೂ ಇಸ್ಲಾಮಿನ ದೃಷ್ಟಿಯಲ್ಲಿ ಧರ್ಮಬದ್ಧವಲ್ಲ.

ಇನ್ನು, ತಲಾಖ್ ಹೇಳಿ ಬಿಡುಗಡೆಗೊಳಿಸಿದ ಪತ್ನಿಯನ್ನು ಪುನಃ ಮೊದಲನೆಯ ಪತಿಯೇ ಸ್ವೀಕರಿಸುವುದರ ಕುರಿತು ಇಸ್ಲಾಂ ಕಲಿಸುವುದೇನೆಂದು ನೋಡೋಣ:

ವಿವಾಹ ವಿಚ್ಛೇದನ ಸಂಪೂರ್ಣವಾದ ನಂತರ ಯಾವೊಬ್ಬನಾದರೂ ತನ್ನ ಹೆಂಡತಿಯನ್ನು ಪುನಃ ಪಡೆ

ಯಲು ಬಯಸುವುದಿದ್ದರೆ, ಅವನು ತಲಾಖ್ ಕೊಟ್ಟ ಪತ್ನಿಯನ್ನು ಇನ್ನೊಬ್ಬನಿಗೆ ಮದುವೆ ಮಾಡಿಸಿ ಅವನಿಂದ ತಲಾಖ್ ಹೇಳಿಸಿದ ನಂತರ ಮೊದಲ ಗಂಡನಿಗೆ ಅವಳನ್ನು ಪಡೆಯಲು ಸಾಧ್ಯವೆಂದು ಹೇಳಲ್ಪಡುತ್ತದೆ.

ಒಬ್ಬನು ತಾನು ಬಿಟ್ಟ ಹೆಂಡತಿಯನ್ನು ಪುನ: ಪಡೆಯಲಿಕ್ಕಾಗಿ ಅವಳನ್ನು ಇನ್ನೊಬ್ಬನಿಗೆ ಮದುವೆ ಮಾಡಿಸಿ ಕೊಡಬೇಕೆಂಬ ನಿಯಮ ಇಸ್ಲಾಂ ಧರ್ಮದಲ್ಲಿಲ್ಲ. ಬದಲಿಗೆ, ಹಾಗೆ ಮಾಡುವುದು ಮಹಾ ಪಾಪವೂ ಅನ್ಯಾಯವೂ ಎಂದು ಇಸ್ಲಾಂ ಬೋಧಿಸುತ್ತದೆ. ಆದರೆ ನಿರ್ಭಾಗ್ಯವಶಾತ್ ಇಂದು ಮುಸ್ಲಿಮರು ಧರ್ಮವಿರುದ್ಧವಾದ ಈ ನಿಷಿದ್ಧ ಸಂಪ್ರದಾಯವನ್ನು ಇಸ್ಲಾಮಿಕ ವಿಧಿಯೆಂಬ ರೀತಿಯಲ್ಲಿ ಸ್ವೀಕರಿಸಿ ಅದನ್ನು ಮುಸ್ಲಿಂ ಪಂಡಿತರು ಸಮರ್ಥಿಸಿರುವುದರಿಂದ, ಯಾರಾದರೂ ಈ ರೂಢಿಯನ್ನು ಇಸ್ಲಾಮಿಕವೆಂದು ಭಾವಿಸಿದರೆ ಆಶ್ಚರ್ಯಪಡಲಿಕ್ಕಿಲ್ಲ. ಅಮುಸ್ಲಿಮರು ಮಾತ್ರವಲ್ಲ. ಮುಸ್ಲಿಮರು ಸಹ ಸಾಮಾನ್ಯವಾಗಿ ಈ ನಿಕೃಷ್ಟ ಆಚಾರವನ್ನು ಇಸ್ಲಾಮಿನ ಒಂದು ವಿಧಿಯೆಂದು ತಿಳಿದುಕೊಂಡಿದ್ದಾರೆ. ಅದು ಖಂಡಿತವಾಗಿ ನಿರಪರಾಧಿಯಾದ ಹೆಣ್ಣಿನ ಶೋಷಣೆಗೂ ಮಾನಹಾನಿಗೂ ಕಾರಣವಾಗುತ್ತದೆ. ಒಬ್ಬನು ಅವಿವೇಕದಿಂದಾಗಲಿ ಕ್ಷೋಭವಿಕಾರದಿಂದಾಗಲಿ ತನ್ನ ಹೆಂಡತಿಗೆ ತಟ್ಟನೆ ಮೂರು ತಲಾಖ್ ಸಹ ಹೇಳಿ ಪರಿತ್ಯಜಿಸಿ, ಮರುಕ್ಷಣದಲ್ಲಿ ಅವಳನ್ನು ತಿರುಗಿ ಪಡೆಯಲು ಬಯಸುವುದಿದ್ದರೆ ಅವಳು ಒಂದು ರಾತ್ರಿಯಾದರೂ ಇನ್ನೊಬ್ಬ ಗಂಡನನ್ನು ವರಿಸಬೇಕೆಂದೂ, ಹಾಗೆ ಆದರೆ ಮಾತ್ರ ಮೊದಲ ಗಂಡನಿಗೆ ಅವಳನ್ನು ಸ್ವೀಕರಿಸಲು ಸಾಧ್ಯವೆಂದೂ ಹೇಳುವುದು ಖಂಡಿತವಾಗಿಯೂ ಅವಳ ಮಾನಹಾನಿಗೆ ಕಾರಣವಾಗುತ್ತದೆಂದು ಆಲೋಚಿಸುವವರಿಗೆ ಮನವರಿಕೆಯಾಗಬಹುದು. ಇಸ್ಲಾಮಿಗೆ ಮೊದಲು, ಈ ನಿಷಿದ್ಧ ಆಚಾರ ಅರಬ್ ರಾಜ್ಯದಲ್ಲಿ ವಾಡಿಕೆಯಲ್ಲಿತ್ತು. ಪ್ರವಾದಿ ಮುಹಮ್ಮದ್(ಸ)ರವರು ಈ ದುರಾಚಾರವನ್ನು ಕಠಿಣವಾಗಿ ವಿರೋಧಿಸಿ ಕೊನೆಗೊಳಿಸಿದರು. ಆದರೆ ಅಕಟಾ! ಕಾಲಾಂತರದಲ್ಲಿ ಆ ಪುಣ್ಯಪುರುಷರ ಅನುಯಾಯಿಗಳೆಂದು ಅಭಿಮಾನಗೊಳ್ಳುವವರು ಧರ್ಮವಿರುದ್ಧವಾದ ಹಲವು ಆಚಾರಾನುಷ್ಠಾನಗಳನ್ನು ಕೈಗೊಳ್ಳುವುದರೊಂದಿಗೆ ನಿಷಿದ್ಧವೂ ನಿಕೃಷ್ಟವೂ ಆದ ಈ ಸಂಪ್ರದಾಯವನ್ನು ಸಹ ಅಂಗೀಕರಿಸಿದರು. ಇದು ಇಸ್ಲಾಂ ಕಠಿಣವಾಗಿ ವಿರೋಧಿಸಿದ್ದೆಂದು ತಿಳಿದಿದ್ದೂ ಮತಪಂಡಿತರು ಅದಕ್ಕೆ ಸೈಗೊಡುತ್ತಾರೆ. ಈ ಪ್ರವೃತ್ತಿ ದೇವಶಾಪಕ್ಕೆ ಕಾರಣವಾಗುವುದೆಂದು ಮುಹಮ್ಮದ್ ಪೈಗಂಬರರು ಎಚ್ಚರಿಕೆ ನೀಡಿದ್ದಾರೆ. ಒಂದು ನಿವೇದನದಲ್ಲಿ ಹಝ್ರತ್ ಇಬ್ನು ಮಸ್‌ಊದ್(ರ) ಹೀಗೆ ಹೇಳಿದ್ದಾರೆ : "ತ್ಯಜಿಸಲ್ಪಟ್ಟ ಪತ್ನಿಯನ್ನು ಮೊದಲ ಗಂಡನಿಗೆ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲು ಅವಳನ್ನು ತಾತ್ಕಾಲಿಕವಾಗಿ ಮದುವೆಯಾಗುವವನನ್ನೂ ಅವಳನ್ನು ಯಾರಿಗಾಗಿ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲಾಗುವುದೋ ಅವನನ್ನೂ (ಮೊದಲ ಗಂಡನನ್ನೂ) ಮುಹಮ್ಮದ್ ಪೈಗಂಬರರು ಶಪಿಸಿದ್ದಾರೆ." (ದಾರಿಮಿ, ತಿರ್ಮದೀ ಇತ್ಯಾದಿ). ಮತ್ತೊಂದು ನಿವೇದನದಲ್ಲಿ ಹೀಗೆ ಪ್ರಸ್ತಾವಿಸಲಾಗಿದೆ; "ಎರವಲು ಪಡೆಯುವ ಹೋತನ ಕುರಿತು ನಾನು ನಿಮಗೆ ಹೇಳಿಕೊಡಲೇ? ಎಂದೊಮ್ಮೆ ಪೈಗಂಬರರು ಕೇಳುತ್ತಾ, ಶಿಷ್ಯರೊಡನೆ ಹೀಗೆ ಹೇಳಿದರು: "ಅದು ಮುಹಿಲ್ಲ್ (ತ್ಯಜಿಸಲ್ಪಟ್ಟ ಪತ್ನಿಯನ್ನು ತ್ಯಜಿಸಿದ ಗಂಡನಿಗೇ ವಿವಾಹಕ್ಕೆ ಅರ್ಹಳನ್ನಾಗಿ ಮಾಡಲು ಅವಳನ್ನು ತತ್ಕಾಲಕ್ಕೆ ಮದುವೆಯಾಗುವವನು). ಅವನಿಗೂ ಯಾರಿಗೋಸ್ಕರ ಅವನು ಹಾಗೆ ಮದುವೆಯಾಗುತ್ತಾನೋ ಅವನಿಗೂ ಅಲ್ಲಾಹನ ಶಾಪವಿದೆ" (ಇಬ್ನುಮಾಜಃ). ಪೈಗಂಬರರ ಈ ನುಡಿಯಿಂದ ತ್ಯಜಿಸಲ್ಪಟ್ಟ ಪತ್ನಿಯನ್ನು ಮೊದಲ ಗಂಡನಿಗೆ ಪುನಃ ಸ್ವೀಕಾರಾರ್ಹಳನ್ನಾಗಿ ಮಾಡಲು ಒಂದು ಉಪಾಯವಾಗಿ ತತ್ಕಾಲಕ್ಕೆ ಮಾತ್ರ ಇನ್ನೊಬ್ಬನಃ ಮದುವೆಯಾಗುವುದು ಧರ್ಮವಿರುದ್ಧ ಮಾತ್ರವಲ್ಲ, ಅದು ದೈವ ಶಾಪಕ್ಕೆ ಕಾರಣವಾಗುವ ಒಂದು ಪಾಪಕರ್ಮ ಕೂಡ ಎಂದು ಸ್ಪಷ್ಟವಾಗುತ್ತದೆ. ಆ ರೀತಿ ಮದುವೆಯಾಗುವವನನ್ನು, ಜೊತೆಗೂಡಿಸಲು ಎರವಲು ಪಡೆಯುವ ಹೋತನಿಗೆ ಹೋಲಿಸಿಕೊಂಡು ಮುಹಮ್ಮದ್ ಪೈಗಂಬರರು, ಈ ಸಂಪ್ರದಾಯ ಬಹಳ ನಿಕೃಷ್ಟವೂ ಮೃಗೀಯವೂ, ಅದು ಆ ಸ್ತ್ರೀಗೆ ಅತ್ಯಂತ ಮಾನಹಾನಿಯುಂಟು ಮಾಡುವಂಥ ಒಂದು ಪ್ರವೃತ್ತಿಯೆಂದೂ ಮನಗಾಣಿಸಿ ಕೊಟ್ಟಿದ್ದಾರೆ. ಮಾತ್ರವಲ್ಲ, ಈ ದುಷ್ಟ ಆಚಾರ ಇಸ್ಲಾಮಿನ ಮೊದಲು ಅಧರ್ಮ ಕಾಲದಲ್ಲಿ ವಾಡಿಕೆಯಲ್ಲಿದ್ದ ಒಂದು ಕ್ರಮವಾಗಿತ್ತೆಂದು ಸಹ ಪ್ರಸ್ತುತ ವಚನದಿಂದ ತಿಳಿದು ಬರುತ್ತದೆ.

ಇಸ್ಲಾಮಿನ ದೃಷ್ಟಿಯಲ್ಲಿ ವಿವಾಹವೆಂಬುದು, ಕಾಲ ನಿರ್ಣಯವಿಲ್ಲದೆಯೇ ಎಂದೆಂದಿಗೂ ಒಬ್ಬಳು ಸ್ತ್ರೀಯನ್ನು ಸಹಧರ್ಮಿಣಿಯನ್ನಾಗಿ ಮಾಡಲು ಅವಳೊಡನೆ ನಿಯಮಾನುಸಾರ ಉಂಟುಮಾಡುವ ಸಂಬಂಧವಾಗಿದೆ. ಆದ್ದರಿಂದ

ಒಂದು ಕ್ಲಪ್ತಕಾಲಕ್ಕಾಗಿ ಮಾಡುವ ವಿವಾಹ ಮತ್ತು ಸ್ತ್ರೀಯನ್ನು ತನ್ನ ಧರ್ಮಪತ್ನಿಯಾಗಿ ಸ್ವೀಕರಿಸುವ ಉದ್ದೇಶ ವಿನಾ ಮಾಡುವ ವಿವಾಹ ಇಸ್ಲಾಮೀ ಅಧ್ಯಾಪನವನುಸಾರ ವಿವಾಹವಾಗುವುದಿಲ್ಲ. ಶಿಯಾ ಪಂಥಕ್ಕೆ ಸೇರಿದ ಮುಸ್ಲಿಮರು ಅಂಗೀಕರಿಸಿರುವ 'ಮುತ್ಅ' ಅಥವಾ ಕಾಲ ನಿರ್ಣಯದ ವಿವಾಹ ಇಸ್ಲಾಮಿಕವಲ್ಲವೆಂದು ಸುನ್ನಿ ಪಂಥದವರು ಹೇಳುವುದು ಕಾಲನಿರ್ಣಯ ನಿಮಿತ್ತ ಅದು ಯಥಾರ್ಥದಲ್ಲಿ ವಿವಾಹವಲ್ಲದಾಗುವುದರಿಂದಲೇ ಆಗಿದೆ. ಮುತ್ಅ ಧರ್ಮಬದ್ಧವಲ್ಲವೆಂದಾಗುವಾಗ, ತ್ಯಜಿಸಲ್ಪಟ್ಟ ಹೆಂಡತಿಯನ್ನು ತ್ಯಜಿಸಿದ ಗಂಡನಿಗೇ ಸ್ವೀಕರಿಸಲರ್ಹಳನ್ನಾಗಿಸಲು ಮಾಡಿಸುವ ವಿವಾಹ ಅದಕ್ಕಿಂತ ಹೆಚ್ಚು ಧರ್ಮವಿರುದ್ಧವಾಗುತ್ತದೆ. ಏಕೆಂದರೆ, ಈ ತಾತ್ಕಾಲಿಕ ವಿವಾಹದಲ್ಲಿ ಕಾಲನಿರ್ಣಯ ಇರುವುದು ಮಾತ್ರವಲ್ಲ, ಈ ಮದುವೆಯ ಉದ್ದೇಶವೇ ಸ್ತ್ರೀಯನ್ನು ಸ್ವಂತ ಧರ್ಮಪತ್ನಿಯಾಗಿ ಸ್ವೀಕರಿಸುವುದು ಸಹ ಅಲ್ಲ. ಆದುದರಿಂದ ಈ ವಾಡಿಕೆ ಇಸ್ಲಾಮೀ ನಿಯಮದ ಪ್ರಕಾರ ಮದುವೆಯೇ ಅಲ್ಲವೆಂದು ಆಲೋಚಿಸುವವರಿಗೆ ಸುಲಭದಲ್ಲಿ ಮನದಟ್ಟಾಗಬಹುಧು. ಹಾಗೆ ಅದು ವಿವಾಹವೇ ಅಲ್ಲವೆಂದಾಗುವಾಗ, ಮೂರು ಬಾರಿ ತಲಾಖ್ ಹೇಳಿ ತ್ಯಜಿಸಿದ ಸ್ತ್ರೀಯನ್ನು ಪುನಃ ಪತ್ನಿಯಾಗಿ ಸ್ವೀಕರಿಸಲಿಕ್ಕೆ ಇಂತಹ ಲಜ್ಜಾಕರವಾದ ಒಂದು ಕ್ರಮವನ್ನು ರೂಢಿಗೊಳಿಸಿ ಅದನ್ನು ವಿವಾಹವೆಂದು ಕರೆಯುವುದು ಇಸ್ಲಾಂ ಧರ್ಮದ ದೃಷ್ಟಿಯಲ್ಲಿ ಎಂದಿಗೂ ಸಿಂಧುವಾಗದು. ಕಾಲನಿರ್ಣಯ ಸಹಿತ ಮಾಡುವ ವಿವಾಹ ವ್ಯಭಿಚಾರದ ಒಂದು ಪ್ರಭೇದ ಮಾತ್ರವೇ ಆಗುತ್ತದೆ. ಧರ್ಮಪತ್ನಿಯನ್ನಾಗಿ ಮಾಡುವ ಉದ್ದೇಶದಿಂದ ಹೊರತು ಒಂದು ಸ್ತ್ರೀಯೊಡನೆ ಹೊಂದುವ ತಾತ್ಕಾಲಿಕ ಸಂಬಂಧಕ್ಕೆ ವಿವಾಹ ಎಂದು ಹೆಸರಿಡುವುದು ವಿವಾಹವನ್ನು ಪರಿಹಾಸ್ಯಕ್ಕೆ ಗುರಿಪಡಿಸುವಂಥ ಹಾಗೂ ಸ್ತ್ರೀಯನ್ನು ಅಪಮಾನಿಸುವಂಥ ಒಂದು ಪ್ರವೃತ್ತಿಯಾಗಿದೆ. ಪವಿತ್ರ ಖುರ್ಆನ್ ಒಂದು ಕಡೆಯಲ್ಲಿ ಹೀಗೆ ಹೇಳುತ್ತದೆ: "ಅವರು (ಹೆಂಡಂದಿರು) ನಿಮಗೆ ಉಡುಪು; ನೀವು ಅವರಿಗೆ ಉಡುಪು" (2:188). ಹೀಗೆ ಪತಿ-ಪತ್ನಿಯರು ಪರಸ್ಪರ ಉಡುಗೆಯಾಗಿರುವವರೆಂದು ಹೇಳುತ್ತಾ ಪವಿತ್ರ ಖುರ್ಆನ್ ಯಾವ ರೀತಿಯಲ್ಲಿ ಉಡುಪು ಸುಖವನ್ನೂ ಆರೋಗ್ಯವನ್ನೂ ನೀಡಲಿಕ್ಕೂ ನ್ಯೂನತೆಗಳನ್ನು ಮರೆಮಾಚಲಿಕ್ಕೂ ಸೌಂದರ್ಯವನ್ನು ವರ್ಧಿಸಲಿಕ್ಕೂ ಉಪಯುಕ್ತವಾಗುತ್ತದೋ, ಅದೇ ಪ್ರಕಾರವೇ ಗಂಡ-ಹೆಂಡಿರ ಪರಸ್ಪರ ಸಂಬಂಧ ಅವರಲ್ಲಿ ಸದೃಶಗಳಾದ ಆಧ್ಯಾತ್ಮಿಕ ಮತ್ತು ಶಾರೀರಿಕ ಗುಣಗಳನ್ನು ಉತ್ಪಾದಿಸಲು ಪರ್ಯಾಪ್ತವಾಗಿರುವುದೆಂದು ಮನಗಾಣಿಸುತ್ತದೆ. ಈ ವಿಧ ಗುಣಗಳು, ಕಾಲನಿರ್ಣಯರಹಿತವಾದ ಎಂದೆಂದಿಗೂ ಸ್ತ್ರೀಯನ್ನು ಸಹಧರ್ಮಿಣಿಯನ್ನಾಗಿ ಮಾಡುವ ವಿವಾಹ ಮುಖೇನ ಮಾತ್ರವೇ ಸಿದ್ಧಿಸುತ್ತದೆಯಷ್ಟೇ. ಪವಿತ್ರ ಖುರ್ಆನ್ ಇನ್ನೊಂದೆಡೆಯಲ್ಲಿ, ವಿವಾಹವಾಗಲು ನಿಷೇಧಿಸಲ್ಪಟ್ಟ ಬಂಧು ಸ್ತ್ರೀಯರ ಕುರಿತು ವಿವರಿಸುತ್ತಾ ಹೀಗೆ ಹೇಳುತ್ತದೆ: "ಹೇಳಿದವರ ಹೊರತಾದ ಸ್ತ್ರೀಯರನ್ನು ನೀವು ಧನ ಕೊಟ್ಟು, ವ್ಯಭಿಚಾರಕ್ಕಾಗಿಯಲ್ಲ; ಸಹಧರ್ಮಿಣಿಗಳಾಗಿ ಸ್ವೀಕರಿಸುವುದಕ್ಕೆ ನಿಮಗೆ ಸಮ್ಮತಿಯನ್ನೀಯಲಾಗಿದೆ" (4:25). ಹೀಗೆ ಖುರ್ಆನಿನ ಹಲವು ವಚನಗಳಿಂದಲೂ ಪೈಗಂಬರರ ನುಡಿಗಳಿಂದಲೂ ಯಥಾರ್ಥ ರೀತಿಯಲ್ಲಿರುವ ವಿವಾಹಬಂಧದ ಉದ್ದೇಶವೇನೆಂದೂ, ಕಾಲನಿರ್ಣಯ ಸಹಿತದ ಅಥವಾ ಸ್ತ್ರೀಯನ್ನು ಧರ್ಮಪತ್ನಿ ಮಾಡುವ ಉದ್ದೇಶದಿಂದ ಹೊರತಾದ ಸಂಬಂಧ ಸರಿಯಾದ ವಿವಾಹವಾಗಲಿಕ್ಕಿಲ್ಲವೆಂದೂ ಮನವರಿಕೆಯಾಗುತ್ತದೆ.

ವಿವಾಹ ವಿಚ್ಛೇದನಗೊಂಡ ಸ್ತ್ರೀಯನ್ನು ಅವಳ ಮೊದಲ ಗಂಡ ಪುನಃ ಪತ್ನಿಯಾಗಿ ಸ್ವೀಕರಿಸಲಿಕ್ಕೋಸ್ಕರ ಅವಳನ್ನು ತಾತ್ಕಾಲಿಕವಾಗಿ ಇನ್ನೊಬ್ಬ ಮದುವೆಯಾಗುವುದು ಮೃಗೀಯವೂ ದೈವಕೋಪಕ್ಕೆ ಈಡಾಗುವಂಥದ್ದೂ ಸ್ತ್ರೀಗೆ ಮಾನಹಾನಿಯುಂಟುಮಾಡುವಂಥದ್ದೂ ಆದ ಒಂದು ಪ್ರವೃತ್ತಿಯಾಗಿದ್ದೂ ಸಹ ಮುಸ್ಲಿಮರು ಈ ನೀಚ ಸಂಪ್ರದಾಯವನ್ನು ಧರ್ಮವಿಧಿಯೆಂಬಂತೆ ಆಚರಿಸಲು ಕಾರಣವಾದುದು ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖನ್ನು ಮೂರೆಂದೇ ಮತಪಂಡಿತರು ಪರಿಗಣಿಸಿ ಅದನ್ನು ಇಸ್ಲಾಮಿಕ ನಿಯಮವೆಂದು ಅಂಗೀಕರಿಸಿದ್ದರಿಂದಾಗಿದೆ. ಒಂದೇ ಸಮಯದಲ್ಲಿ ಮೂರು ತಲಾಖ್ ಸಹ ಹೇಳಬಾರದೆಂದೂ ಹಾಗೆ ಹೇಳುವುದಾದರೆ ಅದನ್ನು ಒಂದೆಂದು ಮಾತ್ರ ಗಣಿಸಬೇಕೆಂಬ ಇಸ್ಲಾಮಿನ ನಿರ್ದೇಶವನ್ನು ನಿಯಮವೆಂದು ಅಂಗೀಕರಿಸಿದ್ದರೆ, ಒಬ್ಬನು ಒಂದೇ ಕಾಲದಲ್ಲಿ ಮೂರಲ್ಲ ಮುನ್ನೂರು ತಲಾಖ್ ಹೇಳಿದರೂ ಅದನ್ನು ಒಂದು ತಲಾಖೆಂದು ಎಣಿಸಲಾಗುವುದರಿಂದ, ತಲಾಖ್ ಪಡೆದವಳನ್ನು ಪುನಃ ಸ್ವೀಕರಿಸಲಿಕ್ಕಾಗಿ ತತ್ಕಾಲಕ್ಕೆ ಅವಳನ್ನು ಮತ್ತೊಬ್ಬನಿಗೆ ಮದುವೆ ಮಾಡಿಕೊಡುವ ನಿಷಿದ್ಧವೂ

ಮ್ಯಾಗೀಯೂ ಆದ ಕ್ರಮವನ್ನು ಕೈಗೊಳ್ಳಲಿಕ್ಕಾಗಲಿ ಉಭಯ ಕಡೆಯವರೂ ಶಾಪಗ್ರಸ್ತರಾಗಲಿ ಆಗುತ್ತಿರಲಿಲ್ಲ. ಏಕೆಂದರೆ, ಒಬ್ಬನು ತನ್ನ ಪತ್ನಿಯನ್ನು ಒಂದು ಸಲ ಯಾ ಎರಡು ಸಲ ತಲಾಖ್ ಹೇಳುವುದಾದರೆ, ಕಾಲಾವಧಿಯೊಳಗೆ ಪ್ರತ್ಯೇಕ ವಿವಾಹಕರ್ಮ ವಿನಾ ಮತ್ತು ಕಾಲಾವಧಿ ಕಳೆದರೆ ಹೊಸ ವಿವಾಹಕರ್ಮ ಮೂಲಕ ಅವಳನ್ನು ಪುನಃ ಪತ್ನಿಯಾಗಿ ಸ್ವೀಕರಿಸಬಹುದಾಗಿದೆ. ಹಾಗೆ ಸ್ವೀಕರಿಸಲಿಕ್ಕೆ ಅವಳನ್ನು ಇನ್ನೊಬ್ಬನಿಗೆ ಮದುವೆ ಮಾಡಿಕೊಡುವುದೂ ಅವನು ಅವಳನ್ನು ತ್ಯಜಿಸುವುದೂ ಅಗತ್ಯವಿಲ್ಲ. ಆದರೆ, ಇಸ್ಲಾಮೀ ಧರ್ಮೋಪದೇಶಕ್ಕೆ ವಿರುದ್ಧವಾಗಿ ಒಂದೇ ಸಂದರ್ಭದಲ್ಲಿ ಹೇಳುವ ಮೂರು ತಲಾಖನ್ನು ಮೂರಾಗಿಯೇ ಪರಿಗಣಿಸುವುದರ ಫಲವಾಗಿ ಶಾಪಗ್ರಸ್ತ ಮತ್ತು ನಿಷಿದ್ಧವೆಂದು ಇಸ್ಲಾಂ ಹೇಳಿಕೊಡುವ ಲಜ್ಜಾಕರವಾದ ಮತ್ತೊಂದು ಸಂಪ್ರದಾಯವನ್ನು ಇಸ್ಲಾಮೀ ನಿಯಮವೆಂದು ಮುಸ್ಲಿಮರು ಸ್ವೀಕರಿಸಬೇಕಾಯಿತು. ಇದು ಇಸ್ಲಾಮಿಕ ಅಧ್ಯಾಪನವನ್ನು ಅಲಕ್ಷ್ಯ ಮಾಡಿದ್ದಕ್ಕೆ ಮುಸ್ಲಿಮರು ಅನುಭವಿಸಬೇಕಾಗಿ ಬಂದ ಒಂದು ಶಿಕ್ಷೆಯೆಂದು ಹೇಳಬಹುದು. ಮನುಷ್ಯರೆಲ್ಲ ಒಂದೇ ತರದಲ್ಲಿ ಸಹನಶೀಲರೂ, ವಿವೇಕಪೂರ್ಣವಾಗಿ ವರ್ತಿಸುವವರೂ ಅಲ್ಲ. ಆದ್ದರಿಂದ, ಅವಿವೇಕಿಯೂ ಕೋಪಿಷ್ಠನೂ ಆದ ಒಬ್ಬ ಗಂಡ ಥಟ್ಟನೆ ತನ್ನ ಪತ್ನಿಗೆ ಒಂದೇ ಸಂದರ್ಭದಲ್ಲಿ ಮೂರು ತಲಾಖ್ ಕೂಡ ಹೇಳಲೂಬಹುದು. ಹಾಗೆ ಒಮ್ಮೆಲೇ ಹೇಳಿದ ಮೂರು ತಲಾಖ್ ಒಂದು ಮಾತ್ರವೇ ಆಗುವುದೆಂಬ ಇಸ್ಲಾಮಿಕ ನಿಯಮವನ್ನು ಅವಗಣಿಸಿಕೊಂಡು ಅದನ್ನು ಮೂರು ತಲಾಖೆಂದು ಎಣಿಸತೊಡಗಿದಾಗ ಅವಿವೇಕಿಗಳಾದ ಗಂಡಂದಿರ ಆಲೋಚನಾರಹಿತವಾದ ಪ್ರವೃತ್ತಿಗೆ ಪರಿಹಾರ ಕಾಣಲಿಕ್ಕಾಗಿ ಹೀಗೆ ವಿವಾಹವೆಂಬ ನಾಮದಲ್ಲಿ ಇಸ್ಲಾಮಿಕವಲ್ಲದ ಒಂದು ಏರ್ಪಾಡು ಮಾಡುವರೆ ಅಂತಹವರು ನಿರ್ಬಂಧಿತರಾದರು. ಹಾಗಲ್ಲದೆ ಇದು ಇಸ್ಲಾಮೀ ನಿಯಮವಾಗಲಿ ಇಸ್ಲಾಮಿನ ಅಧ್ಯಾಪನಕ್ಕನುಗುಣವಾದ ಒಂದು ಪ್ರವೃತ್ತಿಯಾಗಲಿ ಅಲ್ಲ.

ಒಬ್ಬನು ಮೂರು ತಲಾಖ್ ಹೇಳಿ ತ್ಯಜಿಸಿದ ಒಬ್ಬಾಕೆ ಸ್ತ್ರೀಯನ್ನು ಇಸ್ಲಾಮಿಕ ನಿಯಮಾನುಸಾರ ಇನ್ನೊಬ್ಬನು ಮದುವೆಯಾಗಿ, ನ್ಯಾಯಾನುಸಾರ ಅವನು ಅವಳನ್ನು ಪರಿತ್ಯಜಿಸುವುದಾದರೆ ಅವಳನ್ನು ಮೊದಲ ಗಂಡ ಪುನಃ ಮದುವೆ ಮಾಡಿಕೊಳ್ಳಬಹುದೆಂದು ಇಸ್ಲಾಂ ಕಲಿಸುತ್ತದೆ. ಎರಡನೆಯವನು ಅವಳನ್ನು ಮದುವೆಯಾಗುವುದು ಮೊದಲಿನ ಗಂಡನಿಗೆ ಅವಳನ್ನು ಸ್ವೀಕಾರಾರ್ಹಳನ್ನಾಗಿ ಮಾಡಲಿಕ್ಕೋಸ್ಕರವಾದರೆ ಅದು ಯಥಾರ್ಥದಲ್ಲಿ ವಿವಾಹವಾಗಲಿಕ್ಕಿಲ್ಲ; ಧರ್ಮನಿರ್ದೇಶವನ್ನು ಅಪಹಾಸ್ಯಕ್ಕೆ ಗುರಿಪಡಿಸುವ ಒಂದು ಕ್ರಮಮಾತ್ರವಾಗುತ್ತದೆ. ಅಂತಹ ಒಂದು ಕ್ರಮದಿಂದ ಅವಳು ಮೊದಲ ಗಂಡನಿಗೆ ಸ್ವೀಕಾರಯೋಗ್ಯಳಾಗಲಿಕ್ಕೇ ಇಲ್ಲ. ಅವನಿಗೆ ಅವಳನ್ನು ಸ್ವೀಕರಿಸಲು ಸಾಧ್ಯವಾಗಬೇಕೆಂದಾದರೆ ಎರಡನೆಯ ಗಂಡ ಸರಿಯಾದ ರೀತಿಯಲ್ಲಿ ಅವಳನ್ನು ವಿವಾಹವಾಗಿ ನಿಯಮಾನುಸಾರ ಅವಳನ್ನು ತ್ಯಜಿಸಬೇಕಾಗಿದೆ. ವಿವಾಹಬಂಧವನ್ನು ಸಾಧ್ಯವಿದ್ದಷ್ಟು ಅಪರಿಚ್ಛೇದ್ಯಗೊಳಿಸಲಿಕ್ಕೂ ದಾಂಪತ್ಯ ಜೀವಿತವನ್ನು ಸುಗಮವಾಗಿ ಸಾಗಿಸಿಕೊಂಡು ಹೋಗಲಿಕ್ಕೂ ದಂಪತಿಗಳು ಪ್ರೇರಿತರಾಗಲಿಕ್ಕಾಗಿಯೇ ಇಸ್ಲಾ ಹೀಗೆ ವಿಧಿಸಿದ್ದು. ವಿವಾಹಬಂಧವನ್ನು ಮುರಿಯದಿರಲಿಕ್ಕಾಗಿ ಇಸ್ಲಾಂ ಒಂದನೆಯದಾಗಿ ತಲಾಖಿಗೆ ಕೆಲವು ಪ್ರತಿಬಂಧಕಗಳನ್ನು ವಿಧಿಸಿತು. ಈ ಪ್ರತಿಬಂಧಕಗಳನ್ನೆಲ್ಲಾ ತೊಡೆದುಹಾಕಿ ಒಬ್ಬನು ತನ್ನ ಪತ್ನಿಗೆ ತಲಾಖ್ ಹೇಳುವುದಾದರೆ ಅದು ಒಂದು ತಲಾಖ್ ಆಗುವುದು. ಹೀಗೆ ಎರಡು ಸಲ ಹೆಂಡತಿಯನ್ನು ತಲಾಖ್ ಹೇಳಿ ತೊರೆಯಲಿಕ್ಕೂ ಪುನಃ ಸ್ವೀಕರಿಸಲಿಕ್ಕೂ ಅವನಿಗೆ ಸಾಧ್ಯ. ಅನಂತರ ಮೂರನೆಯ ಸಲವೂ ಅವನು ತಲಾಖ್ ಹೇಳುವುದಾದರೆ ಮತ್ತೆ ಅವನು ತನ್ನ ಮಡದಿಯನ್ನು ತಿರುಗಿ ಪಡೆಯುವುದು ಸಲ್ಲದು. ಆಗ, ಅವನು ತನ್ನ ಪತ್ನಿಯನ್ನು ಮೂರು ಬಾರಿ ಸ್ವೀಕರಿಸಿ ಮೂರು ಬಾರಿ ಪರಿತ್ಯಜಿಸಿದನು. ಹೀಗೆ ಹಲವು ಪ್ರತಿಬಂಧಕಗಳನ್ನು ಕಿತ್ತೆಸೆದು ಒಬ್ಬನು ತನ್ನ ಪತ್ನಿಯನು ಒಂದು ಸಲವಲ್ಲ, ಮೂರು ಸಲವೂ ತ್ಯಜಿಸುವುದಾದರೆ ಅದರರ್ಥ ಅವನಿಗೆ ಅವಳೊಂದಿಗೆ ಸಹಧರ್ಮ ಜೀವಿತ ಮುಂದುವರಿಸಿಕೊಂಡು ಹೋಗಲು ಯಾವ ಪ್ರಕಾರದಲ್ಲೂ ಸಾಧ್ಯವಿಲ್ಲವೆಂದಾಗಿದೆ. ಆದ್ದರಿಂದ, ಇಷ್ಟು ಪ್ರತಿರೋಧಗಳನ್ನು ತಳ್ಳಿಹಾಕಿ ದಾಂಪತ್ಯಬಂಧವನ್ನು ಕೊನೆಗೊಳಿಸಿದವನಿಗೆ ಆ ಸ್ತ್ರೀಯ ಗಂಡನಾಗಲಿಕ್ಕೆ ನಿರ್ವಾಹವಿಲ್ಲವೆಂದು ಅದು ರುಜುಪಡಿಸುತ್ತದೆ. ಒಟ್ಟಿನಲ್ಲಿ, ಇದರ ನಂತರ ಭರ್ತೃಪದವನ್ನು ಪಡೆಯುವ ಹಕ್ಕು ಅವನಿಗೆ ಪರಿಪೂರ್ಣವಾಗಿ ಇಲ್ಲದಾಗುತ್ತದೆ. ಹೀಗೆ, ಪತಿಯು ಪತ್ನಿಯನ್ನು ತೊರೆಯಲಿಕ್ಕೂ ನಂತರ ಸ್ವೀಕರಿಸಲಿಕ್ಕೂ ಇಸ್ಲಾಂ ಒಂದು ನಿಬಂಧನೆಯನ್ನು ಇರಿಸದಿದ್ದರೆ ದಾಂಪತ್ಯಬಂಧ ಒಂದು

ವಿನೋದವೂ, ವಿವಾಹ ಮತ್ತು ವಿವಾಹ ವಿಚ್ಛೇದ ಅರ್ಥರಹಿತವೂ ಆದ ಪ್ರವೃತ್ತಿಯಾಗಿ ಪರಿಣಮಿಸೀತು. ಆದ್ದರಿಂದ ಪತ್ನಿಯನ್ನು ಸ್ವೀಕರಿಸಲಿಕ್ಕೂ ತ್ಯಜಿಸಲಿಕ್ಕೂ ಇಸ್ಲಾಂ ಒಂದು ಸೀಮೆಯನ್ನು ನಿಶ್ಚಯಿಸಿ, ಅದು ಮೂರು ಬಾರಿ ತನಕ ಆಗಬಹುದೆಂದೂ, ಅದರ ನಂತರ ಆ ಸ್ತ್ರೀಯನ್ನು ಪತ್ನಿಯಾಗಿರಿಸುವ ಹಕ್ಕು ಗಂಡನಿಗೆ ನಷ್ಟವಾಗುತ್ತದೆಂದೂ ವಿಧಿಸಿದೆ. ಈ ಪ್ರಕಾರದ ನಿಯಮ ನಿರ್ದೇಶ ಮೂಲಕ ಇಸ್ಲಾಂ ದಾಂಪತ್ಯ ಸಂಬಂಧವನ್ನು ಸಾಧ್ಯವಾದಷ್ಟು ಸುಗಮವೂ ಪ್ರಾಯೋಗಿಕವೂ ಮಾಡಿರುತ್ತದೆ. ಆದರೆ ತಲಾಖ್ ಮೂಲಕ ಪರಿತ್ಯಕ್ತಳಾದ ಸ್ತ್ರೀಯನ್ನು ಇನ್ನೋರ್ವನು ತನ್ನ ಧರ್ಮಪತ್ನಿಯಾಗಿ ವರಿಸಿ ನಂತರ ಅವನು ಸಹ ಅವಳನ್ನು ನಿಯಮಬದ್ಧವಾಗಿ ತ್ಯಜಿಸಿದ ನಂತರ ಮೊದಲ ಗಂಡ ಮತ್ತು ಆ ಸ್ತ್ರೀ ಪುನಃ ಗಂಡ-ಹೆಂಡತಿಯಾಗಲು ಇಷ್ಟಪಡುವ ಪಕ್ಷದಲ್ಲಿ ಅವರು ಮರು ಮದುವೆಯಾಗಬಹುದೆಂದು ಇಸ್ಲಾಂ ಸಮ್ಮತಿಸಿರುವುದು, ಅವರೀರ್ವರೂ ಪರಸ್ಪರ ಸಂಬಂಧವಿಲ್ಲದ ಎರಡು ವ್ಯಕ್ತಿಗಳಂತಾಗಿ ಬಹಳಷ್ಟು ಪಾಠಗಳನ್ನು ಕಲಿತು, ಒಂದು ವೇಳೆ ಮುಂದೆ ಉಂಟುಮಾಡುವ ಹೊಸ ಸಂಬಂಧವನ್ನು ಸಾಮರಸ್ಯದಿಂದ ಮುಂದುವರಿಸಿಕೊಂಡು ಹೋಗಲಿಕ್ಕೆ ಅವಕಾಶವಿರುವುದರಿಂದಾಗಿದೆ. ಈ ರೀತಿ ಸಮ್ಮತಿಸುತ್ತಾ ಇಸ್ಲಾಂ ಮನುಷ್ಯನ ಸ್ನೇಹಶೀಲತೆಯನ್ನು ಗೌರವಿಸಿ ಅವನ ಚಾಪಲ್ಯವನ್ನು ಕ್ಷಮಿಸಿ ನಿಯಮವನ್ನು ಸೌಮ್ಯಗೊಳಿಸಿದೆ. ಬಾಹ್ಯದೃಷ್ಟಿಯಲ್ಲಿ ನೋಡುವಾಗ ಇಷ್ಟು ಹೆಚ್ಚು ಪ್ರತಿಬಂಧಗಳನ್ನು ಕಿತ್ತೊಗೆದು ಮೂರು ಸಲ ತನ್ನ ಪತ್ನಿಯನ್ನು ಬಿಟ್ಟು ದಾಂಪತ್ಯ ಸಂಬಂಧವನ್ನು ಕೆಡಿಸಿದವನಿಗೆ ಅವಳನ್ನು ಕೊನೆಯ ವರೆಗೆ ಪತ್ನಿಯಾಗಿ ಸ್ವೀಕರಿಸಲು ಅವಕಾಶವಿರಬಾರದು. ಒಟ್ಟಿನಲ್ಲಿ, ಮೂರು ಬಾರಿ ತಲಾಖ್ ಹೇಳಿ ಪರಿಪೂರ್ಣವಾಗಿ ವಿವಾಹಮುಕ್ತಗೊಳಿಸಿದ ಪತ್ನಿಯನ್ನು ಮೊದಲ ಗಂಡ ಸ್ವೀಕರಿಸಲಿಕ್ಕೆ ಸಾಧ್ಯವಾಗಬೇಕಾದರೆ, ಅವಳನ್ನು ಇನ್ನೊಬ್ಬನು ತನ್ನ ಸಹಧರ್ಮಿಣಿಯಾಗಿ ನಿಯಮ ಪ್ರಕಾರ ವರಿಸಿ ನಂತರ ಅವನು ನ್ಯಾಯಬದ್ಧವಾಗಿ ಅವಳನ್ನು ಪರಿತ್ಯಜಿಸಿರಬೇಕು. ಹಾಗಲ್ಲದೆ, ಮೊದಲ ಗಂಡನಿಗೆ ಅವಳನ್ನು ಸ್ವೀಕರಿಸಲಿಕ್ಕೆ ಒಂದು ಉಪಾಯವಾಗಿ ಮತ್ತೊಬ್ಬನು ಅವಳನ್ನು ಮದುವೆಯಾಗಿ ಬಿಟ್ಟುಬಿಡುವುದರಿಂದ ಅವಳು ಮೊದಲ ಗಂಡನಿಗೆ ಎಂದಿಗೂ ವಿವಾಹ ವಿಹಿತಳಾಗುವುದಿಲ್ಲ.

ದಾಂಪತ್ಯ ಜೀವಿತವನ್ನು ಮುಂದುವರಿಸಿಕೊಂಡು ಹೋಗಲು ನಿರ್ವಾಹವಿಲ್ಲದಂತೆ ಮಾಡುವಂಥ ಕಲಹವಾಗಲಿ ಬಿಕ್ಕಟ್ಟಾಗಲಿ ಉಂಟಾದರೆ ದಂಪತಿಗಳು ದು:ಖಭರಿತ ಜೀವಿತವನ್ನು ಸಾಗಿಸಲು ನಿರ್ಬಂಧಿತರಾಗುವ ಪಕ್ಷದಲ್ಲಿ ವಿವಾಹವಿಚ್ಛೇದ ಸಮ್ಮತನೀಯವೆಂದು ಇಸ್ಲಾಂ ಬೋಧಿಸಿಯಾದರೂ, ಯಥಾರ್ಥದಲ್ಲಿ ಇಸ್ಲಾಂ ನಿರ್ದೇಶಿಸುವ ವೈವಾಹಿಕಬಂಧ ಕಾಲನಿರ್ಣಯರಹಿತವಾದ ಎಂದೆಂದಿಗೂ ಇರುವ ಒಂದು ಬಂಧುತ್ವವಾಗಿದೆ. ಆದುದರಿಂದ, ಅದನ್ನು ಅವರೀರ್ವರೂ ಪಾಲಿಸಿಕೊಂಡು ಹೋಗುವ ಪಕ್ಷದಲ್ಲಿ ಅದು ಅವರ ಮರಣದೊಂದಿಗೆ ಸಹ ಕೊನೆಗೊಳ್ಳುವುದಿಲ್ಲ. ಪಾರತ್ರಿಕ ಜೀವಿತದಲ್ಲೂ ಆ ಸಂಬಂಧ ಅನಶ್ವರವಾಗಿ ನೆಲೆಗೊಳ್ಳುತ್ತದೆ. ಆದ್ದರಿಂದಲೇ ಪವಿತ್ರ ಖುರ್‌ಆನ್ ಈ ರೀತಿ ಹೇಳಿರುತ್ತದೆ: "ಅವರೂ ಅವರ ಸುಕೃತರಾದ ಮಾತಾಪಿತರೂ ಹೆಂಡಂದಿರೂ ಸಂತಾನಗಳೂ ಅನಶ್ವರವಾದ ಸ್ವರ್ಗದಲ್ಲಿ ಪ್ರವೇಶಿಸುವರು" (13:24). ಇದರಿಂದ, ಗಂಡ ಹೆಂಡಿರಿಗೆ ಪರಸ್ಪರ ಆಧ್ಯಾತ್ಮಿಕವಾಗಿ ಸಹಮತವಿದ್ದರೆ ಪಾರತ್ರಿಕ ಜೀವಿತದಲ್ಲೂ ಅವರ ಸಂಬಂಧ ಮುರಿಯದೆಂದು ಮನದಟ್ಟಾಗುತ್ತದೆ. ಯಾವ ರೀತಿ ಆಧ್ಯಾತ್ಮಿಕವಾಗಿ ಸಹಮತವಿಲ್ಲದ ಪಕ್ಷದಲ್ಲಿ ದಂಪತಿಗಳ ಸಂಬಂಧ ಪಾರತ್ರಿಕ ಜೀವಿತದಲ್ಲಿ ಅಂತ್ಯಗೊಳ್ಳುತ್ತದೋ ಅದೇ ಪ್ರಕಾರವೇ ಐಹಿಕ ಜೀವಿತದಲ್ಲಿ ಅವರಿಗೆ ತಮ್ಮ ಬಂಧುತ್ವವನ್ನು ಪಾಲಿಸಿಕೊಂಡು ಹೋಗಲಿಕ್ಕೆ ನಿವೃತ್ತಿಯಿಲ್ಲದಾಗುವ ಘಟ್ಟದಲ್ಲಿ ಅದನ್ನು ವಿಚ್ಛೇದಿಸಬಹುದಾಗಿದೆ. ಹೀಗೆ ನಿರ್ವಾಹವಿಲ್ಲದ ಸಂದರ್ಭದಲ್ಲಿ ಆ ಸಂಬಂಧವನ್ನು ಮುರಿಯಬಹುದೆಂದು ಇಸ್ಲಾಂ ಆದೇಶಿಸುವುದಾದರೂ ಆ ಬಂಧುತ್ವವನ್ನು ಮುಂದುವರಿಸಿಕೊಂಡು ಹೋಗಲು ಇಚ್ಛಿಸುವ ಪಕ್ಷದಲ್ಲಿ ಈ ಜೀವಿತದಲ್ಲಿ ಮಾತ್ರವಲ್ಲ, ಪರಲೋಕ ಜೀವಿತದಲ್ಲೂ ಮುಂದುವರಿಸಿಕೊಂಡು ಹೋಗಬಹುದು. ಅಷ್ಟೇ ಅಲ್ಲ, ಆ ರೀತಿಯಲ್ಲಿ ಈ ಸಂಬಂಧವನ್ನು ಪರಲೋಕ ಜೀವಿತದಲ್ಲೂ ಮುಂದುವರಿಸಿಕೊಂಡು ಹೋಗಲು ಶ್ರಮಿಸಬೇಕೆಂದೂ ಇಸ್ಲಾಂ ಬೋಧಿಸುತ್ತದೆ. ಆದ್ದರಿಂದಲೇ, ಪತ್ನಿ ಮತ್ತು ಮಕ್ಕಳನ್ನು ಸಾತ್ವಿಕರೂ ದೈವಭಕ್ತರೂ ಆಗಿ ಮಾರ್ಪಡಿಸಲಿಕ್ಕೆ ಶ್ರಮಿಸಬೇಕಾದುದು ಮುಸ್ಲಿಮನ ಕರ್ತವ್ಯವೆಂದು ಇಸ್ಲಾಂ ಉಪದೇಶಿಸಿದೆ. ಆದರೆ ದಾಂಪತ್ಯ ಬಂಧ ಯಾವ ರೀತಿಯಲ್ಲಿದ್ದರೂ ಕೊನೆಗೊಳಿಸಬಾರದೆಂದು ಇತರ ಕೆಲವು ಧರ್ಮಗಳು ಅನುಶಾಸಿಸುವಂತೆ ಇಸ್ಲಾಂ ಉಪದೇಶಿಸುವುದಿಲ್ಲ. ಹಾಗೆ ಇಸ್ಲಾಂ ಬೋಧಿ

ಸುವುದಾದರೆ ಅದರ ಅಧ್ಯಾಪನಗಳು ಸಾರ್ವಲೌಕಿಕವೂ ಸುಗಮವೂ ಎಂದು ಹೇಳಲಸದಳ. ಅದೇ ಪ್ರಕಾರವೇ ದಾಂಪತ್ಯಬಂಧ ಅಂತ್ಯಗೊಳ್ಳದಿರಲಿಕ್ಕೂ ಪರಲೋಕದಲ್ಲಿ ಸಹ ಅದನ್ನು ನೆಲೆನಿಲ್ಲಿಸಲಿಕ್ಕೂ ಅವರಿಗೆ ಸಂತಾನ ಉಂಟಾಗಿರಬೇಕೆಂದಾಗಲಿ, ಸಂತಾನವಿಲ್ಲದಿದ್ದರೆ "ಸ್ವರ್ಗಸ್ಥನಾದ ಪತಿಯ ಆತ್ಮಮುಕ್ತಿಗಾಗಿ" ಪತ್ನಿ ಯಾರನ್ನಾದರೂ ದತ್ತು ಸ್ವೀಕರಿಸಬೇಕೆಂದಾಗಲಿ, ಅಥವಾ ಪತ್ನಿ ನಿಯೋಗ ಕ್ರಮ ಪ್ರಕಾರ ಅನ್ಯ ಪುರುಷನಿಂದ ಸಂತಾನೋತ್ಪಾದನೆ ಮಾಡಿಕೊಳ್ಳಬೇಕೆಂದಾಗಲಿ ಇಸ್ಲಾಂ ಬೋಧಿಸುವುದಿಲ್ಲ. ಪತಿ-ಪತ್ನಿಯರು ಸತ್ಯವಿಶ್ವಾಸಿಗಳೂ ಸಾತ್ವಿಕರೂ ಆಗಿ ಪರಿವರ್ತಿತರಾಗಿ ಅವರು ತಮ್ಮ ದಾಂಪತ್ಯಬಂಧವನ್ನು ಮುರಿಯದಿದ್ದ ಪಕ್ಷದಲ್ಲಿ ಪರಲೋಕ ಜೀವಿತದಲ್ಲೂ ಅವರಿಗೆ ತಮ್ಮ ಆ ಸಂಬಂಧವನ್ನು ಆತ್ಮಿಕವಾಗಿ ಮುಂದುವರಿಸಿಕೊಂಡು ಹೋಗಬಹುದೆಂದು ಇಸ್ಲಾಂ ಕಲಿಸುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ದಾಂಪತ್ಯ ಜೀವಿತವನ್ನು ಮುಂದುವರಿಸಿಕೊಂಡು ಹೋಗಲು ಪ್ರಯಾಸಕರವಾದ ಕೆಲವು ತೊಡಕುಗಳು ದಂಪತಿಗಳೆಡೆಯಲ್ಲಿ ಸಂಭವಿಸಬಹುದಾದ್ದರಿಂದ, ಅವರನ್ನು ದುರಿತಪೂರ್ಣ ಜೀವಿತದಿಂದ ರಕ್ಷಿಸಲಿಕ್ಕೆ ವಿವಾಹ ವಿಚ್ಛೇದನ ಮಾಡಬಹುದೆಂದು ಇಸ್ಲಾಂ ಸಮ್ಮತಿಸಿರುತ್ತದೆ. ಹಾಗೆ ಅದಕ್ಕೆ ಸಮ್ಮತಿ ನೀಡದಿದ್ದರೆ ಅದರ ಅಧ್ಯಾಪನ ಸಾರ್ವಲೌಕಿಕವೂ ಸುಗಮವೂ ಎಂದು ಗಣಿಸಲ್ಪಡಲಿಕ್ಕಿಲ್ಲ; ಮಾತ್ರವಲ್ಲ ವಿವಾಹ ವಿಚ್ಛೇದನ ಸಲ್ಲದೆಂದು ಅನುಶಾಸಿಸುವ ಧರ್ಮಗಳ ಅನುಯಾಯಿಗಳಂತೆ ಮುಸ್ಲಿಮರು ಸಹ ಹೊಸ ನಿಯಮ ನಿರ್ಮಾಣ ಮೂಲಕ ವಿವಾಹ ವಿಚ್ಛೇದವನ್ನು ಸಿಂಧುಗೊಳಿಸಲು ಶ್ರಮಿಸಬೇಕಾದೀತು. ಇಸ್ಲಾಂ ವಿವಾಹ ವಿಚ್ಛೇದವನ್ನು ಒಪ್ಪುವುದಾದರೂ ಮುಸ್ಲಿಮರಲ್ಲಿ ನಡೆಯುವ ಮದುವೆಗಳಲ್ಲಿ 99 ಶೇಕಡ ನಿರ್ವಿಘ್ನವಾಗಿ ಮುಂದುವರಿದುಕೊಂಡು ಹೋಗುತ್ತವೆ. ಇದಕ್ಕೆ ವಿರುದ್ಧವಾಗಿ, ವಿವಾಹ ವಿಚ್ಛೇದನ ಸಲ್ಲದೆಂದು ಅನುಶಾಸಿಸುವ ಧರ್ಮಗಳ ಅನುಯಾಯಿಗಳಲ್ಲಿ ವಿವಾಹ ವಿಚ್ಛೇದನ ಮುಸ್ಲಿಮರೆಡೆಯಲ್ಲಿರುವುದಕ್ಕಿಂತ ಕಮ್ಮಿಯಲ್ಲ, ಹೆಚ್ಚೇ ಇದೆಯೆಂದು ಹೇಳಿದರೆ ಅದು ಅಬದ್ಧವಾಗದು. ಇದರಿಂದ, ಇಸ್ಲಾಮಿಕ ವಿಧಿಯ ಪ್ರಾಯೋಗಿಕತೆಯೂ ಆವಶ್ಯಕತೆಯೂ ಎಷ್ಟರ ಮಟ್ಟಿಗಿದೆಯೆಂದು ಮನಗಾಣಬಹುದು. ●


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"...... ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: Book Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

# ಪಾಪ ವಿಮೋಚನೆ

ಭೂತಲದಲ್ಲಿರುವ ಎಲ್ಲಾ ಮನುಷ್ಯರೂ ಪಾಪಿಗಳೆಂದೂ ಈ ಪಾಪಿಗಳ ಪಾಪ ಪರಿಹಾರಕ್ಕಾಗಿ, ಪಾಪಿಗಳಾದ ಜನರನ್ನು ಪ್ರೀತಿಸಿ ಅವರ ಪಾಪ ಎಲ್ಲವನ್ನೂ ತಾನು ಹೊತ್ತುಕೊಂಡು ಪ್ರಸ್ತುತ ಪಾಪಗಳ ನಿಮಿತ್ತ ಶಾಪಗ್ರಸ್ತನಾಗಿ ಕೊಲ್ಲಲ್ಪಟ್ಟರೆಂದು ಮಹಾತ್ಮ ಯೇಸುಕ್ರಿಸ್ತರ ಕುರಿತು ಕ್ರೈಸ್ತಲೋಕ ನಂಬುತ್ತದೆ. ಯಥಾರ್ಥದಲ್ಲಿ ಕ್ರೈಸ್ತರು ತಮ್ಮ ಧರ್ಮಶಾಸ್ತ್ರವೆಂದು ಅಂಗೀಕರಿಸಿರುವ ಟೋರಾ (Torah) ಈ ಪ್ರಕಾರದ ಒಂದು ಶಾಪಬಲಿಯನ್ನು ನಿರ್ದೇಶಿಸುವುದಿಲ್ಲ. ಮಾತ್ರವಲ್ಲ, ಒಬ್ಬ ವ್ಯಕ್ತಿಯು ಪಾಪ ಮತ್ತೊಬ್ಬ ವ್ಯಕ್ತಿಯ ಮೇಲೆ ಹೊರಿಸುವುದನ್ನಾಗಲಿ ಅಂಗೀಕರಿಸುವುದಿಲ್ಲ. ಇದಕ್ಕೆ ಬೇಕಾದಷ್ಟು ಉದಾಹರಣೆಗಳು ಆ ಗ್ರಂಥದಲ್ಲಿ ಕಾಣಬಹುದು. ಕೋಟಿಗಟ್ಟಲೆ ಜನರ ಪಾಪಭಾರ ಒಬ್ಬನೇ ವ್ಯಕ್ತಿಯ ಮೇಲೆ ಹೊರಿಸುವುದರ ಕುರಿತು ಹೇಳಲಿಕ್ಕಿದೆಯೇ !

ಈ ನಂಬಿಕೆಗಳ ಅಸಂಬದ್ಧತೆಯ ಕುರಿತು ಯೋಚಿಸುವಾಗ ಇದು ತೀರಾ ಸಮರ್ಥನೀಯವಲ್ಲದ ಒಂದು ಸಿದ್ಧಾಂತವೆಂದು ಸ್ಪಷ್ಟವಾಗುತ್ತದೆ. ದೇವರು ಲೋಕವನ್ನು ಪ್ರೀತಿಸಿ ಲೋಕಜನತೆಗೆ ಮೋಕ್ಷ ನೀಡಲಿಕ್ಕಾಗಿ ಮಾಡಿದ ಏರ್ಪಾಡು—ಆಜ್ಞಾಲ್ಲಂಘಕರ, ಅವಿಶ್ವಾಸಿಗಳ, ದುಷ್ಟರ ಪಾಪಗಳನ್ನೆಲ್ಲಾ ದೇವರು ತನ್ನ ಪ್ರೀತಿಯ ಮಗನಾದ ಯೇಸುವಿನ ಮೇಲೆ ಹೊರಿಸಿ ಲೋಕವನ್ನು ರಕ್ಷಿಸಲಿಕ್ಕಾಗಿ ಆತನನ್ನು ಶಾಪಗ್ರಸ್ತನನ್ನಾಗಿ ಮಾಡಿ ಶಾಪಮರಕ್ಕೇರಿಸಿ ಕೊಂದುಹಾಕಿದನೆಂದು ಭಾವಿಸುವುದು ಹೇಗೆ ಯುಕ್ತವಾದೀತು? ಇದು ಯುಕ್ತವೆಂದು ತಿಳಿದುಕೊಳ್ಳಬಹುದಾದರೆ, ಜೋಸೆಫನ ತಪ್ಪಿಗೆ ಅವನನ್ನು ಶಿಕ್ಷಿಸುವುದರ ಬದಲು ತೋಮಸನನ್ನು ಶಿಕ್ಷಿಸಿದರೆ ಸಾಕೆಂದು ಹೇಳುವುದು ನ್ಯಾಯವೆಂದು ಹೇಳಬೇಕಾದೀತು. ಈ ನಿಯಮವನ್ನು ಇಂದು ಎಲ್ಲಿಯಾದರೂ ಒಂದು ನ್ಯಾಯಾಲಯ ಅಂಗೀಕರಿಸುತ್ತದೆಯೇ? ಕ್ರೈಸ್ತ ನ್ಯಾಯಾಲಯವಾದರೂ ಅಂಗೀಕರಿಸುವುದೇ? ಅಪರಾಧಿಯನ್ನು ಸುಮ್ಮನೆ ಬಿಟ್ಟು ಬದಲಿಗೆ ನಿರಪರಾಧಿಯನ್ನು ಶಿಕ್ಷಿಸುವುದು ಎಂದಿಗೂ ನ್ಯಾಯವಾಗದು.

ಮನುಷ್ಯರೆಲ್ಲ ಪಾಪಿಗಳು; ಆದ್ದರಿಂದ ಯೇಸು ಶಾಪಗ್ರಸ್ತನಾಗಿ ಮೃತ್ಯುವನ್ನಪ್ಪಿದರೆಂಬುದನ್ನು ಆಧ್ಯಾತ್ಮಿಕ ತತ್ವಗಳ ಆಧಾರದಲ್ಲಿ ಚಿಂತನ ಮಾಡಿದರೆ, ಈ ನಂಬಿಕೆ ಮಾನಸಿಕ ಸಂತೃಪ್ತಿಯನ್ನು ಗಳಿಸಲಾರದೆಂದೂ ಯಾವುದೇ ಮತಗ್ರಂಥ ಅಂಗೀಕರಿಸುವುದಿಲ್ಲವೆಂದೂ ಸುಗ್ರಾಹ್ಯವಾಗುತ್ತದೆ. ಪಾಪವೆಂಬುದು ಒಂದು ವಿಷ. ಪಾಪ ಉಂಟಾಗುವುದು, ದೈವವಿಶ್ವಾಸ, ದೈವಪ್ರೀತಿ, ಸ್ನೇಹಾನ್ವಿತ ದೈವಸ್ಮರಣೆಗಳು, ಪ್ರಾರ್ಥನೆಗಳು ಇತ್ಯಾದಿ ನಾಸ್ತಿಯಾಗಿ ಮನುಷ್ಯನು ದುರ್ವಿಕಾರಗಳಲ್ಲೂ ದುಷ್ಟ ನಂಬಿಕೆಗಳಲ್ಲೂ ದುಷ್ಟ ಪ್ರವೃತ್ತಿಗಳಲ್ಲೂ ಮುಳುಗಿ ಜೀವಿಸುವ ಸಂದರ್ಭದಲ್ಲಾಗಿದೆ. ಒಂದು ಗಿಡ ಭೂಮಿಯಿಂದ ಮೊಳೆತುಬರುವಾಗ ಅದಕ್ಕೆ ಅವಶ್ಯವಾದ ಜಲ, ಗೊಬ್ಬರ ಇತ್ಯಾದಿ ಸಿಗದಿರುವಾಗ ಅದು ನಾಶವಾಗುತ್ತದೆ. ತದ್ವಿರುದ್ಧವಾಗಿ, ಅದಕ್ಕೆ ಬೇಕಾದ ನೀರು, ಗೊಬ್ಬರ ಇತ್ಯಾದಿ ದೊರಕುವಾಗ ಅದು ನೆಲದಲ್ಲಿ ಬೇರೂರಿ ಬೆಳೆದು ಶಾಖೆಗಳನ್ನು ಹರಡುತ್ತದೆ. ಅದೇ ಪ್ರಕಾರ ಮಾನವ ಹೃದಯಕ್ಕೆ ದೈವಿಕ ಪ್ರೇಮ ನಷ್ಟವಾಗಿ ಪಾಪವೆಂಬ ಬರ ಬಾಧಿಸಿದರೆ ಪುನಃ ಅದನ್ನು ದೈವಸ್ನೇಹಕ್ಕೆ ಒಳಪಡಿಸುವುದು ಪಾಪ ದೂರೀಕರಿಸುವ ಮಾರ್ಗವಾಗಿದೆ. ಸಂಕ್ಷಿಪ್ತವಾಗಿ ಮನುಷ್ಯ ಹೃದಯ ದೇವಸ್ನೇಹದಿಂದ ಬೇರ್ಪಟ್ಟರೆ ಅವನು ಭೌತಿಕ ಸ್ನೇಹದಲ್ಲಿ ಮುಳುಗಿ ವಿವಿಧ ಪಾಪಗಳನ್ನು ಮಾಡಲು ಕಾರಣವಾಗುತ್ತದೆ. ಅದರ ಪರಿಹಾರ ಮಾರ್ಗವು ದೇವರನ್ನು ನಂಬಿ, ದೇವಸ್ನೇಹವನ್ನು ಕಾಂಕ್ಷಿಸಿ ಗೈಯ್ದ ಪಾಪಗಳ ದುಷ್ಫಲ ಪ್ರಕಟವಾಗದಿರಲಿಕ್ಕಾಗಿ ದೇವರೊಡನೆ ಪ್ರಾರ್ಥಿಸುತ್ತಾ, ಹೆಚ್ಚೆಚ್ಚು ದೇವಸಂಪ್ರೀತಿ ಕರಗತ ಮಾಡಲಿಕ್ಕಾಗಿ ತನ್ನಿಂದಾದಷ್ಟು ಸತ್ಕರ್ಮಗಳನ್ನು ಮಾಡುತ್ತಿರಬೇಕು. ಮನುಷ್ಯರು ಸತ್ಕರ್ಮನಿರತರಾಗುವಾಗ ಅವರಿಗೆ ದೈವಸ್ನೇಹ ಲಭ್ಯವಾಗುತ್ತದೆಂದು ಸ್ಪಷ್ಟವಾಗುತ್ತದೆ. ಎಲ್ಲಾ ಭೌತಿಕ ವಸ್ತುಗಳಿಗಿಂತಲೂ ಪದವಿಗಿಂತಲೂ ಸ್ವಪ್ರಾಣಕ್ಕಿಂತಲೂ ದೇವರಿಗೆ ಪ್ರಾಶಸ್ತ್ಯವನ್ನು ನೀಡುವುದೇ ದೈವಸ್ನೇಹದ ಪ್ರಥಮ ಸ್ಥಾನ. ಆದ್ದರಿಂದ ಯಾರೊಬ್ಬರ ಮರಣವಾಗಲಿ ಆತ್ಮಹತ್ಯೆಯಾಗಲಿ

ಪಾಪ ಪರಿಹಾರವು ಎಂದು ಹೇಳುವುದು ಸಂಪೂರ್ಣ ಅಜ್ಞತೆಯಾಗಿದೆ.

ಒಬ್ಬ ಮನುಷ್ಯನು ಮತ್ತೊಬ್ಬನ ತಲೆನೋವಿಗೆ ಪರಿಹಾರವಾಗಿ ತನ್ನ ತಲೆಯನ್ನು ಜಜ್ಜಿಸಿಕೊಂಡರೆ, ಜನಸಮುದಾಯದ ಜ್ವಲಿಸುವ ಸಮಸ್ಯೆಗಳಿಗೆ ಪರಿಹಾರವಾಗಿ ಸ್ವಯಂ ಆತ್ಮಹತ್ಯೆ ಮಾಡಿಕೊಂಡರೆ, ಈ ಮನುಷ್ಯಲೋಕ ಅದನ್ನು ಬುದ್ಧಿಪರವಾದ ಒಂದು ಪ್ರವೃತ್ತಿಯೆಂದು ಗಣಿಸಲಿಕ್ಕಿಲ್ಲ. ಸಹತಾಪ ಎಂಬುದು ಒಂದು ಸದ್ಗುಣವಾಗಿದೆ. ಅದು ತರ್ಕಾತೀತ. ಅನ್ಯರಿಗಾಗಿ—ಅವರ ಒಳಿತಿಗಾಗಿ ತ್ಯಾಗ ಮಾಡುವುದು ಅಭಿನಂದನಾರ್ಹವಾದ ಒಂದು ಧೀರ ಕೃತ್ಯವಾಗಿದೆ. ಆದರೆ ಅದಕ್ಕೆ ಒಂದು ಉದಾಹರಣೆ ಮಹಾತ್ಮ ಯೇಸುಕ್ರಿಸ್ತರ ಕುರಿತು ಹೇಳಲಾಗುವಂಥದ್ದೇನು ? ಮಹಾತ್ಮ ಯೇಸು ಆತ್ಮಹತ್ಯೆ ಅಥವಾ ಶಿಲುಬೆಗೇರಿ ಮೃತ್ಯುವನ್ನಪ್ಪುವುದನ್ನು ಬಿಟ್ಟು ಜನರ ಒಳಿತಿಗಾಗಿ ವಿವೇಕಯುತವಾದ ಕಾರ್ಯಗಳನ್ನು ಮಾಡಿರುತ್ತಿದ್ದರೆ ಅವರ ಮೂಲಕ ಲೋಕಕ್ಕೆ ಪ್ರಯೋಜನವಾಗಿದೆಯೆಂದು ಯಾರಿಗೂ ಮನದಟ್ಟಾಗುತ್ತಿತ್ತು. ಉದಾಹರಣೆಗೆ, ಒಂದು ಮನೆ ಅವಶ್ಯವುಳ್ಳ ಒಬ್ಬ ಬಡವನಿಗೋಸ್ಕರ ಒಬ್ಬ ಬಡಗಿ ಆ ದರಿದ್ರನ ಮೇಲೆ ದಯೆದೋರಿ ಪ್ರತಿಫಲ ಪಡೆಯದೇ ಮನೆ ಕಟ್ಟಿ ಕೊಡುವುದಾದರೆ ಆ ಬಡಗಿ ಪ್ರಶಂಸಾರ್ಹನು. ಮನೆ ಇಲ್ಲದ ನಿರ್ಗತಿಕನಿಗೆ ಬಡಗಿ ಉಪಕಾರ ಮಾಡಿದ್ದನ್ನು ಲೋಕವು ಒಪ್ಪುವುದು. ತದ್ವಿರುದ್ಧವಾಗಿ ಆ ಬಡಗಿಯು ಬಡವನ ಮೇಲಿನ ಅನುಕಂಪದಿಂದ ತನ್ನ ಸ್ವಂತ ತಲೆಯನ್ನು ಹೊಡೆದು ಜಜ್ಜಿಬಿಟ್ಟರೆ ಆ ದೀನನಿಗೆ ಏನು ಪ್ರಯೋಜನವಾಯಿತು? ಇನ್ನು ಮಹಾತ್ಮ ಯೇಸುವಿನ ಕುರಿತಾದರೆ, ಅವರ ಬಾಯಿಯಿಂದ, ಸಕಲ ಮನುಷ್ಯರು ಆದಂ ಮುಖೇನ ಪಾಪಿಗಳಾದರೆಂದಾಗಲಿ, ಪೂರ್ವಿಕ ಪಾಪ ಮನುಷ್ಯರಲ್ಲಿ ಸಂಕ್ರಮಿಸುತ್ತಿದೆಯೆಂದಾಗಲಿ, ಪ್ರಸ್ತುತ ಪಾಪವಿಮೋಚನೆಗಾಗಿ ತಾನೇ ಶಾಪಗ್ರಸ್ತನಾಗುವೆನೆಂದಾಗಲಿ, ಅದಕ್ಕನುಸಾರವಾಗಿ ಶಿಲುಬೆಯ ಮೇಲೆ ಮರಣಿಸಬೇಕೆಂದಾಗಲಿ ಇರುವ ನುಡಿ ಹೊರಟಿಲ್ಲವೆಂದು ಕ್ರೈಸ್ತ ಲೋಕ ಅಥವಾ ಸುವಾರ್ತೆಗಳು ಒಂದು ಕಡೆಯಲ್ಲಿ ಒಪ್ಪುತ್ತವೆ. ಅದೇ ಸಂದರ್ಭದಲ್ಲಿ, ಅವರ ನಂಬಿಕೆ ಪ್ರಕಾರ ಯೇಸುವಿನ ಶಿಲುಬೆಯ ಮೇಲಿನ ಮರಣದಿಂದ ಜನರಿಗೆ ಪಾಪವಿಮುಕ್ತಿಯುಂಟಾಗುತ್ತದೆಂದು ಯೇಸು ಭಾವಿಸಿದ್ದರೆಂಬುದು ಸರಿಯೆಂದಾದರೆ ಯೇಸುವಿನ ಸ್ಥಿತಿ ಅತ್ಯಂತ ದಯನೀಯವೆಂಬುದರಲ್ಲಿ ತೀರಾ ಸಂಶಯವಿಲ್ಲ.

ಶಾಪ ಎಂಬ ಪದದ ಸರಿಯಾದ ಅರ್ಥದ ಕುರಿತು ಕ್ರೈಸ್ತ ಸಹೋದರರು ಚಿಂತನ ಮಾಡಿದರೆ ಅವರು ಯೇಸುವಿಗೆ ತೋರಿದ ಅನ್ಯಾಯ ವಾಚಾಮಗೋಚರ ! ಇಷ್ಟು ಕಠಿಣವಾದೊಂದು ಅನ್ಯಾಯ ಯಾವ ಸಮುದಾಯವೂ ತಮ್ಮ ಗುರುವಿನ ಮೇಲೆ ಮಾಡಿದುದಾಗಿ ಕಾಣಲಿಕ್ಕಿಲ್ಲವೆಂದು ದುಃಖಸಹಿತ ಹೇಳಬೇಕಾಗಿದೆ. ಯೇಸು ಕನಿಷ್ಠ ಪಕ್ಷ ಮೂರು ದಿನಗಳಾದರೂ ಶಾಪಗ್ರಸ್ತನಾಗಬೇಕಾಗಿದೆ. ಇದು ಕ್ರೈಸ್ತವಿಶ್ವಾಸದ ಒಂದು ಅವಿಭಾಜ್ಯ ಘಟಕವಾಗಿದೆ. ಮಹಾತ್ಮ ಯೇಸು ಶಾಪಗ್ರಸ್ತನಾಗದಿದ್ದರೆ ಕ್ರೈಸ್ತ ನಂಬಿಕೆ ಪ್ರಕಾರ ಪಾಪವಿಮೋಚನೆ ಮತ್ತು ಪ್ರಾಯಶ್ಚಿತ್ತ ನಿಷ್ಫಲವಾಗುತ್ತವೆ. ಒಟ್ಟಾರೆ ಈ ನಂಬಿಕೆಗಳ ಬುನಾದಿ ಶಾಪವಾಗಿದೆ.

ಇಸ್ರಾಯೇಲ್ ಜನತೆಯ ಉದ್ಧಾರಕ್ಕಾಗಿ ಧರ್ಮಶಾಸ್ತ್ರವನ್ನು ರೂಢಿಗೊಳಿಸಲು ಬಂದ ಮಹಾತ್ಮ ಯೇಸು, ಕ್ರೈಸ್ತ ನಂಬುಗೆ ಪ್ರಕಾರ ಲೋಕ ಜನರ ಒಳಿತಿಗಾಗಿ ಅವರ ಪಾಪನಿಮಿತ್ತ ಒಂದನೆಯದಾಗಿ ಶಾಪಗ್ರಸ್ತನಾಗಬೇಕು. ಎರಡನೆಯದಾಗಿ ಶಾಪಮರದ ಮೇಲೆ ನೇತಾಡಿ ಸಾಯಬೇಕು ಸತ್ಯಸಂಧನಾದ ಒಬ್ಬ ಮನುಷ್ಯನನ್ನು ವಿಶೇಷವಾಗಿ ದೇವರಿಂದ ನಿಯೋಜಿತನಾದ ಒಬ್ಬ ಮಹಾತ್ಮನನ್ನು ಪಾಪಿಯೆಂದಾಗಲಿ ಶಾಪಗ್ರಸ್ತನೆಂದಾಗಲಿ ಹೇಳಬಹುದೇ? ಈ ಕ್ರೈಸ್ತ ನಂಬಿಕೆ ಮಹಾ ಪಾಪಗಳಲ್ಲಿ ಒಂದನೆಯ ಸ್ಥಾನಕ್ಕೆ ಅರ್ಹವಾಗುತ್ತದೆ. ಕಾರಣವೇನೆಂದರೆ ಶಾಪವೆಂಬುದು ಶಾಪಗ್ರಸ್ತನ ಹೃದಯಕ್ಕೆ ಸಂಬಂಧಿಸಿದ್ದು. ಒಬ್ಬನ ಹೃದಯ ದೇವರಿಂದ ಅಗಲಿ ಅವನು ದೇವರ ಶತ್ರು ಆಗುವಾಗ ಅವನು ಶಾಪಗ್ರಸ್ತನಾಗುತ್ತಾನೆ. ಆದ್ದರಿಂದಲೇ ಸೈತಾನನು ಶಾಪಗ್ರಸ್ತನೆಂದು ಕರೆಯಲ್ಪಡುತ್ತಾನೆ. ದೈವಸಾಮೀಪ್ಯ ಸ್ಥಾನಗಳಿಂದ ದೂರವಾದವರನ್ನು ಶಾಪಗ್ರಸ್ತರೆಂದು ಹೇಳಲಾಗುತ್ತದೆ. ಯಾವೊಬ್ಬನ ಹೃದಯ ದೇವರ ಪ್ರೀತಿಯಿಂದಲೂ ದೈವಾನುಸರಣೆಯಿಂದಲೂ ಅಗಲಿಹೋಗುತ್ತದೋ ; ಯಥಾರ್ಥದಲ್ಲಿ ಅವನು ದೇವರ ವೈರಿಯಾಗುವುದರಿಂದ ಶಾಪಗ್ರಸ್ತನಾಗುತ್ತಾನೆ.

ಯೇಸು ಶಾಪಗ್ರಸ್ತರಾಗಿದ್ದರೆ? ಆಗಿದ್ದರೆ ಆ ಮಹಾತ್ಮರು ದೈವಕೋಪಕ್ಕೆ ಈಡಾಗಿದ್ದರೆಂದೂ ದೇವರೊಡನಿರುವ ಅನುಸರಣೆ ಮತ್ತು ಸ್ನೇಹ ಅವರ ಹೃದಯದಿಂದ ದೂರವಾಗಿತ್ತೆಂದೂ, ಯೇಸು ಮತ್ತು ದೇವರು ಪರಸ್ಪರ ಶತ್ರುಗಳಾಗಿದ್ದರೆಂದೂ ಅನ್ಯೋನ್ಯ ಯಾವ ಸಂಬಂಧವೂ

# ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ

ಉರ್ದು ಮೂಲ: ಮಿರ್ಝಾ ಬಶೀರ್ ಅಹ್ಮದ್ ಎಂ. ಎ.

ದೋಸ್ತೋ ಇಶ್ ನರ್ಝರ್ ಖುದಾಕೇಲಿಯೇ
ಸಯ್ಯಿದುಲ್ ಖಲ್ಫ್ ಮುಸ್ತಫಾ ಕೇ ಲಿಯೇ

(ಸ್ನೇಹಿತರೇ, ದೇವರಿಗಾಗಿ ಮತ್ತು ಸೃಷ್ಟಿಗಳಲ್ಲಿ ಶ್ರೇಷ್ಠರಾದ ಪೈಗಂಬರರಿಗಾಗಿ ಒಮ್ಮೆ ದೃಷ್ಟಿ ಹಾಯಿಸಿರಿ)

ಈ ಕಾಲದಲ್ಲಿ ಅಹ್ಮದಿಯಾ ಜಮಾಅತಿನ ವಿರುದ್ಧ ಮಾಡಲ್ಪಡುವ ಅಪಪ್ರಚಾರಗಳಲ್ಲಿ ಅತ್ಯಧಿಕ ಹಾನಿಕರವಾದುದು, ಅಹ್ಮದಿಯಾ ಜಮಾಅತ್ ಪೈಗಂಬರ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಪ್ರವಾದಿತ್ವ ಸಮಾಪ್ತಿಯ ಕುರಿತು ನಂಬುವುದಿಲ್ಲವೆಂದಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರನ್ನು "ಲಾ ನಬಿಯ್ಯ ಬಅ್‌ದೀ" ಮತ್ತು "ಇನ್ನೀ ಆಖಿರುಲ್ ಅಂಬಿಯಾ" ಎಂಬ ಪೈಗಂಬರ್ ವಚನಗಳು ಸೂಚಿಸುವ ಅರ್ಥವನ್ನು ತಪ್ಪೆಂದು ಸಾರುವಂತಹ ಪ್ರವಾದಿಯೆಂದು ಈ ಜಮಾಅತ್ ನಂಬುತ್ತದೆಂದೂ ಸೃಷ್ಟಿಗಳಲ್ಲಿ ಅತ್ಯುತ್ಕೃಷ್ಟರೂ ಜೀವಿಗಳಿಗೆಲ್ಲಾ ಅಭಿಮಾನಾಸ್ಪದರೂ ಆದ ಹಝ್ರತ್ ಖಾತಮುನ್ನಬಿಯ್ಯೀನ್ (ಸ.)ರವರ ನುಬುವ್ವತಿನ ಪರಿಧಿಯನ್ನು ಕೊನೆಗೊಳಿಸಿ ಒಂದು ಹೊಸ ಮತ ಮತ್ತು ಹೊಸ ಪ್ರವಾದಿ ಶೃಂಖಲೆಯ ತಳಪಾಯ ಹಾಕಲಾಗುತ್ತಿದೆಯೆಂದೂ ಸುಳ್ಳು ಸುಳ್ಳಾಗಿ ಆರೋಪಿಸಲಾಗುತ್ತಿದೆ.

ಈ ಲೇಖನವನ್ನು ಈ ಸುಳ್ಳು ಆರೋಪಗಳಿಗೆ ಮತ್ತು ವಿರೋಧಿಗಳಿಂದ ಸೃಷ್ಟಿತವಾದ ಆಧಾರರಹಿತ ಹೇಳಿಕೆಗಳಿಗೆ ಉತ್ತರ ರೂಪವಾಗಿ ಬರೆಯಲಾಗಿದೆ. ಈ ಲೇಖನವನ್ನು ಬರೆಯುವ ಕಾಲದಲ್ಲಿ (1953ನೇ ಇಸವಿ) ಪಂಜಾಬಿನಲ್ಲಿ ನಡೆದ ಅಹ್ಮದಿಯಾ ವಿರುದ್ಧ ಗಲಭೆಗಳ ಕಾರಣದಿಂದ ಸ್ಥಿರಚಿತ್ತನಾಗಿ ಬರೆಯಲು ಸಾಧ್ಯವಾಗಲಿಲ್ಲ. ಆದರೆ ಅಲ್ಲಾಹನ ದಯದಿಂದ ಈ ಲೇಖನ ಮೂಲಕ ಅಹ್ಮದಿಯಾ ಜಮಾಅತಿನ ವಿಶ್ವಾಸಗಳು, ಆ ವಿಶ್ವಾಸಗಳಿಗಿರುವ ಆಧಾರಗಳು ಮತ್ತು ಆ ಆಧಾರಗಳ ವೈಚಾರಿಕ ಸಮರ್ಪಕತೆಯ ಕುರಿತು ಮನದಟ್ಟಾಗಲು ಸಾಧ್ಯವಾಗಬಹುದೆಂದು ನಂಬುತ್ತೇನೆ.

ಆದರೆ ಯಾವುದೇ ಸಾಕ್ಷ್ಯಾಧಾರ ಅದು ಎಷ್ಟು ಪ್ರಜ್ವಲಿಸುವಂಥದ್ದಾಗಿದ್ದರೂ ಎಷ್ಟು ಸ್ಪಷ್ಟವಾಗಿದ್ದರೂ ಅದು ಒಬ್ಬ ಮನುಷ್ಯನ ಹೃದಯದಲ್ಲಿ, ಆ ಮನುಷ್ಯ ತನ್ನ ಹೃದಯ ಮತ್ತು ಮೆದುಳಿನ ಕವಾಟಗಳನ್ನು ತೆರೆದು ಸತ್ಯವನ್ನು ಯಾವುದೇ ಹೆದರಿಕೆಯಿಲ್ಲದೆ, ನಿಂದಿಸುವವನ ಯಾವುದೇ ನಿಂದನೆಗೆ ಭಯಪಡದೆ ಸ್ವೀಕರಿಸಲು ತಯಾರಾಗದಿರುವ ವರೆಗೆ ಪ್ರವೇಶಿಸಲು ಸಾಧ್ಯವಿಲ್ಲ. ಈ ಲೇಖನ ಯಾವ ವ್ಯಕ್ತಿಯ ಕೈಸೇರುವುದೋ ಆ ವ್ಯಕ್ತಿ ಅಲ್ಲಾಹನಿಗಾಗಿ ಮತ್ತು ಪ್ರವಾದಿ ಮುಹಮ್ಮದ್ (ಸ)ರಿಗಾಗಿ ಈ ಲೇಖನವನ್ನು ಆದಿಯಿಂದ ಅಂತ್ಯದ ವರೆಗೆ ಯಾವುದೇ ಪೂರ್ವಗ್ರಹ ಪೀಡಿತನಾಗದೆ ಅಧ್ಯಯನ ಮಾಡಲು ಪ್ರಯತ್ನಿಸಬೇಕೆಂದು ವಿನಂತಿಸುತ್ತೇನೆ. ಅದರೊಂದಿಗೆ ಈ ಲೇಖನದಲ್ಲಿ ಬರೆಯಲಾದ ಸಂಗತಿಗಳು ಸತ್ಯವಾಗಿದ್ದರೆ ಅದನ್ನು ಸ್ವೀಕರಿಸಲು ಅಲ್ಲಾಹನು ಅನುಗ್ರಹಿಸಲಿಯೆಂದು ಪ್ರಾರ್ಥಿಸುತ್ತಾ ಇರಬೇಕು. ಮನಸ್ಸಿನ ಸಮಾಧಾನದ ಕೀಲಿಕೈ ದೇವರ ಕೈಯಲ್ಲಿ ಮಾತ್ರವಿದೆ. ಅವನ ಅಭಯವನ್ನೇ ಈ ಲೇಖಕನು ಆಶಿಸುತ್ತಾ ಈ ಲೇಖನದ ಓದುಗರು ಅದೇ ರೀತಿ ಮಾಡಬೇಕೆಂದು ಇಚ್ಛಿಸುತ್ತಾನೆ. "ವ ನಿಅ್‌ಮಲ್ ಮೌಲಾ ವ ನಿಅ್‌ಮನ್ನಸೀರ್"–ಅವನೇ ಶ್ರೇಷ್ಠ ಯಜಮಾನ ಮತ್ತು ಶ್ರೇಷ್ಠ ಸಹಾಯಕ.

---

( 17ನೇ ಪುಟದಿಂದ )

ಇಲ್ಲವಾಗಿತ್ತೆಂದೂ ಯೇಸು ಶಾಪಗ್ರಸ್ತರಾಗಿದ್ದ ದಿನಗಳಲ್ಲಿ ಅವರು ಅವಿಶ್ವಾಸಿಯಾಗಿದ್ದರೆಂದೂ ಯೇಸು ಪಿಶಾಚಿಯ ಸ್ವಭಾವಗಳನ್ನು ಹೊಂದಿದ್ದವರಾಗಿದ್ದರೆಂದೂ ಕ್ರೈಸ್ತ ನಂಬಿಕೆಯ ಪ್ರಕಾರ ಹೇಳಬೇಕಾದೀತು. ಇಂತಹ ಅಪವಾದಗಳನ್ನು ಯೇಸುಕ್ರಿಸ್ತರಂತಹ ಮಹಾತ್ಮರ ಹೆಸರಿನಲ್ಲಿ ದೈವಭಕ್ತಿಯುಳ್ಳ ಯಾರೂ ಹೇಳಲು ಧೈರ್ಯಪಡಲಿಕ್ಕಿಲ್ಲ, ಖಂಡಿತ. ★

## ಹಝ್ರತ್ ಪೈಗಂಬರರ ಅನುಪಮೇಯ ಸ್ಥಾನ

ಎಲ್ಲಾ ಸ್ತುತಿ ಸರ್ವಶಕ್ತನೂ ಸರ್ವಶ್ರೇಷ್ಠನೂ ಆದ ಅಲ್ಲಾಹನಿಗೆ. ಅವನು ಬಲಹೀನವಾದ ದೇಹ ಪ್ರಕೃತಿಯನ್ನು ಹೊಂದಿದ ಮಾನವನನ್ನು ಈ ಪ್ರಪಂಚದ ಸೃಷ್ಟಿಯ ಮೂಲ ಬಿಂದುವನ್ನಾಗಿ ಮಾಡಿ ಆತನಿಗೆ ಸೃಷ್ಟಿಗಳಲ್ಲಿ ಸರ್ವೋನ್ನತ ಸ್ಥಾನ ನೀಡಿ ಆತನ ಮಾರ್ಗ ದರ್ಶನಕ್ಕಾಗಿ ಪ್ರವಾದಿಗಳನ್ನು ಕಳುಹಿಸುತ್ತಾ ಇದ್ದು ನಮ್ಮ ಯಜಮಾನರಾದ ಆದಮ ಸಂತತಿಯ ಸರದಾರರಾದ ಹಝ್ರತ್ ಮುಹಮ್ಮದ್ (ಸ)ರಿಗೆ ನುಬುವ್ವತ್ತಿನ ಎಲ್ಲಾ ಅನುಗ್ರಹಗಳನ್ನು ಪರಿಪೂರ್ಣವಾಗಿ ನೀಡಿದನು. ಅವರ ಸ್ಥಾನಕ್ಕೆ ಹಿಂದಿನವರು ಯಾರೂ ಏರಿಲ್ಲ; ಮುಂದೆ ಯಾರೂ ಆ ಸ್ಥಾನಕ್ಕೇರಲು ಸಾಧ್ಯವೂ ಇಲ್ಲ. ನುಬುವ್ವತ್ತಿನ ಅತ್ಯಂತ ಪ್ರಕಾಶಮಾನವಾದ ಈ ಸೂರ್ಯನಲ್ಲಿ ದೇವರು ತನ್ನ ದೈವಿಕ ಪ್ರಕಾಶವನ್ನು ಅತ್ಯಂತ ಹೆಚ್ಚಾಗಿ ಸಮಾವೇಶಗೊಳಿಸಿದನು. ಈ ಸಿರಾಜೆ ಮುನೀರ್ (ಪ್ರಕಾಶಮಾನವಾದ ಜ್ಯೋತಿ) ತನ್ನ ಬೆಳಕನ್ನು ಲೋಕಾವಸಾನದವರೆಗೆ ಪ್ರಕಾಶಿಸಲಿಕ್ಕಾಗಿ ಏರ್ಪಡಿಸಲಾಯಿತು.

ಅಲ್ಲಾಹುಮ್ಮ, ಸಲ್ಲಿಅಲಾ ಮುಹಮ್ಮದಿನ್, ವ ಬಾರಿಕ್ ವ ಸಲ್ಲಿಮ್ ಇಬ್‌ಅಸ್‌ಹು ಮಖಾಮನ್ ಮಹ್‌ಮೂದನಿಲ್ಲದೀ ವ ಅ(ದ್)ತ್ತಹು.

## ಎಲ್ಲಾ ಪ್ರಕಾಶದ ಜೊತೆ ಕತ್ತಲೆಯ ಛಾಯೆ

ಪ್ರತಿಯೊಂದು ಬೆಳಕಿನ ಜೊತೆ ಕತ್ತಲೆ ಇರುವುದು ಸಾಮಾನ್ಯವಾಗಿದೆ. ಬಹಳ ಬುದ್ಧಿವಂತನೂ ಜ್ಞಾನಿಯೂ ಆದ ಅಲ್ಲಾಹನು ದೇವದೂತರ (ಮಲಕುಗಳ) ಪ್ರಕಾಶಮಾನವಾದ ಅಸ್ತಿತ್ವದ ಜೊತೆಯಲ್ಲಿ ಇಬ್ಲೀಸನ ಕಪ್ಪು ನೆರಳನ್ನೂ ಏರ್ಪಡಿಸಿರುವನು. ಪ್ರತಿಯೊಂದು ಹಗಲಿನ ಜೊತೆ ಕತ್ತಲೆಯು ಬರುವಂತೆ ನಮ್ಮ ಯಜಮಾನರಾದ, ಶ್ರೇಷ್ಠ ಪ್ರವಾದಿಯೆಂಬ ಅತ್ಯಂತ ಪ್ರಕಾಶಮಾನವಾದ ಸೂರ್ಯನು ಎಲ್ಲಾ ಕಾಲಗಳಿಗೂ ಎಲ್ಲಾ ಜನಾಂಗಗಳಿಗೂ ಪ್ರಕಾಶ ನೀಡಲಿಕ್ಕಾಗಿ ಉದಿಸಿದ್ದರೂ, ಪೈಗಂಬರರ ನುಬುವ್ವತ್ತಿನ ಕಾಲಾವಧಿ ಅಂತ್ಯಗೊಳ್ಳದೆ ಇರುವುದಾದರೂ ದೇವರು ತನ್ನ ಪುರಾತನವಾದ ಮಾರ್ಗದರ್ಶನ ನಿಯಮಗಳ ಪ್ರಕಾರ ಈ ಅವಧಿಯಲ್ಲಿ ಜನರ ದುರ್ನಡತೆಗಳ ಕಾರಣ ಕೆಲವೊಮ್ಮೆ ಕತ್ತಲೆಯ ಕಾಲ ಬರುತ್ತಾ ಇರುವುದೆಂದೂ ನಿಶ್ಚಯಿಸಿರುವನು. ಪೈಗಂಬರರು ತನ್ನ ಅನುಯಾಯಿಗಳಿಗೆ ಈ ರೀತಿ ಶುಭವಾರ್ತೆ ನೀಡಿರುವರು: ಅಂಧಕಾರದ ಕಾಲದಲ್ಲಿಯೂ ದೇವರು ನನ್ನ ಅನುಯಾಯಿಗಳನ್ನು ಮರೆತು ಬಿಡಲಾರನು. ನನ್ನ ಮಾರ್ಗದರ್ಶನವೆಂಬ ಸೂರ್ಯನಿಂದ ಪ್ರತಿಬಿಂಬಿತ ಪ್ರಕಾಶದ ಮೂಲಕ ಅವಶ್ಯವಿದ್ದಾಗೆಲ್ಲಾ ಆಧ್ಯಾತ್ಮಿಕ ಚಂದ್ರರನ್ನು ದೇವರು ಸೃಷ್ಟಿಸುತ್ತಾ ಇರುವನು. ಆ ಚಂದ್ರರ ಪೈಕಿ ಕೆಲವರು ಪ್ರಥಮ ರಾತ್ರೆಯ ಚಂದ್ರ (ಹಿಲಾಲ್)ನಂತೆ ಇರುವರು. ಕೆಲವರು ಅದಕ್ಕಿಂತ ದೊಡ್ಡ ಗಾತ್ರ ಪಡೆಯುವರು. ಇನ್ನು ಕೆಲವರು, ಇನ್ನೂ ದೊಡ್ಡ ಸ್ಥಾನ ಪಡೆಯುವರು. ಕೆಲವರು ಹದಿನಾಲ್ಕನೆಯ ದಿನದ ಪೂರ್ಣ ಚಂದ್ರನಂತೆ ಪೂರ್ಣ ಪ್ರಕಾಶ ಹೊಂದುವರು.

ಈ ಎಲ್ಲಾ ಸಣ್ಣ ದೊಡ್ಡ ಚಂದ್ರರು ಮುಹಮ್ಮದ್ ಪೈಗಂಬರರೆಂಬ ಸೂರ್ಯನ ಸುತ್ತ ಮುತ್ತ ತಿರುಗುವರು.

## ಪೈಗಂಬರರ ಅನುಯಾಯಿಗಳಲ್ಲಿ ಖಲೀಫರ ಶೃಂಖಲೆ

ಪೈಗಂಬರರ ಮೂಲಕ ದೇವರು ಪವಿತ್ರ ಖುರ್ ಆನಿನಲ್ಲಿ ಈ ರೀತಿ ಉಲ್ಲೇಖಿಸಿರುವನು:

> ವಅದಲ್ಲಾಹುಲ್ಲದೀನ ಆಮನೂ ಮಿನ್ ಕುಮ್ ವ ಅಮಿಲುಸ್ಸಾಲಿಹಾತಿ ಲಯಸ್ತಖ್ ಲಿಫನ್ನಹುಮ್ ಫಿಲ್ ಅರ್‌ಲ್ದಿ ಕಮಸ್ತಖ್‌ಲಿಫಲ್ಲದೀನ್ ಮಿನ್ ಖಬ್‌ಲಿಹಿಮ್ ವಲಯುಮಕ್ಕಿನನ್ನ ಲಹುಮ್ ದೀನಹುಮುಲ್ಲದಿರ್‌ತಲಾ ಲಹುಮ್ ವಲಯುಬದ್ದಿಲನ್ನಹುಮ್ ಮಿನ್ ಬಅದಿ ಖೌಫಿಹಿಮ್ ಅಮ್‌ನನ್ ಯಅ್‌ಬುದೂನನೀ ಲಾ ಯುಶ್‌ರಿಕೂನ ಬೀ ಶೈಯನ್ ವ ಮನ್ ಕಫರ ಬಅ್‌ದ ದಾಲಿಕ ಫಉಲಾಯಿಕ ಹುಮುಲ್ ಫಾಸಿಖೂನ್ (24:56)

"ನಿಮ್ಮ ಪೈಕಿ ನಂಬಿ ಸತ್ಕರ್ಮಗಳನ್ನು ಮಾಡುವವರಿಗೆ ದೇವನು ವಾಗ್ದಾನ ಮಾಡಿರುವನು: ಅವನು ಅವರ ಹಿಂದಿನ ಜನರನ್ನು ದೈವ ಪ್ರತಿನಿಧಿಗಳನ್ನಾಗಿ ಮಾಡಿದಂತೆ ಅವರನ್ನೂ ದೈವ ಪ್ರತಿನಿಧಿಗಳನ್ನಾಗಿ ಮಾಡುವನು. ಅವರಿಗಾಗಿ ಅವನಿಂದ ಆರಿಸಲ್ಪಟ್ಟ ಧರ್ಮವನ್ನು ಅವನು ಸುಸ್ಥಾಪಿಸುವನು. ಅವರ ಭಯವನ್ನು ಹೋಗಲಾಡಿಸಿ ಅವರಿಗೆ ಭದ್ರತೆಯನ್ನೂ ಶಾಂತಿಯನ್ನೂ ನೀಡುವನು. ಅವರು ನನ್ನನ್ನೇ ಆರಾಧಿಸಬೇಕಾಗಿದೆ.

ನನಗೆ ಸಾಟಿಯಾಗಿ ಯಾರನ್ನೂ ಸ್ವೀಕರಿಸಬಾರದು. ಅನಂತರ ಆಜ್ಞಾಲಂಘನೆ ಮಾಡುವವರು ದ್ರೋಹಿಗಳಾಗಿ ರುವರು." (24:56)

### ಮುಜದ್ದಿದರ ಸರಣಿ

ಮೇಲಿನ ಖುರ್‌ಆನ್ ವಚನವನ್ನು ನಮ್ಮ ಪ್ರವಾದಿ ಮುಹಮ್ಮದ್(ಸ) ಈ ರೀತಿ ವ್ಯಾಖ್ಯಾನಿಸಿರುವರು:

ಇನ್ನಲ್ಲಾಹ ಯಬ್‌ಅಸು ಲಿ ಹಾದಿಹಿಲ್ ಉಮ್ಮತಿ ಅಲಾ ರಅ್‌ಸಿ ಕುಲ್ಲಿ ಮಿಅತಿ ಸನ್‌ತಿನ್ ಮನ್‌ಯ್ಯುಜದ್ದಿದುಲಹಾ ದೀನ್‌ಹಾ (ಅಬೂದಾವೂದ್ ಸಂಪುಟ 2– ಬಾಬುಲ್ ಮಲಾಹಿಮ್)

ಎಂದರೆ, "ಅಲ್ಲಾಹನು ನನ್ನ ಅನುಯಾಯಿಗಳಿಗಾಗಿ ಪ್ರತಿಯೊಂದು ಶತಮಾನದ ಆರಂಭದಲ್ಲಿ ಧರ್ಮವನ್ನು ಸುಧಾರಣೆ ಮಾಡುವ ಮತ್ತು ಮುಸಲ್ಮಾನರ ಬಿಗಡಾಯಿಸಿದ ನಂಬಿಕೆಗಳನ್ನೂ ಆಚಾರಗಳನ್ನೂ ಪರಿಷ್ಕರಿಸುವ ಮಹಾತ್ಮರನ್ನು ನಿಯೋಗಿಸುವನು."

### ಮಸೀಹರ ಆಗಮನದ ಭವಿಷ್ಯನುಡಿ

ಸಾಮಾನ್ಯ ಮುಜದ್ದಿದರ ಹೊರತಾಗಿ ತನ್ನ ನಂತರ ಬರಲಿರುವ ಒಂದು ವಿಶಿಷ್ಟ ಅಂಧಕಾರಮಯವಾದ ಕಾಲದ ಕುರಿತು ಸಹ ಪೈಗಂಬರರು ಭವಿಷ್ಯ ನುಡಿದಿರುವರು. ಆ ಕಾಲದಲ್ಲಿ ವಿಶೇಷವಾಗಿ ದಜ್ಜಾಲನ ಪ್ರಭಾವ ಹೆಚ್ಚಾಗಿರುವುದೆಂದೂ ಆ ಕಾಲ ಅತ್ಯಂತ ಅಂಧಕಾರಮಯವಾದುವೆಂದೂ ಆ ಕಾಲದ ಪರಿವರ್ತನೆಗಾಗಿ ಒಬ್ಬ ದೊಡ್ಡ ಸುಧಾರಕರ ಅವಶ್ಯವಿರುವುದೆಂದೂ ಆ ಉದ್ದೇಶಕ್ಕಾಗಿ ಮಸೀಹರ ಸಮಾನರಾದ, ಮಹತ್ವಶಾಲಿಯಾದ ಒಬ್ಬ ಸುಧಾರಕರು ಆಗಮಿಸುವರೆಂದೂ ಪೈಗಂಬರರು ಭವಿಷ್ಯ ನುಡಿದಿರುವರು.

ವಲ್ಲದೀ ನಫ್ಸೀ ಬಿಯದಿಹೀ ಲಯೂಶಿಕುನ್ನ ಅನ್ ಯನ್‌ಜಿಲ ಫೀಕುಮ್ ಇಬ್ನುಮರ್‌ಯಮ ಹಕಮನ್ ಅದ್‌ಲನ್ ಫ ಯಕ್ಸಿರಸ್ಸಲೀಬ ವ ಯಖ್ತುಲುಲ್ ಖಿನ್‌ಜೀರ ವ ಯಲಅಲ್ ಜಿಜ್‌ಯ... ಕೈಫ ಅನ್‌ತುಮ್ ಇದಾ ನಜುಲಬ್ನು ಮರ್‌ಯಮ ಫೀಕುಮ್ ವ ಇಮಾಮುಕುಮ್ ಮಿನ್‌ಕುಮ್ (ಸಹೀಹ್ ಬುಖಾರಿ, ಕಿತಾಬ್ ಬದವುಲ್ ಖಲ್‌ಖ್, ಬಾಬ್ ನುಜೂಲು ಈಸಬ್ನು ಮರ್‌ಯಮ್)—

ನನ್ನ ಜೀವ ಯಾರ ಕೈಯಲ್ಲಿದೆಯೋ ಅವನ ಹೆಸರಲ್ಲಿ ಪ್ರಮಾಣ ಮಾಡಿ ಹೇಳುತ್ತಿದ್ದೇನೆ: ನಿಮ್ಮಲ್ಲಿ ಖಂಡಿತವಾಗಿಯೂ ಇಬ್ನು ಮರ್‌ಯಮ್ (ತನ್ನ ಸದೃಶ ವ್ಯಕ್ತಿಯ ರೂಪದಲ್ಲಿ) ಇಳಿಯುವರು. ಅವರು ಎಲ್ಲಾ ಧಾರ್ಮಿಕ ಭಿನ್ನಾಭಿಪ್ರಾಯಗಳ ಕುರಿತು ನ್ಯಾಯಾಧಿಪತಿಯಾಗಿ ತೀರ್ಮಾನಿಸುವರು. ಅವರ ತೀರ್ಮಾನ ಸತ್ಯ ಮತ್ತು ನ್ಯಾಯಯುತವಾಗಿರುವುದು. ಅವರು ಶಿಲುಬೆಯ ಪ್ರಬಲತೆಯ ಕಾಲದಲ್ಲಿ ಬರುವರು ಮತ್ತು ಆ ಪ್ರಾಬಲ್ಯವನ್ನು ಇಲ್ಲದಂತೆ ಮಾಡುವರು. ಆ ಕಾಲದಲ್ಲಿ ಹಂದಿಯ ಸ್ವಭಾವ ಹೊಂದಿದ ದುಷ್ಟರ ಪ್ರಭಾವ ಹೆಚ್ಚಾಗಿರುವುದು. ಮಸೀಹರು ಆ ದುಷ್ಟರನ್ನು ನಿಗ್ರಹಿಸುವರು. ಈ ಎಲ್ಲಾ ಕಾರ್ಯಗಳು ಸಾಕ್ಷ್ಯಾಧಾರಗಳ ಮೂಲಕವಾಗಿಯೂ, ಆಧ್ಯಾತ್ಮಿಕ ದೃಷ್ಟಾಂತಗಳ ಮೂಲಕವಾಗಿಯೂ ಸಾಧಿತವಾಗುವುವು. ಆ ಕಾಲದಲ್ಲಿ ಧರ್ಮಯುದ್ಧಗಳೂ ಜಿಝಿಯೂ ತೆರಿಗೆಯೂ ರದ್ದಾಗುವುವು. ಆ ಕಾಲದಲ್ಲಿ ನಿಮ್ಮ ಸ್ಥಿತಿ ಎಷ್ಟು ಉತ್ತಮವಾಗಿರುವುದು! ಮಸೀಹರು ನಿಮ್ಮಲ್ಲಿ ಇಳಿದು ನಿಮ್ಮ ಪೈಕಿ ನಿಮ್ಮ ಒಬ್ಬ ನಾಯಕರಾಗುವರು.

### ಇಮಾಮ್‌ಮಹದೀ ಅಥವಾ ಮುಹಮ್ಮದ್ ಪೈಗಂಬರರ ದ್ವಿತೀಯಾಗಮನದ ವಾರ್ತೆ

ಮೇಲಿನ ಭವಿಷ್ಯವಾಣಿಯ ಇನ್ನೊಂದು ಅಂಶವನ್ನು ವ್ಯಕ್ತಗೊಳಿಸುತ್ತಾ ಪವಿತ್ರ ಖುರ್‌ಆನಿನಲ್ಲಿ ದೇವರು ಈ ರೀತಿ ಹೇಳಿರುವನು:

"ಹೂವಲ್ಲದೀ ಬಅಸ ಫಿಲ್ ಉಮ್ಮಿಯ್ಯೀನ ರಸೂಲಮ್ಮಿನ್‌ಹುಮ್ ಯತ್‌ಲೂ ಅಲೈಹಿಮ್ ಆಯಾತಿಹೀ ವ ಯುಝಕ್ಕೀಹಿಮ್ ವ ಯುಅಲ್ಲಿಮುಹುಮುಲ್ ಕಿತಾಬ ವಲ್ ಹಿಕ್ಮತ ವ ಇನ್ ಕಾನೂ ಮಿನ್ ಕಬ್ಲು ಲಫೀ ಲಲಾಲಿನ್ ಮುಬೀನ್. ವ ಆಖರೀನ್ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್"— (62:3,4)

ದೇವರು ಅಶಿಕ್ಷಿತರಲ್ಲಿ (ಅರಬಿಗಳಲ್ಲಿ) ಅವರ ಪೈಕಿ ಒಬ್ಬರನ್ನು ಪ್ರವಾದಿಯನ್ನಾಗಿ ನೇಮಿಸಿರುವನು. ಆ ಪ್ರವಾದಿ ಅವರಿಗೆ ದೇವರ ವಚನಗಳನ್ನು ಓದಿ ಕೇಳಿಸುತ್ತಿದ್ದಾರೆ. ಅವರನ್ನು ಪರಿಶುದ್ಧರನ್ನಾಗಿ ಮಾಡಿ ಅವರಿಗೆ ಗ್ರಂಥವನ್ನೂ ಜ್ಞಾನವನ್ನೂ ಕಲಿಸುತ್ತಾರೆ. ಅವರು

(ಅರಬಿಗಳು) ಅದಕ್ಕಿಂತ ಮೊದಲು ಪ್ರತ್ಯಕ್ಷ ದುರ್ವೃತ್ತಿಯಲ್ಲಿ ಮುಳುಗಿದ್ದರು. ಇನ್ನೊಂದು ಸಂಘ ಸಹ ಇವರ ಜೊತೆಯಲ್ಲಿ ಸೇರಲಿದೆ. ಈ ಪ್ರವಾದಿ (ತನ್ನ ಪ್ರತಿಬಿಂಬ ಅಥವಾ ಪ್ರತಿಚ್ಛಾಯೆಯ ಮೂಲಕ) ಅವರಿಗೆ ತರಬೇತಿ ನೀಡುವರು. ಆ ಸಂಘ ಪ್ರಪಂಚದಲ್ಲಿ ಪ್ರತ್ಯಕ್ಷವಾಗಿ ಈ ಪ್ರವಾದಿಗಳ ಜಮಾಅತಿನಲ್ಲಿ ಈಗ ಸೇರ್ಪಡೆ ಹೊಂದಿಲ್ಲ. ಆದರೆ ಮುಂದೆ ಒಂದು ಕಾಲದಲ್ಲಿ ಈ ಸಂಘ ಪ್ರತ್ಯಕ್ಷವಾಗುವುದು.

**ಮಸೀಹ್ ಮತ್ತು ಮಹದೀ ಫಾರಸೀ ವಂಶಜರಲ್ಲಿ**

ಪೈಗಂಬರರ ವಚನಗಳ ಸಂಹಿತೆಯಾದ ಬುಖಾರಿ ಶರೀಫಿನಲ್ಲಿ ಒಂದು ವಚನ ಈ ರೀತಿಯ ವಿವರಣೆ ನೀಡುತ್ತದೆ:– ಸೂರತುಲ್ ಜುಮ್‌ಅದ ಮೇಲಿನ ವಚನಗಳು ಪೈಗಂಬರರಿಗೆ ಅವತೀರ್ಣವಾದಾಗ ಒಬ್ಬ ಶಿಷ್ಯ ಪೈಗಂಬರರೊಡನೆ-ಅಲ್ಲಾಹನ ರಸೂಲರೇ, ಈ 'ಆಖರೀನ್' (ಅಂತಿಮ ಕಾಲದವರು) ಎಂಬ ಜನರು ಯಾರು? ಎಂದು ಕೇಳಿದಾಗ ಪೈಗಂಬರರು ತಮ್ಮ ನೆಚ್ಚಿನ ಶಿಷ್ಯರಾದ ಸಲ್ಮಾನ್ ಫಾರಸೀ ಎಂಬವರ ಬೆನ್ನಿನ ಮೇಲೆ ಕೈಯಿರಿಸಿ ಈ ರೀತಿ ಹೇಳಿದರು:

> ಲೌ ಕಾನಲ್ ಈಮಾನು ಇಂದ ಸ್ಸುರಯ್ಯಾ ಲನಾಲಹು ರಜುಲುನ್ ಮಿನ್ ಹಾ ವುಲಾಯಿ (ಬುಖಾರಿ, ಕಿತಾಬು ತ್ತಫ್ಸೀರ್, ಬಾಬ್ ತಫ್ಸೀರ್ ಸೂರ ಜುಮ್‌ಅ).

"ಯಾವುದೇ ಕಾಲದಲ್ಲಿ ಸತ್ಯ ವಿಶ್ವಾಸ ಪ್ರಪಂಚದಿಂದ ಅಗೋಚರವಾಗಿ ಕೃತ್ತಿಕಾ ನಕ್ಷತ್ರದ ತನಕ ತಲುಪಿದರೂ ಫಾರಸೀ ವಂಶಜರ ಪೈಕಿ ಒಬ್ಬರು ಅದನ್ನು ಪುನಃ ಲೋಕಕ್ಕೆ ತರುವರು"

ಇನ್ನೊಂದು ಸಂದರ್ಭದಲ್ಲಿ ಪೈಗಂಬರರು ಈ ರೀತಿ ಹೇಳಿದರು:

"ಸಲ್ಮಾನು ಮಿನ್ನಾ ಅಹ್ಲುಲ್ ಬೈತಿ"
(ತಬ್ರಾನಿ ಕಬೀರ್ ವ ಮುಸ್ತದ್‌ರಕ್ ಹಾಕಿಮ್ ಬಹವಾಲ: ಜಾಮಿವುಸ್ಸಗೀರ್)

"ಸಲ್ಮಾನ್ ಫಾರಸೀ ನಮ್ಮ ಪೈಕಿ ನಮ್ಮ ಅಹ್ಲುಬೈತ್ ಎಂದರೆ ನಮ್ಮ ಕುಟುಂಬಕ್ಕೆ ಸೇರಿದವರಾಗಿರುವರು"

ಬರಲಿರುವ ಮಸೀಹ್ ಮತ್ತು ಮಹದೀ ಫಾರಸೀ ವಂಶಜರಾಗುವರೆಂದು ಈ ಹದೀಸು ಸೂಚಿಸುತ್ತದೆ. ಅಲ್ಲದೆ ಮಹ್‌ದಿ "ಅಹ್ಲುಬೈತ್" (ಪೈಗಂಬರರ ಕುಟುಂಬ)ಗೆ ಸೇರಿದವರಾಗುವರೆಂಬ ಭವಿಷ್ಯ ಸಹ ಈ ಹದೀಸಿನಿಂದ ಪೂರ್ಣಗೊಂಡಂತಾಯಿತು.

**ಆಧ್ಯಾತ್ಮಿಕ ಸೂರ್ಯನ ಆಧ್ಯಾತ್ಮಿಕ ಚಂದ್ರ**

ಪವಿತ್ರ ಖುರ್‌ಆನಿನ ಮೇಲಿನ ವಚನಗಳಿಂದಲೂ ಪೈಗಂಬರರ ನುಡಿ ಮುತ್ತುಗಳಿಂದಲೂ ಒಂದು ಸಂಗತಿ ಸುಸ್ಪಷ್ಟವಾಗುತ್ತದೆ. ಪೈಗಂಬರರ ಅನುಯಾಯಿಗಳ ಸುಧಾರಣೆಗೆ ಆಧ್ಯಾತ್ಮಿಕ ಖಲೀಫರ ಆಗಮನ ಆದಿಯಿಂದಲೇ ನಿಶ್ಚಯಿಸಲ್ಪಟ್ಟಿದೆ. ಈ ಎಲ್ಲಾ ಖಲೀಫರು ಅವರರವರ ಸ್ಥಾನಕ್ಕೆ ಯೋಗ್ಯವಾದ ರೀತಿಯಲ್ಲಿ ಪೈಗಂಬರ್ ಮುಹಮ್ಮದ್(ಸ)ರ ಆಧ್ಯಾತ್ಮಿಕ ಪ್ರಕಾಶದಿಂದ ಬೆಳಕನ್ನು ಪಡೆದು, ಸೂರ್ಯನಿಂದ ಬೆಳಕನ್ನು ಪಡೆದು ಚಂದ್ರ ಬೆಳಗಿಸುವಂತೆ ಪ್ರಪಂಚವನ್ನು ಬೆಳಗಿಸುವುದು ನಿಶ್ಚಯಿಸಲ್ಪಟ್ಟದ್ದಾಗಿದೆ. ಬೇರೆ ಬೇರೆ ರಾತ್ರಿಗಳ ಚಂದ್ರ ವಿಭಿನ್ನ ಪ್ರಕಾಶ ಶಕ್ತಿಯನ್ನು ಹೊಂದಿ ಉದಿಸುವ ಹಾಗೆ ಆಧ್ಯಾತ್ಮಿಕ ಲೋಕದಲ್ಲಿ ಸಹ ನಮ್ಮ ಪೈಗಂಬರ್(ಸ)ರಿಂದ ಪ್ರಕಾಶವನ್ನು ಪಡೆದು ಅವರ ಸುತ್ತಲೂ ತಿರುಗುವ ಚಂದ್ರರಿಗೆ ವಿಭಿನ್ನ ಶಕ್ತಿಯ ಪ್ರಕಾಶ ನಿಶ್ಚಯಿಸಲ್ಪಟ್ಟದ್ದುವು. ನಮ್ಮ ಪೈಗಂಬರ್ ಮುಹಮ್ಮದ್(ಸ)ರ ಅನಂತರ ಬರಲಿದ್ದ ಎಲ್ಲಾ ಖಲೀಫರೂ ಮುಜದ್ದಿದರೂ ದೇವರ ಅನುಗ್ರಹದಿಂದ ಆಧ್ಯಾತ್ಮಿಕ ಚಂದ್ರರ ಸ್ಥಾನವನ್ನು ಪಡೆದಿದ್ದರೆಂದು ನಾವು ನಂಬುತ್ತೇವೆ ಮತ್ತು ಅವರನ್ನು ಹೃತ್ಪೂರ್ವಕವಾದ ಆದರದಿಂದಲೂ ಸ್ನೇಹದಿಂದಲೂ ಕಾಣುತ್ತೇವೆ. ಆದರೆ ಹಿಜರಿ ಹದಿನಾಲ್ಕನೆಯ ಶತಮಾನದ ಆರಂಭದ ಕಾಲದಲ್ಲಿ ಉದಿಸಿದ ಚಂದ್ರ ಬದರೇ ಮುನೀರ್ (ಪ್ರಕಾಶಮಾನವಾದ ಪೂರ್ಣಚಂದ್ರ) ಆಗಿದ್ದು ಅದು ತನ್ನ ಸೂರ್ಯನ ಆಕೃತಿಯನ್ನು ಹೊಂದಿ ಅದರಿಂದ ಪ್ರತಿಬಿಂಬ ರೂಪದ ನುಬುವ್ವತ್ತಿನ ಉಡುಪನ್ನು ಗಳಿಸಿದೆ. ಈ ಬಿಂದುವಿನಿಂದ ನಮ್ಮ ಮತ್ತು ನಮ್ಮ ವಿರೋಧಿಗಳ ಭಿನ್ನಾಭಿಪ್ರಾಯಗಳು ಆರಂಭವಾಗುತ್ತವೆ.

**ಅಹ್ಮದಿಯಾ ಜಮಾಅತ್ ಮತ್ತು ಈ ಜಮಾಅತಿಗೆ ಸೇರದ ಮುಸಲ್ಮಾನರ ಮಧ್ಯವಿರುವ ಭಿನ್ನಾಭಿಪ್ರಾಯಗಳ ನಿಜ ಸ್ವರೂಪ**

ಅಹ್ಮದಿಯರ ಮತ್ತು ಅಹ್ಮದಿಯರಲ್ಲದ ಮುಸ್ಲಿಮರ ಮಧ್ಯವಿರುವ ಭಿನ್ನಾಭಿಪ್ರಾಯಗಳ ಯಥಾರ್ಥ

ಸ್ಥಿತಿ ಈ ರೀತಿಯಾಗಿದೆ: ನಮ್ಮ ವಿರೋಧಿಗಳಾದ ಈ ಕಾಲದ ಮೌಲವಿಗಳು ಹೇಳುವುದೇನೆಂದರೆ ಪೈಗಂಬರ್ ಮುಹಮ್ಮದ್(ಸ)ರೆಂಬ ಸೂರ್ಯನಿಂದ ಬೆಳಕನ್ನು ಪಡೆದು ಮೊದಲನೆಯ ರಾತ್ರೆಯ ಚಂದ್ರನುದಿಸಲು ಸಾಧ್ಯ, ಎರಡನೆಯ ರಾತ್ರಿಯ ಚಂದ್ರನುದಿಸಲು ಸಾಧ್ಯ, ಮೂರ ನೆಯ ರಾತ್ರೆಯ ಚಂದ್ರನುದಿಸಲು ಸಾಧ್ಯ, ನಾಲ್ಕನೆಯ ರಾತ್ರೆಯ ಚಂದ್ರನುದಿಸಲು ಸಾಧ್ಯ. ಇದೇ ರೀತಿ ಹನ್ನೊಂದನೇ, ಹನ್ನೆರಡನೇ, ಹದಿಮೂರನೆಯ ರಾತ್ರೆಯ ಚಂದ್ರನಾಗಲು ಸಾಧ್ಯ. ಆದರೆ ಹದಿನಾಲ್ಕನೆಯ ರಾತ್ರೆಯ ಚಂದ್ರನಾಗಲು ಸಾಧ್ಯವಿಲ್ಲ. ಏಕೆಂದರೆ ಹದಿನಾಲ್ಕನೆಯ ರಾತ್ರೆಯ ಚಂದ್ರ ತನ್ನ ಉರುಟಾದ ರೂಪವನ್ನು ಪೂರ್ಣವಾಗಿ ಪಡೆದು ಸೂರ್ಯನ ಸ್ವರೂಪವನ್ನು ಪ್ರತಿಬಿಂಬಿಸುವುದು. ಇಂತಹ ಚಂದ್ರೋದಯದಿಂದ ದೈವಿಕ ಸೂರ್ಯನಿಗೆ ಅವಮರ್ಯಾದೆ ಇದೆ. ಎಷ್ಟು ವ್ಯಸನಕರವಾಗಿದೆ ಈ ವಿಶ್ವಾಸ! ಇದು ಬಹಳ ನಿರರ್ಥಕ ವಿಶ್ವಾಸವಾಗಿದೆ. ಪ್ರಕಾಶವನ್ನು ಅಂಧಕಾರವೆಂದೂ ಮೇಲ್ಮೆಯನ್ನು ಕುಂದೆಂದೂ ಅಭಿಮಾನಕರವಾದ ಸಂಗತಿಯನ್ನು ಅವಮಾನಕರವೆಂದೂ ಗ್ರಹಿಸುವುದು ಎಷ್ಟು ಅಸಮಂಜಸವಾಗಿದೆ. ಓ ದೇವಾ! ನಮ್ಮ ದಾರಿ ತಪ್ಪಿದ ಸಹೋದರರ ಕಣ್ಣುಗಳನ್ನು ತೆರೆಯಿಸು. ನಮ್ಮ ಬಾಹ್ಯ ಪ್ರಪಂಚದಲ್ಲಿ ಹದಿನಾಲ್ಕನೆಯ ರಾತ್ರೆಯ ಚಂದ್ರ ಸೂರ್ಯನ ಅವಮಾನಕ್ಕೆ ಕಾರಣವಾಗುವುದೇ? ಈ ಜನರು ಆಧ್ಯಾತ್ಮಿಕ ಲೋಕದಲ್ಲಿ ಚಂದ್ರನ ಉದಯದಿಂದಾಗಿ ಸೂರ್ಯನ ಅವಮಾನವಾದಂತೆಯೆಂದು ಗ್ರಹಿಸಲು ಯಾವ ಆಧಾರವಿದೆ? ಸಹೋದರರೇ, ಕೇಳಿರಿ ಮತ್ತು ನೋಡಿರಿ- ಎಲ್ಲಿಯವರೆಗೆ ಚಂದ್ರ ಸೂರ್ಯನನ್ನು ಅನುಸರಿಸುತ್ತಾ ಇರುವುದೋ, ಎಲ್ಲಿಯ ವರೆಗೆ ಚಂದ್ರ ಸೂರ್ಯನಿಂದ ಪ್ರಕಾಶಗಳಿಸುತ್ತಿರುವುದೋ ಎಲ್ಲಿಯ ವರೆಗೆ ಚಂದ್ರ ಸೂರ್ಯನ ಸುತ್ತಲೂ ತಿರುಗುತ್ತಿರುವುದೋ ಅಲ್ಲಿಯ ವರೆಗೆ ಚಂದ್ರನ ಎಲ್ಲಾ ಶಕ್ತಿಗಳೂ ಸೂರ್ಯನ ಶಕ್ತಿಯಾಗಿರುವುದು. ಚಂದ್ರನಿಗೆ ಸ್ವಯಂ ಯಾವುದೇ ಶಕ್ತಿ ಇರುವುದಿಲ್ಲ. ಅದು ಪ್ರತಿಬಿಂಬವಾಗಿದೆ, ಸ್ವಯಂ ವಸ್ತುವಲ್ಲ. ಅದು ಅವಲಂಬಿತ; ಸ್ವತಂತ್ರವಲ್ಲ. ನೀವು ಪುನಃ ಆಲೋಚಿಸಿ ತಿಳಿಯಲು ಯತ್ನಿಸಿರಿ: ಸೂರ್ಯನ ಶಕ್ತಿ ಸಾಮರ್ಥ್ಯ ಪ್ರಥಮ ರಾತ್ರೆಯ, ದ್ವಿತೀಯ ರಾತ್ರೆಯ ಅಥವಾ ತೃತೀಯ ರಾತ್ರೆಯ ಚಂದ್ರನನ್ನು ಸೃಷ್ಟಿಸುವುದರಲ್ಲಿ ಹೆಚ್ಚು ವ್ಯಕ್ತವಾಗುತ್ತಿದೆಯೋ ಅಥವಾ ಹದಿನಾಲ್ಕನೆಯ ರಾತ್ರೆಯ ಚಂದ್ರನನ್ನು ಸೃಷ್ಟಿಸುವುದರಲ್ಲಿ ಹೆಚ್ಚು ವ್ಯಕ್ತವಾಗುತ್ತಿದೆಯೋ? ಹದಿನಾಲ್ಕನೆಯ ರಾತ್ರೆಯ ಚಂದ್ರ ಸೂರ್ಯನ ಪ್ರಕಾಶವನ್ನೇ ಪಡೆಯುತ್ತದೆಯಲ್ಲವೆ? ಸೂರ್ಯನ ರೂಪವನ್ನೇ ಪಡೆಯುತ್ತದೆಯಲ್ಲವೇ? ಮತ್ತು ತನ್ನ ಪ್ರಜ್ವಲಿಸುವ ಪ್ರಕಾಶದ ಮೂಲಕ ಲೋಕವನ್ನೆಲ್ಲಾ ಬೆಳಗಿಸುತ್ತದೆಯಲ್ಲವೆ?

## ಭಿನ್ನಾಭಿಪ್ರಾಯದ ಕೇಂದ್ರ ಬಿಂದು

ಅಹ್ಮದಿಯಾ ಜಮಾಅತ್ ಮತ್ತು ಇತರ ಮುಸಲ್ಮಾನರ ಮಧ್ಯವಿರುವ ಭಿನ್ನಾಭಿಪ್ರಾಯಗಳ ಕೇಂದ್ರ ಬಿಂದು ಇದಾಗಿದೆ: ನಮ್ಮ ವಿರೋಧಿಗಳಾದ ಮೌಲ್ವಿಗಳು ಪೈಗಂಬರ್(ಸ)ರ ನಂತರ ಯಾವುದೇ ಪ್ರವಾದಿ ಶರೀಅತಿನೊಂದಿಗೆಯಾಗಲೀ ಶರೀಅತ್ ಇಲ್ಲದೆಯಾಗಲೀ ಬರಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಪ್ರತಿಬಿಂಬಕ ನಬಿಯಾಗಲೀ, ಸ್ವಯಂಸ್ಥಾನ ಪಡೆದ (ಮುಸ್ತಖಿಲ್) ನಬಿಯಾಗಲೀ, ಅನುಯಾಯಿ (ತಾಬಿಅ್) ಅಥವಾ ಸ್ವತಂತ್ರ ಪ್ರವಾದಿಯಾಗಲೀ ಬರಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. (ಆದರೆ ನಮ್ಮ ವಿರೋಧಿಗಳು ತಮ್ಮ ಅಂಗೀಕೃತ ನಂಬಿಕೆಗಳಿಗೆ ವಿರುದ್ಧವಾಗಿ ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ಆಕಾಶದಿಂದಿಳಿಸಿ ಅವರ ಪ್ರವಾದಿತ್ವದ ಸಿಂಹಾಸನವನ್ನು ಪುನಃ ಸ್ಥಾಪಿಸಲು ಪಟ್ಟುಹಿಡಿಯುತ್ತಾರೆ). ನಮ್ಮ ವಿಶ್ವಾಸವೇನೆಂದರೆ: ಪೈಗಂಬರರು ತಂದ ಶರೀಅತು ಕೊನೆಯ ಶರೀಅತಾಗಿದೆ. ಪೈಗಂಬರರ ನಂತರ ಯಾವುದೇ ತಶ್‌ರೀಈ (ಶರೀಅತ್ ತರುವ) ನಬಿಯಾಗಲೀ ಮುಸ್ತಖಿಲ್ (ಸ್ವಯಂ ಸ್ಥಾನ ಪಡೆದ)ನಬಿಯಾಗಲೀಬರಲು ಸಾಧ್ಯವಿಲ್ಲ.ಈ ನುಬುವ್ವತ್‌ಗಳ ಬಾಗಿಲು ಕೊನೆಯ ದಿನದ ತನಕ ಮುಚ್ಚಲ್ಪಟ್ಟಿದೆ. ಆದರೆ ಮುಹಮ್ಮದ್ ಪೈಗಂಬರ್ (ಸ)ರ ಪ್ರಕಾಶದಿಂದ ಪ್ರಕಾಶ ಪಡೆದು ಅವರ ಪ್ರತಿಬಿಂಬವಾಗಿ ಅವರ ಶರೀಅತಿನ ಸೇವಕರಾಗಿ ಒಬ್ಬ ವ್ಯಕ್ತಿ ಪ್ರವಾದಿತ್ವದ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಪಡೆಯಲು ಸಾಧ್ಯ. ಹದಿನಾಲ್ಕನೆಯ ರಾತ್ರೆಯ ಚಂದ್ರ, ಸೂರ್ಯನಿಂದ ಪ್ರಕಾಶವನ್ನು ಪಡೆದು ಸೂರ್ಯನನ್ನು ಅನುಸರಿಸಿ ಸೂರ್ಯನ ಪ್ರತಿಚ್ಛಾಯೆಯಂತೆ ಉದಿಸುವುದು ಇದಕ್ಕೆ ತಕ್ಕುದಾದ ಉದಾಹರಣೆಯಾಗಿದೆ. ಇಂತಹ ಚಂದ್ರನ ಉದಯವನ್ನು ಯಾವುದೇ ಬುದ್ಧಿವಂತನಾದ ಮನುಷ್ಯ ಸೂರ್ಯ

ನಿಗೆ ಅವಮಾನಕರವೆಂದು ಭಾವಿಸಲು ಸಾಧ್ಯವಿಲ್ಲ. ಈ ಚಂದ್ರ ಸೂರ್ಯನ ಮಹತ್ತಾದ ಶಕ್ತಿಯ ಪ್ರತೀಕವಾಗಿದೆ. ಅದು ಸೂರ್ಯನ ಪ್ರತಿಬಿಂಬವಲ್ಲದೆ ಸೂರ್ಯನಲ್ಲ. ಅದು ಅವಲಂಬಿ, ಸ್ವತಂತ್ರವಾಗಿರುವುದಿಲ್ಲ.

## ಮೂರು ವಿಧದ ಪ್ರವಾದಿತ್ವ

ಮೇಲಿನ ಪ್ರಾರಂಭಿಕ ಅರಿಕೆಯ ನಂತರ ನಾನು ನನ್ನ ಮುಖ್ಯ ವಿಷಯವಾದ ಖತ್‌ಮೆನುಬುವ್ವತ್ (ಪ್ರವಾದಿತ್ವ ಸಮಾಪ್ತಿ)ನ ವಿವರಣೆ ಮತ್ತು ವಿಶದೀಕರಣದ ಕಡೆಗೆ ಬರುತ್ತೇನೆ: ಪವಿತ್ರ ಖುರ್‌ಆನ್, ಪೈಗಂಬರರ ವಚನಗಳು ಮತ್ತು ಚರಿತ್ರೆಯ ಆಧಾರಗಳಿಂದ ಪ್ರವಾದಿತ್ವ ಮೂರು ವಿಧಿಗಳಲ್ಲಿವೆ ಎಂದು ಅಹ್ಮದಿಯಾ ಜಮಾಅತಿನ ನಂಬಿಕೆಯಾಗಿದೆ.

ಒಂದನೇಯದಾಗಿ, ಹೊಸ ಶರೀಅತ್ (ಧರ್ಮಶಾಸ್ತ್ರ) ತರುವ ಪ್ರವಾದಿಗಳು. ಉದಾಹರಣೆಗೆ, ಹಝ್ರತ್ ಮೂಸಾ (ಅ) ತೌರಾತಿನ ಶರೀಅತ್ ತಂದರು. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಮುಸ್ತಫಾ (ಸ) ಖುರ್‌ಆನ್ ಶರೀಫಿನ ಶರೀಅತಿನೊಂದಿಗೆ ಕಳುಹಿಸಲ್ಪಟ್ಟರು. ಇಂತಹ ಪ್ರವಾದಿಗಳನ್ನು "ತಶ್‌ರೀಈ ನಬಿ" ಎಂದೂ "ಸಾಹಿಬೆಶರೀಅತ್ ನಬಿ" ಎಂದೂ ಕರೆಯುತ್ತಾರೆ.

ಎರಡನೇಯದಾಗಿ, ಕೆಲವು ಪ್ರವಾದಿಗಳು ಹೊಸ ಶರೀಅತ್ ತರುವುದಿಲ್ಲ. ಅವರು ಅವರ ಮೊದಲು ಬಂದ ಯಾವುದಾದರೂ ಶರೀಅತಿನ ಸೇವೆಗಾಗಿ ನಿಯುಕ್ತರಾಗಿರುತ್ತಾರೆ. ಆದರೆ ಅವರಿಗೆ ನುಬುವ್ವತ್ ನೇರವಾಗಿ, ಬೇರೆ ನಬಿಗಳನ್ನು ಆಶ್ರಯಿಸದೆ ದೊರೆತ ಕಾರಣ ಅವರ ನುಬುವ್ವತ್, "ಮುಸ್ತಖಿಲ್ ನುಬುವ್ವತ್" ಎಂದು ಕರೆಯಲ್ಪಡುತ್ತದೆ. ಅವರಿಗೆ ಪ್ರವಾದಿತ್ವ ಪದವಿ ದೊರೆತುದು ಅವರ ಮೊದಲಿನ ಯಾವುದೇ ಪ್ರವಾದಿಯನ್ನು ಪರಿಪೂರ್ಣವಾಗಿ ಅನುಸರಿಸಿದ ಕಾರಣದಿಂದಾಗಿರುವುದಿಲ್ಲ. ಅವರಿಗೆ ನುಬುವ್ವತ್ ದೇವರ ಅನುಗ್ರಹವಾಗಿ ನೇರವಾಗಿ ಲಭಿಸುತ್ತದೆ. ಉದಾಹರಣೆಗೆ, ಹಝ್ರತ್ ಮೂಸಾ (ಅ)ರ ನಂತರ ಹಝ್ರತ್ ದಾವೂದ್, ಹಝ್ರತ್ ಸುಲೈಮಾನ್, ಹಝ್ರತ್ ಝಕರಿಯ್ಯಾ, ಹಝ್ರತ್ ಯಹ್‌ಯಾ ಮತ್ತು ಹಝ್ರತ್ ಈಸಾ (ಅಲೈಹಿಮುಸ್ಸಲಾಮ್) ಇದೇ ರೀತಿಯ ಪ್ರವಾದಿಗಳಾಗಿದ್ದರು. ಈ ಎಲ್ಲಾ ಪ್ರವಾದಿಗಳು ಪವಿತ್ರ ಖುರ್‌ಆನ್, ತೌರಾತ್ ಮತ್ತು ಇಂಜೀಲ್ ಸೂಚಿಸುವಂತೆ ಪ್ರವಾದಿ ಮೂಸಾ (ಅ)ರ ಶರೀಅತಿನ ಅನುಸರಣೆ ಮಾಡುವವರಾಗಿದ್ದರು ಮತ್ತು ಆ ಶರೀಅತಿನ ಸೇವೆಗಾಗಿ ನಿಯುಕ್ತರಾಗಿದ್ದರು. ಹೀಗಿದ್ದರೂ ಸಹ ಅವರು ಮುಸ್ತಖಿಲ್ (ಸ್ವಯಂ ಸ್ಥಾನ ಪಡೆದ) ನಬಿಗಳಾಗಿದ್ದರು. ಅವರಿಗೆ ಪ್ರವಾದಿತ್ವ ಸ್ಥಾನ ದೊರೆಯಲು ಮೂಸಾನಬಿ(ಅ)ರ ಅನುಸರಣೆ ಕಾರಣವಾಗಿರಲಿಲ್ಲ. ಅವರಿಗೆ ಈ ಪದವಿ ದೇವರಿಂದ ನೇರವಾಗಿ ಅನುಗ್ರಹ ರೂಪದಲ್ಲಿ ದೊರೆಯಿತು ಮತ್ತು ಅನಂತರ ಅವರನ್ನು ಮೂಸಾನಬಿ(ಅ)ರ ಶರೀಅತಿನ ಸೇವೆಗಾಗಿ ನೇಮಿಸಲಾಯಿತು. ಇಂತಹ ನಬಿಗಳು ಶರೀಅತಿಲ್ಲದ ಪ್ರವಾದಿಗಳಾಗಿದ್ದರೂ "ಮುಸ್ತಖಿಲ್ ನಬಿ" ಎಂದು ಕರೆಯಲ್ಪಡುತ್ತಾರೆ. ಇದೇ ಕಾರಣದಿಂದ (ಇದೊಂದು ನೆನಪಿಡಬೇಕಾದ ಅಂಶವಾಗಿದೆ.) ಇಂತಹ ನಬಿಗಳು ತಮ್ಮ ಹಿಂದಿನ ತಶ್‌ರೀಈ ನಬಿಯ ಕೆಳಗಿದ್ದರೂ ಆ ತಶ್‌ರೀಈ ನಬಿಯ ಸೇವಕರಾಗಿರುವ ಮನೋಭಾವ ಇವರಿಗೆ ಇರುವುದಿಲ್ಲ. ಉದಾಹರಣೆಗೆ ಹಝ್ರತ್ ಈಸಾ(ಅ) ಹಝ್ರತ್ ಮೂಸಾ(ಅ)ರ ಶರೀಅತಿನ ಅಡಿಯಾಳಾಗಿದ್ದರೂ ಹಝ್ರತ್ ಮೂಸಾ(ಅ)ರ ಕುರಿತು ಯಾವುದೇ ಪ್ರತ್ಯೇಕ ಪ್ರೀತಿ ಅಥವಾ ಗೌರವ ಕಾಣುವುದಿಲ್ಲ. ಅವರ ಉದಾಹರಣೆ ಒಂದು ಜಿಲ್ಲೆಯ ಮೆಜಿಸ್ಟ್ರೇಟ್ ಅಥವಾ ಇ.ಎ.ಸಿ. (ಎಕ್ಸ್ಟ್ರಾ ಅಸಿಸ್ಟೆಂಟ್ ಕಮೀಷನರ್)ಯನ್ನು ಅವಶ್ಯ ಬಂದಂತೆ ಬೇರೊಂದು ಜಿಲ್ಲೆಯ ಡಿಪ್ಯುಟಿ ಕಮಿಷನರ ಕೆಳಗೆ ನೇಮಿಸಿದಂತೆ ಇದೆ.

ಮೂರನೇಯ ರೀತಿಯ ಪ್ರವಾದಿ ಯಾವುದೇ ಶರೀಅತ್ ತಂದ ನಬಿಯಾಗಿರುವುದಿಲ್ಲ; ಅಲ್ಲದೆ ಆ ನಬಿ ನೇರವಾಗಿ ಪ್ರವಾದಿತ್ವ ಸ್ಥಾನವನ್ನು ಪಡೆದ ಮುಸ್ತಖಿಲ್ ನಬಿಯಾಗಿಯೂ ಇರುವುದಿಲ್ಲ. ಇಂತಹ ನಬಿಯ ನುಬುವ್ವತ್, ಆ ನಬಿ ಅನುಸರಿಸುವ ನಬಿಯ ನೆರಳಿನ ರೂಪದಲ್ಲಿಯೂ ಆ ನಬಿಯ ಪ್ರತಿಬಿಂಬದ ರೂಪದಲ್ಲಿಯೂ ಆ ನಬಿಯ ಒಂದು ಭಾಗವಾಗಿ ಪರಿಣಮಿಸಿ ಆ ನಬಿಯ ಅನುಸರಣೆಯ ಫಲವಾಗಿ ಅವರಿಂದಲೇ ಅನುಗ್ರಹ ಪಡೆದು ಅವರ ಪ್ರಕಾಶದಿಂದಲೇ ಬೆಳಕನ್ನು ಪಡೆದು ನುಬುವ್ವತ್ತಿನ ಬಹುಮಾನ ಗಳಿಸುತ್ತಾರೆ. ಅವರ ಉದಾಹರಣೆ ಈ ರೀತಿಯಾಗಿದೆ: ಒಂದು ತೋಟದ ಮಾಲಿಗೆ ಅವನ ತೋಟದ ರಕ್ಷಣೆಗಾಗಿ ಹೊರಗಿನಿಂದ ಯಾರನ್ನೂ ತರದೆ ಅವನ ಮಗನನ್ನೇ ಸಹಾಯಕನನ್ನಾಗಿ ನೇಮಿಸಿದಂತೆ ಆಗಿದೆ. ಒಬ್ಬ ಮಗನಿಗೆ ತನ್ನ ತಂದೆಯ ಮತ್ತು ಆತನ

ನೆಟ್ಟು ಬೆಳೆಸಿದ ತೋಟದ ಮೇಲೆ ಇರುವ ಗೌರವ, ಸ್ನೇಹ, ಮತ್ತು ಸೇವಾಭಾವ ಹೊರಗಿನಿಂದ ನೇಮಿಸಲ್ಪಟ್ಟ ಸಹಾಯಕನಿಗೆ ಖಂಡಿತಾ ಇರಲು ಸಾಧ್ಯವಿಲ್ಲ. ಇದೇ ಕಾರಣದಿಂದ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರಲ್ಲಿ ಹಝ್ರತ್ ಪೈಗಂಬರ್ ಮುಹಮ್ಮದ್(ಸ)ರ ಕುರಿತು ಅನನ್ಯ ಗೌರವಭಾವವೂ ಹೃತ್ಪೂರ್ವಕವಾದ ಸ್ನೇಹವೂ ತುಂಬಿರುವುದು ಕಾಣುತ್ತೇವೆ. ಇದರ ಸಾವಿರದಲ್ಲೊಂದು ಭಾಗ ಸಹ ಇಸ್ರಾಯಿಲ್ ನಬಿಗಳಲ್ಲಿ ಮೂಸಾ(ಅ) ಕುರಿತು ಕಂಡು ಬರುವುದಿಲ್ಲ. ಇದರ ಕಾರಣ ಇದಾಗಿದೆ: ಇಸ್ರಾಯಿಲ್ ನಬಿಗಳು ಹೊರಗಿನಿಂದ ಮೂಸಾ(ಅ)ರ ತೋಟದ ಮೇಲ್ವಿಚಾರಣೆಗಾಗಿ ನಿಯಮಿಸಲ್ಪಟ್ಟ ಮಾಲಿಗಳಂತಿದ್ದು ಅಹ್ಮದಿಯಾ ಜಮಾಅತಿನ ಸ್ಥಾಪಕರು ದೇವರ ದಯಾನುಗ್ರಹಗಳಿಂದಪ್ರವಾದಿ ಮುಹಮ್ಮದ್(ಸ)ರ ಶಿಷ್ಯರೂ ಅವರ ಆಧ್ಯಾತ್ಮಿಕ ಪುತ್ರರೂ ಅವರ ಪ್ರತಿಚ್ಛಾಯೆಯೂ ಆಗಿದ್ದರು. ಇದೇ ಕಾರಣದಿಂದ ಅಹ್ಮದಿಯಾ ಜಮಾಅತಿನ ಸ್ಥಾಪಕರಿಗೆ ಹಝ್ರತ್ ಮುಹಮ್ಮದ್ ಮುಸ್ತಫಾ (ಸ.)ರ ಕುರಿತು ಹೃತ್ಪೂರ್ವಕವಾದ ಸ್ನೇಹವು ಕಂಡು ಬರುತ್ತಿದ್ದು ಇದರ ಉದಾಹರಣೆ ಬೇರೆಲ್ಲೂ ದೊರೆಯುವುದಿಲ್ಲ, ಒಬ್ಬ ವ್ಯಕ್ತಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಬರೆದ ಗ್ರಂಥಗಳನ್ನು ಅಧ್ಯಯನ ಮಾಡಿ ಅದನ್ನು ಇಂಜೀಲಿನಲ್ಲಿ ಹಝ್ರತ್ ಮೂಸಾ(ಅ)ರ ಕುರಿತು ಹಝ್‌ರತ್ ಈಸಾ(ಅ) ನುಡಿದ ವಚನಗಳೊಂದಿಗೆ ತಾರತಮ್ಯ ಪಡಿಸಿ ನೋಡಿದರೆ ನಮ್ಮ ವಾದದ ಸತ್ಯತೆಯು ಹಗಲಿನಂತೆ ಪ್ರಕಾಶಮಾನವಾಗಿ ಪ್ರತ್ಯಕ್ಷವಾಗುವುದು. ಉದಾಹರಣೆಗೆ ಹಝ್ರತ್ ಅಹ್ಮದ್‌ರವರು ಮುಹಮ್ಮದ್ ಪೈಗಂಬರ್(ಸ)ರ ಕುರಿತು ಬರೆದ ಈ ಕೆಳಗಿನ ಪದ್ಯವನ್ನು ನೋಡಿರಿ. ಅವರು ಪೈಗಂಬರರ ಕುರಿತು ಎಂತಹ ಗಾಢವಾದ ಸ್ನೇಹ ಹೊಂದಿದ್ದರೆಂಬುದು ಇದರಿಂದ ವ್ಯಕ್ತವಾಗುವುದು.

ಒಹ್‌ಪೇಶ್‌ವಾ ಹಮಾರಾ ಜಿಸ್ ಸೆ ಹೈನೂರ್ ಸಾರಾ। ನಾಮ್ ಉಸ್ ಕಾಹೈ ಮುಹಮ್ಮದ್ ದಿಲ್‌ಬರ್ ಮೇರಾ ಯಹೀಹೈ॥ ಸಬ್ ಪಾಕ್ ಹೈಂ ಪಯಂಬರ್ ಎಕ್ ದೂಸ್‌ರೇ ಸೆ ಬೆಹ್‌ತರ್। ಲೇಕ್ ಅಝ್ ಖುದಾಯೆ ಬರ್‌ತರ್ ಖೈರುಲ್‌ವರಾ ಯಹೀ ಹೈ॥ ಉಸ್ ನೂರ್ ಪರ್ ಫಿದಾಹೂಂ ಉಸ್ ಕಾ ಹೀ ಮೈಂ ಹುವಾ ಹೂಂ। ಒಹ್ ಹೈ ಮೈಂ. ಚೀಜ್ ಕ್ಯಾ ಹೂಂ ಬಸ್ ಫೈಸಲಾ ಯಹೀ ಹೈ॥ ಸಬ್ ಹಮ್‌ನೆ ಉಸ್ ಸೆ ಪಾಯಾ ಶಾಹಿದ್ ಹೈ ತೂ ಖುದಾಯಾ। ಒಹ್ ಜಿಸ್ ನೆ ಹಖ್ ದಿಖಾಯಾ ಒಹ್‌ಮಹ್ ಲಿಖಾ ಯಹೀ ಹೈ॥ ದಿಲ್ ಮೇ ಯಹೀ ಹೈ ಹರ್‌ದಮ್ ತೇರಾ ಸಹೀಫ ಚೂಮೂಂ। ಖುರ್‌ಆನ್ ಕೇ ಗಿರ್ದ್ ಘೂಮೂಂ ಕಅಬ ಮೇರಾ ಯಹೀ ಹೈ॥

(ಆ ನಮ್ಮ ನೇತಾರ; ಅವರಿಂದಲೇ ಎಲ್ಲಾ ಪ್ರಕಾಶ, ಅವರ ಹೆಸರು ಮುಹಮ್ಮದ್; ನನ್ನ ಹೃದಯದಲ್ಲಿ ಅವರೇ ಇದ್ದಾರೆ. ಎಲ್ಲಾ ಪ್ರವಾದಿಗಳೂ ಪರಿಶುದ್ಧರು; ಒಬ್ಬರಿಗಿಂತ ಒಬ್ಬರು ಶ್ರೇಷ್ಠರು. ಆದರೆ ದೇವ ನಿಯೋಜಿತರಲ್ಲಿ ಸರ್ವ ಶ್ರೇಷ್ಠ ನಮ್ಮ ಪೈಗಂಬರ್. ಆ ಪ್ರಕಾಶದಲ್ಲಿ ನಾನು ಮುಳುಗಿದ್ದೇನೆ; ನಾನು ಅದರದ್ದೇ ಆಗಿದ್ದೇನೆ. ಅವರು ಮಾತ್ರ ಶ್ರೇಷ್ಠ, ನಾನು ದೀನ; ಇದೇ ತೀರ್ಮಾನ. ನಾವು ಎಲ್ಲವನ್ನು ಅವರಿಂದಲೇ ಪಡೆದೆವು; ಓ ದೇವಾ ನೀನು ಅದಕ್ಕೆ ಸಾಕ್ಷಿ. ಸತ್ಯವನ್ನು ತೋರಿಸಿದ; ದೇವರ ದರ್ಶನ ಮಾಡಿಸುವ ಶಕ್ತಿ ಅವರೇ ಆಗಿದ್ದಾರೆ. ಪ್ರತಿಕ್ಷಣ ನಿನ್ನ ಗ್ರಂಥವನ್ನು ಚುಂಬಿಸಬೇಕೆಂದು ನನ್ನ ಹೃದಯ ಆಶಿಸುತ್ತದೆ. ನನ್ನ ಕಅಬ ಖುರ್‌ಆನ್ ಆಗಿದೆ; ಅದರ ಸುತ್ತ ಪ್ರದಕ್ಷಿಣೆ ಮಾಡುವುದೇ ನನ್ನ ಆಶೆ).

## ಮೂರು ವಿಧ ಪ್ರವಾದಿತ್ವದ ಸಾಂಕೇತಿಕ ನಾಮಗಳು

ಒಟ್ಟಾರೆ ಹೇಳುವುದಾದರೆ, ಮೂರು ವಿಧದ ಪ್ರವಾದಿತ್ವಗಳಿವೆ. ಪವಿತ್ರ ಖುರ್‌ಆನ್ ಪ್ರವಾದಿಗಳ ಸ್ಥಾನ ವ್ಯತ್ಯಾಸಗಳ ಕುರಿತು ವಿವರಿಸುವುದಾದರೂ ತಾತ್ವಿಕವಾಗಿ ನೋಡಿದರೆ ನಬಿಗಳು ಮೇಲೆ ವಿವರಿಸಿದ ಮೂರು ವಿಧದ ನುಬುವ್ವತ್‌ಗಳಲ್ಲಿ ಒಂದು ವಿಧದ ನುಬುವ್ವತ್ತನ್ನು ಹೊಂದಿರುತ್ತಾರೆ.

ಒಂದನೇಯದಾಗಿ "ತಶ್‌ರೀಈ ನುಬುವ್ವತ್". ಈ ಪ್ರವಾದಿತ್ವದ ಜೊತೆಯಲ್ಲಿ ಒಂದು ಹೊಸ ಶರೀಅತ್ ಇರುತ್ತದೆ. ಹಝ್‌ರತ್ ಮೂಸಾ ಮತ್ತು ನಮ್ಮ ಪೈಗಂಬರ್(ಸ)ರ ನುಬುವ್ವತ್ ಈ ರೀತಿಯಾಗಿತ್ತು, ಈ ಪ್ರವಾದಿತ್ವ "ಹಕೀಕೀ ನುಬುವ್ವತ್" ಎಂಬ ಹೆಸರಿನಲ್ಲೂ ಕರೆಯಲ್ಪಡುತ್ತದೆ. ನುಬುವ್ವತ್ ಶೃಂಖಲೆಯು ಆರಂಭ ಶರೀಅತಿನೊಂದಿಗೆ ತೊಡಗುವ ಕಾರಣ ಈ ನುಬುವ್ವತ್ತಿಗೆ

ಹಖೀಖೀ (ಯಥಾರ್ಥ) ನುಬುವ್ವತ್ ಎಂಬ ಹೆಸರು ನೀಡಲಾಗಿದೆ. ಬಾಕಿ ಎರಡೂ ತರದ ಪ್ರವಾದಿತ್ವ ಇದರ ಅನಂತರ ಬರುತ್ತದೆ. ಆದುದರಿಂದ ಆಲೋಚಿಸಿ ನೋಡಿದರೆ ತಶ್‌ರೀಈ ನುಬುವ್ವತ್ ಮಾತ್ರ ಹಖೀಖೀ ನುಬುವ್ವತ್ ಎಂಬ ಹೆಸರು ಗಳಿಸಲು ಅರ್ಹವಾಗಿದೆ.

ಎರಡನೇಯದಾಗಿ ಶರೀಅತ್ ಇಲ್ಲದ "ಮುಸ್ತಖಿಲ್ ನುಬುವ್ವತ್." ಈ ಪ್ರವಾದಿತ್ವದ ಜೊತೆಯಲ್ಲಿ ಶರೀಅತ್ ಇರುವುದಿಲ್ಲ. ಅದರೆ ಈ ಪ್ರವಾದಿತ್ವ ನೇರವಾಗಿ ದೇವರಿಂದ ಲಭಿಸುತ್ತದೆ. ಈ ನುಬುವ್ವತ್ ದೊರೆಯಲು ಹಿಂದಿನ ಯಾವುದೇ ಪ್ರವಾದಿಯ ಅನುಗ್ರಹ ಯಾವುದೇ ಪಾತ್ರ ವಹಿಸುವುದಿಲ್ಲ. ಉದಾಹರಣೆಗೆ ಹಝ್ರತ್ ದಾವೂದ್ (ಅ) ಮತ್ತು ಹಝ್ರತ್ ಈಸಾ(ಅ)ರ ಪ್ರವಾದಿತ್ವ. ಅವರು ಮೂಸಾ(ಅ)ರ ನುಬುವ್ವತ್ತಿನ ಸೇವಕರಾಗಿದ್ದರು. ಆದರೆ ಅವರ ಪ್ರವಾದಿತ್ವದಲ್ಲಿ ಹಝ್ರತ್ ಮೂಸಾ(ಅ)ರ ಅನುಗ್ರಹ ದಾನಕ್ಕೆ ಯಾವುದೇ ಸ್ಥಾನವಿರಲಿಲ್ಲ. ಅವರು ನೇರವಾಗಿ ದೇವರಿಂದ ಸ್ವತಂತ್ರವಾಗಿ ನುಬುವ್ವತ್‌ಗಳಿಸಿದರು. ಈ ನುಬುವ್ವತ್ "ಮುಸ್ತಖಿಲ್ ನುಬುವ್ವತ್" ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಮುಸ್ತಖಿಲ್ ಎಂಬುದರ ಅರ್ಥ ಬೇರೆ ಯಾವುದೇ ಸಹಾಯವಿಲ್ಲದೆ ಸ್ವತಃ ನೆಲೆ ನಿಲ್ಲುವುದು ಎಂದು.

ಮೂರನೇಯದು ಪ್ರತಿಬಿಂಬ ಅಥವಾ ಪ್ರತಿಚ್ಛಾಯೆ ರೂಪದ "ಝಿಲ್ಲೀ ನುಬುವ್ವತ್" ಆಗಿದೆ. ಅದು ಆ ನುಬುವ್ವತ್ ಪಡೆದ ಪ್ರವಾದಿ ಹಿಂದಿನ ಪ್ರವಾದಿಯನ್ನು ಪೂರ್ಣವಾಗಿ ಅನುಸರಿಸಿದ ಪರಿಣಾಮವಾಗಿ ದೊರಕುವುದಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರಿಗ ದೊರೆತ ಪ್ರವಾದಿತ್ವ ಈ ರೀತಿಯದಾಗಿದೆ. ಈ ನುಬುವ್ವತ್ "ಝಿಲ್ಲೀ ನುಬುವ್ವತ್" ಎಂದು ಕರೆಯಲ್ಪಡುತ್ತದೆ. ಇಂತಹ ನುಬುವ್ವತ್ ಪಡೆದವರು ಒಂದು ದೃಷ್ಟಿಯಲ್ಲಿ ನಬಿಯೆಂದೂ ಇನ್ನೊಂದು ದೃಷ್ಟಿಯಲ್ಲಿ "ಉಮ್ಮತೀ" ಎಂದೂ ಕರೆಯಲ್ಪಡುತ್ತಾರೆ.

### ಪ್ರವಾದಿತ್ವ ಬಗ್ಗೆ ನಮ್ಮ ಮತ್ತು ನಮ್ಮ ವಿರೋಧಿಗಳ ವಿಚಾರಗಳು

ನಮ್ಮ ವಿರೋಧಿಗಳು ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರ ನಂತರ ಈ ಮೂರು ವಿಧದ ಪ್ರವಾದಿತ್ವ ಸಂಪೂರ್ಣವಾಗಿ ಕೊನೆಗೊಂಡಿದೆಯೆಂದು ನಂಬುತ್ತಾರೆ. ಪೈಗಂಬರರ ನಂತರ ಯಾವುದೇ ರೀತಿಯ ನುಬುವ್ವತ್ ಪಡೆದ ವ್ಯಕ್ತಿ ಲೋಕಾಂತ್ಯದ ವರೆಗೆ ಬರಲಾರನೆಂಬುದು ಅವರ ವಿಶ್ವಾಸವಾಗಿದೆ. ಮುಹಮ್ಮದ್ ಪೈಗಂಬರರ ಅನುಯಾಯಿಗಳ ಪೈಕಿ ಯಾವನೇ ವ್ಯಕ್ತಿ ಎಷ್ಟೇ ಪರಿಪೂರ್ಣನಾಗಿದ್ದರೂ ಪ್ರತಿಚ್ಛಾಯೆ ರೂಪದಲ್ಲಿಯಾಗಲಿ ನುಬುವ್ವತ್‌ನ ವಾರೀಸುದಾರನಾಗಲು ಸಾಧ್ಯವಿಲ್ಲವೆಂದು ಅವರ ನಂಬಿಕೆಯಾಗಿದೆ. ಆದರೆ ನಮ್ಮ ವಿರೋಧಿಗಳು ಅವರ ಸ್ವಂತ ನಂಬಿಕೆಗಳಿಗೆ ವಿರೋಧವಾಗಿ ಹಝ್ರತ್ ಈಸಾ(ಅ)ರು (ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ ಆರುನೂರು ವರ್ಷ ಮೊದಲು ಪ್ರವಾದಿ ಹಝ್ರತ್ ಮೂಸಾರ ಶರೀಅತಿನ ಸೇವೆಗಾಗಿ ಮುಸ್ತಖಿಲ್ ನುಬುವ್ವತ್ ನೀಡಿ ಕಳುಹಿಸಲ್ಪಟ್ಟವರು) ಸ್ವಲ್ಪ ಸಮಯಕ್ಕಾಗಿ ತನ್ನ ಹಿಂದಿನ ನುಬುವ್ವತ್‌ನೊಂದಿಗೆ ಪ್ರವಾದಿ ಮುಹಮ್ಮದ್(ಸ)ರ ಉಮ್ಮತಿನ (ಅನುಚರರ) ಸುಧಾರಣೆಗಾಗಿ ಪುನಃ ಬರುವರು ಎಂದು ನಂಬುತ್ತಾರೆ. ಇದರ ವಿರುದ್ಧವಾಗಿ ಅಹ್ಮದಿಯಾ ಜಮಾಅತ್ ನಂಬುವುದೇನೆಂದರೆ, ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರ ಆಗಮನದ ನಂತರ ಮೇಲೆ ವಿವರಿಸಿದ ಒಂದನೇಯ ಮತ್ತು ಎರಡನೇಯ ತರದ ನುಬುವ್ವತ್‌ಗಳು ಪೂರ್ಣವಾಗಿ ಅವಸಾನಗೊಂಡಿವೆ. ಹಝ್ರತ್ ಮುಹಮ್ಮದ್(ಸ)ರ ಶರೀಅತ್ ಕೊನೆಯ ಶರೀಅತಾದ ಕಾರಣ ಇನ್ನು ಮುಂದೆ ಹೊಸ ಶರೀಅತ್ ತರುವ ಪ್ರವಾದಿ ಬರಲಿಕ್ಕಿಲ್ಲ. ಅಲ್ಲದೆ ಶರೀಅತ್ ತರದ, ಪೈಗಂಬರರ ನುಬುವ್ವತಿನಿಂದ ಸ್ವತಂತ್ರವಾಗಿ, ಮುಸ್ತಖಿಲ್ ನುಬುವ್ವತ್ ಪಡೆದ ಪ್ರವಾದಿ ಸಹ ಬರಲು ಸಾಧ್ಯವಿಲ್ಲ. ಏಕೆಂದರೆ ಅದು ಪೈಗಂಬರರ ನುಬುವ್ವತಿನ ಪರಿಪೂರ್ಣತೆಗೆ ಅವಮಾನವಾದಂತೆ. ಪೈಗಂಬರರ ಅನುಗ್ರಹದ ಪರಿಧಿಯ ಹೊರಗೆ ಯಾರಿಗೂ ನುಬುವ್ವತ್ ದೊರಕದು. ಆದರೆ ಮೂರನೆಯ ರೀತಿಯ ನಬಿ ಝಿಲ್ಲೀ ಎಂದೂ ಉಮ್ಮತೀ ಎಂದೂ ಕರೆಯಲ್ಪಡುತ್ತಿದ್ದು, ಪೈಗಂಬರ್(ಸ)ರ ಪರಿಪೂರ್ಣ ಅನುಸರಣೆಯಿಂದ, ಅವರಿಂದ ಅನುಗ್ರಹ ಪಡೆದು, ಅವರ ಪ್ರಕಾಶದಿಂದ ಬೆಳಕನ್ನು ಹೊಂದಿ, ಅವರ ಸೇವಕ ಸ್ಥಾನದಲ್ಲಿದ್ದು ಪ್ರವಾದಿತ್ವದ ಪದವಿ ಪಡೆಯಬಹುದು. ಇದರಿಂದ ಪೈಗಂಬರ್(ಸ)ರ ಪ್ರವಾದಿತ್ವದ ಪರಿಪೂರ್ಣತೆಗೆ ಯಾವುದೇ ಅಪಮಾನವಿಲ್ಲ. ಇದರಿಂದ ಅವರ ನುಬುವ್ವತಿನ

ಮಹತ್ವಶಾಲಿ ಶಕ್ತಿ ಸುಸ್ಪಷ್ಟವಾಗುತ್ತದೆ. ಹೇಗೆಂದರೆ, ಪೈಗಂಬರರೆಂಬ ಪ್ರಕಾಶಮಾನವಾದ ಸೂರ್ಯ ತನ್ನ ಪ್ರಕಾಶದ ಆಧಿಕ್ಯದಿಂದ ತನ್ನದೇ ಆಕೃತಿಯಲ್ಲಿ ತನ್ನ ಸುತ್ತಲೂ ತಿರುಗುವ ಒಂದು ಪೂರ್ಣ ಚಂದ್ರನನ್ನು ಉಂಟುಮಾಡುತ್ತದೆ. ನಮ್ಮ ನಂಬಿಕೆಯ ಪ್ರಕಾರ ಇಂತಹ ನುಬುವ್ವತಿನಿಂದ ಖತ್‌ಮೆನುಬುವ್ವತ್ (ಪ್ರವಾದಿತ್ವ ಸಮಾಪ್ತಿ)ನ ಮುದ್ರೆ ಸಹ ಖಂಡಿತವಾಗಿಯೂ ಒಡೆದು ಹೋಗುವುದಿಲ್ಲ. ಹಝ್‌ರತ್ ಮುಹಮ್ಮದ್ (ಸ) ಆಖಿರೀ (ಕೊನೆಯ) ನಬಿ ಎಂಬುದಕ್ಕೆ ಯಾವುದೇ ಕುಂದುಟಾಗುವುದಿಲ್ಲ. ಪೈಗಂಬರರು ಯಜಮಾನನ ಸ್ಥಾನದಲ್ಲಿದ್ದು ಅವರು ಇನ್ನೊಬ್ಬರಿಂದ ಅನುಸರಿಸಲ್ಪಡುತ್ತಿರುವುದರಿಂದಲೂ ಅನುಗ್ರಹ ನೀಡುವ ಸ್ಥಾನದಲ್ಲಿರುವುದರಿಂದಲೂ ಅವರು ಆಖಿರೀ ನಬಿ ಎಂಬ ಪದವಿಯಲ್ಲಿಯೇ ಇರುತ್ತಾರೆ. ಚಂದ್ರೋದಯದಿಂದ ಸೂರ್ಯನ ಆಡಳಿತೆಯು ಕೊನೆಗೊಂಡಿತೆಂದು ಭಾವಿಸಲಾಗುವುದಿಲ್ಲ. ಬದಲಿಗೆ ಚಂದ್ರೋದಯದಿಂದ ಸೂರ್ಯನ ಶಕ್ತಿ ಸಾಮರ್ಥ್ಯಗಳು ಹೆಚ್ಚು ಸ್ಪಷ್ಟವಾಗಿ ತೋರುತ್ತವೆ. ಇದೇ ಕಾರಣದಿಂದ ನಾವು ಹಝ್‌ರತ್ ಈಸಾ(ಅ)ರ ಪುನರಾಗಮನ ಸಿದ್ಧಾಂತ ಖತ್‌ಮೆನುಬುವ್ವತಿಗೆ ವಿರುದ್ಧವಾದುದೆಂದು ನಂಬುತ್ತೇವೆ. ಏಕೆಂದರೆ ಅವರಿಗೆ ಪೈಗಂಬರ್(ಸ)ರ ಮೊದಲು ಪ್ರವಾದಿತ್ವ ನೇರವಾಗಿ ದೊರಕಿತ್ತು. ಇಂತಹ ವ್ಯಕ್ತಿ ಪೈಗಂಬರರ ಅನುಯಾಯಿಗಳ ಸುಧಾರಣೆಗಾಗಿ ನಿಯೋಜಿಸಲ್ಪಡುವುದು, ಪೈಗಂಬರರ ನುಬುವ್ವತಿನೊಂದಿಗೆ ಯಾವುದೇ ಸಂಬಂಧವಿಲ್ಲದ ವ್ಯಕ್ತಿ ಈ ರೀತಿ ನಿಯೋಜಿಸಲ್ಪಡುವರೆಂದು ಭಾವಿಸುವುದು ಪೈಗಂಬರರಿಗೆ ಅಪಮಾನಕರವೂ ಖತ್‌ಮೆನುಬುವ್ವತ್ (ಪ್ರವಾದಿತ್ವ ಸಮಾಪ್ತಿ)ನ ಮುದ್ರೆಯನ್ನು ಒಡೆಯುವಂತಹದ್ದೂ ಆಗಿದೆ.

ಫಫ್‌ಹಿಮ್, ವ ತದಬ್ಬರ್, ವಲಾ ತಕುನ್ ಮಿನಲ್ ಮುಮ್ತರೀನ್-ತಿಳಿವಳಿಕೆಯುಳ್ಳವರಾಗಿರಿ, ಚಿಂತಾಶೀಲರಾಗಿರಿ, ವ್ಯಥಾ ಸಂಶಯಿಸುವವರಾಗಬೇಡಿರಿ.

## ಪ್ರವಾದಿತ್ವ ಸಮಾಪ್ತಿ ಕುರಿತು ಹಝ್‌ರತ್ ಮಸೀಹ್ ಮೌಊದರ ಪ್ರಮಾಣ ವಚನ

ಅಹ್ಮದಿಯಾ ಜಮಾಅತಿನ ನಂಬಿಕೆಗಳಿಗೆ ಆಧಾರಗಳನ್ನು ನೀಡುವ ಮೊದಲು ಈ ಜಮಾಅತಿನ ಸ್ಥಾಪಕರ ಸ್ವಂತ ಮಾತುಗಳಲ್ಲಿ ಈ ಜಮಾಅತಿನ ನಂಬಿಕೆಗಳ ವಿವರಣೆ ನೀಡುವುದು ಯೋಗ್ಯವೆಂದು ಗ್ರಹಿಸುತ್ತೇನೆ. ವಾದಿಯ ಮಾತಿನಿಂದಲೇ ವಾದವನ್ನು ಆಲಿಸುವುದರಿಂದ ಅನಂತರ ಯಾವುದೇ ಗೊಂದಲಗಾರನು ನಮ್ಮ ಬಗ್ಗೆ ತಪ್ಪು ಹೇಳಿಕೆಗಳನ್ನಿತ್ತು ಜನರನ್ನು ದಾರಿ ತಪ್ಪಿಸದಂತಾಗುವುದು.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್‌ರತ್ ಅಹ್ಮದ್(ಅ) ಅವರು ಈ ರೀತಿ ಹೇಳುತ್ತಾರೆ:

> "ದೇವರ ಘನತೆ ಮತ್ತು ಶಕ್ತಿ ಸಾಮರ್ಥ್ಯಗಳ ಹೆಸರಲ್ಲಿ ಪ್ರಮಾಣಮಾಡಿ ಹೇಳುತ್ತೇನೆ: ನಾನು ಮೂಮಿನ್ ಮತ್ತು ಮುಸಲ್ಮಾನ್ ಆಗಿರುವೆನು. ನಾನು ದೇವರನ್ನೂ ದೇವರ ಗ್ರಂಥಗಳನ್ನೂ ದೇವರ ಪ್ರವಾದಿಗಳನ್ನೂ ದೇವರ ದೂತರನ್ನೂ ಮರಣಾನಂತರ ಪುನರುತ್ಥಾನದ ಕುರಿತೂ ನಂಬುತ್ತೇನೆ. ನಮ್ಮ ರಸೂಲ್ ಮುಹಮ್ಮದ್ ಮುಸ್ತಫಾ(ಸ) ಎಲ್ಲಾ ಪ್ರವಾದಿಗಳಿಗಿಂತಲೂ ಶ್ರೇಷ್ಠರೆಂದೂ ಖಾತಮುನ್ನಬಿಯ್ಯೀನ್ ಎಂದೂ ನಾನು ನಂಬುತ್ತೇನೆ". (ಹಮಾಮತುಲ್ ಬುಶ್ರಾ, ಪುಟ 8)

ಇನ್ನೊಂದು ಕಡೆ ಅವರು ಈ ರೀತಿ ಹೇಳುತ್ತಾರೆ:

> "ನನ್ನ ಮೇಲೆ ಮತ್ತು ನನ್ನ ಜಮಾಅತಿನ ಮೇಲೆ, ನಾವು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುವುದಿಲ್ಲವೆಂದು ಆರೋಪಿಸಲಾಗುತ್ತದೆ. ಇದು ಅತಿ ದೊಡ್ಡ ಸುಳ್ಳು ಆರೋಪವಾಗಿರುತ್ತದೆ. ನಾವು ಎಷ್ಟು ಶಕ್ತಿವತ್ತಾಗಿ ಪೂರ್ಣ ನಂಬಿಕೆಯಿಂದಲೂ ಜ್ಞಾನ ದೃಷ್ಟಿಯಿಂದಲೂ ಹಝ್‌ರತ್ ರಸೂಲ್(ಸ)ರನ್ನು ಖಾತಮುನ್ನಬಿಯ್ಯೀನ್ ಎಂದು ನಂಬುತ್ತೇವೋ ಅದರ ಲಕ್ಷದಲ್ಲಿ ಒಂದು ಪಾಲು ಸಹ ಈ ಆಕ್ಷೇಪಗಾರರು ನಂಬುವುದಿಲ್ಲ." (ಅಲ್‌ಹಕಮ್ 17-3-1905)

ಈ ಪ್ರಮಾಣ ವಚನಗಳ ವಿಶದೀಕರಣದ ರೂಪದಲ್ಲಿ ಹಝ್‌ರತ್ ಅಹ್ಮದ್(ಅ) ಅವರು ಈ ರೀತಿ ಹೇಳುತ್ತಾರೆ:

"ಪವಿತ್ರ ಖುರ್‌ಆನ್ ಕೊನೆಯ ಗ್ರಂಥ ಹಾಗೂ ಕೊನೆಯ ಶರೀಅತ್ ಆಗಿದೆಯೆಂದು ನಮ್ಮ ವಿಶ್ವಾಸವಾಗಿದೆ. ಇದರ ನಂತರ ಲೋಕಾವಸಾನದ ವರೆಗೆ ಶರೀಅತ್ ತರುವ ನಬಿಯಾಗಲೀ ಪ್ರವಾದಿ ಮುಹಮ್ಮದ್(ಸ)ರನ್ನು ಅನುಸರಿಸದೆ ದೈವವಾಣಿ ಲಭಿಸುವ ಪ್ರವಾದಿಯಾಗಲೀ ಬರಲು ಸಾಧ್ಯವಿಲ್ಲ. ......ಇದರ ವಿವರಣೆ ಈ ರೀತಿ ಇದೆ: ಹಝ್ರತ್ ಮುಹಮ್ಮದ್(ಸ)ರು ಖಾತಮುನ್ನಬಿಯ್ಯೀನ್ ಆಗಿರುವರೆಂದು ಹೇಳಿದಲ್ಲಿಯೇ ಹಝ್ರತ್ ನಬಿ (ಸ)ರ ಆಧ್ಯಾತ್ಮಿಕ ಪದವಿಯಿಂದಾಗಿ, ಅವರ ಅನುಸರಣೆಯಿಂದ ಪರಿಪೂರ್ಣ ಆಧ್ಯಾತ್ಮಿಕ ಸ್ಥಾನಗಳನ್ನು ಪಡೆಯುವ ಸತ್ಪುರುಷರಿಗೆ ಅವರು ತಂದೆಯ ಸ್ಥಾನದಲ್ಲಿರುವರೆಂದು ಸಹ ಅಲ್ಲಾಹು ಸೂಚಿಸಿರುವನು. ಇಂತಹ ಸತ್ಪುರುಷರಿಗೆ ದೇವವಾಣಿಯನ್ನು ಕೇಳುವ ಭಾಗ್ಯ ದೊರೆಯುತ್ತದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಾಕ್ಯ ಇದನ್ನು ಸೂಚಿಸುತ್ತದೆ:

"ಮಾಕಾನ ಮುಹಮ್ಮದುನ್ ಅಬಾ ಅಹದಿನ್ ಮಿನ್‌ರ್ರಿಜಾಲಿಕುಮ್ ವ ಲಾಕಿನ್ ರ‍್ರಸೂಲಲ್ಲಾಹಿ ವ ಖಾತಮುನ್ನಬಿಯ್ಯೀನ" (33:41), ಎಂದರೆ, ಮುಹಮ್ಮದ್ ನಿಮ್ಮ ಪೈಕಿ ಯಾವನೇ ಪುರುಷನ ಪಿತನಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕ ಹಾಗೂ ಖಾತಮುನ್ನಬಿಯ್ಯೀ ಆಗಿರುವರು.

ಇಲ್ಲಿ ಪ್ರಯೋಗಿಸಲಾದ 'ಲಾಕಿನ್' ಎಂಬ ಪದ ಹಿಂದೆ ಹೇಳಿದ ಸಂಗತಿಗೆ ಪ್ರತಿಯಾಗಿ ಅರಬಿ ಭಾಷೆಯಲ್ಲಿ ಉಪಯೋಗಿಸಲ್ಪಡುತ್ತಿದೆ. ಈ ವಚನದ ಪ್ರಥಮ ಭಾಗದಲ್ಲಿ ಒಂದು ಸಂಗತಿಯನ್ನು ಅಲ್ಲಗಳೆಯಲಾಗಿದೆ. ಎಂದರೆ ಮುಹಮ್ಮದ್(ಸ) ಶಾರೀರಿಕವಾಗಿ ಯಾವುದೇ ಪುರುಷನ ತಂದೆಯಾಗಿಲ್ಲವೆಂಬ ಸಂಗತಿಯನ್ನು ವ್ಯಕ್ತಗೊಳಿಸಲಾಗಿದೆ. ಇಲ್ಲಿ ಲಾಕಿನ್ ಎಂಬ ಪದ ಉಪಯೋಗಿಸಿ ಮೊದಲು ಯಾವ ಸಂಗತಿಯನ್ನು ಅಲ್ಲಗಳೆಯಲಾಗಿದೆಯೋ ಆ ಸಂಗತಿಗೆ ಪ್ರತಿಯಾಗಿ ಪೈಗಂಬರ್(ಸ)ರನ್ನು ಖಾತಮುಲ್ ಅಂಬಿಯಾ ಎಂದು ಸಾರಲಾಗಿದೆ. ಇದರ ಅರ್ಥವೇನೆಂದರೆ ಪೈಗಂಬರರ ಆಗಮನದ ನಂತರ ದೇವರಿಂದ ನೇರವಾಗಿ ದೊರೆಯುತ್ತಿದ್ದ ನುಬುವ್ವತಿನ ಅನುಗ್ರಹ ಕೊನೆಗೊಂಡಿದ್ದು ಇನ್ನು ಮುಂದೆ ಪ್ರವಾದಿತ್ವ ಪದವಿ ಒಬ್ಬ ವ್ಯಕ್ತಿಗೆ ದೊರೆಯ ಬೇಕಾದರೆ ಆ ವ್ಯಕ್ತಿ ತನ್ನ ನಡವಳಿಕೆಗಳ ಬಗ್ಗೆ ಮತ್ತು ಪರಿಪೂರ್ಣ ಅನುಸರಣೆಯ ಬಗ್ಗೆ ಮುಹಮ್ಮದ್ ಪೈಗಂಬರರ ಅಂಗೀಕಾರ ಮುದ್ರೆ ದೊರಕಿಸಿ ಕೊಳ್ಳಬೇಕು. ಈ ರೀತಿಯ ಅಂಗೀಕಾರ ದೊರೆತ ವ್ಯಕ್ತಿ ಆಧ್ಯಾತ್ಮಿಕವಾಗಿ ಪೈಗಂಬರ್(ಸ)ರ ಮಗನೂ ಅವರ ವಾರೀಸುದಾರನೂ ಆಗುತ್ತಾರೆ. ಒಟ್ಟಾರೆ ಹೇಳುವುದಾದರೆ ಈ ಪವಿತ್ರ ವಚನದಲ್ಲಿ ಪೈಗಂಬರ್(ಸ) ಒಂದು ವಿಧದಲ್ಲಿ ಪಿತನಾಗಿರುವ ಸಂಗತಿಯನ್ನು ನಿರಾಕರಿಸಿ ಇನ್ನೊಂದು ವಿಧದಲ್ಲಿ ಪಿತನಾಗಿರುವ ಸಂಗತಿಯನ್ನು ಸ್ಪಷ್ಟೀಕರಿಸಲಾಗಿದೆ. "ಇನ್ನ ಶಾನಿಅಕ ಹೂವಲ್ ಅಬ್ತರ್" (ಖಂಡಿತವಾಗಿಯೂ ನಿನ್ನ ವೈರಿಯೇ ಪುರುಷಸಂತಾನ ಹೀನ) ಎಂಬ ವಾಕ್ಯದಲ್ಲಿ ಪೈಗಂಬರರ ಕುರಿತು ಸೂಚಿಸಲ್ಪಟ್ಟ ಶತ್ರುಗಳ ಆಕ್ಷೇಪವನ್ನು ಇಲ್ಲಿ ದೂರೀಕರಿಸಲಾಗಿದೆ. ಈ ವಚನದ ಸಾರಾಂಶ, ಶರೀಅತ್ ರಹಿತ ನುಬುವ್ವತ್ ಆಗಿದ್ದರೂ ನೇರವಾಗಿ ಗಳಿಸುವ ನುಬುವ್ವತ್ ತಡೆಗಟ್ಟಲಾಗಿದೆ; ಆದರೆ ಮುಹಮ್ಮದ್(ಸ)ರ ದೀಪದಿಂದ ಬೆಳಕನ್ನು ಪಡೆದು ಅವರ ಅನುಗ್ರಹದ ಮೂಲಕ ಈ ಪದವಿ ಗಳಿಸುವುದನ್ನು ತಡೆಯಲಾಗಿಲ್ಲ."

(ರಿವ್ಯೂ ಬರ್ ಮುಬಾಹಸ ಚಕ್ಡಾಲವಿ ವಅಹ್ಲೆ ಹದೀಸ್, ಪುಟ 6,7)

ಇನ್ನೊಂದೆಡೆಯಲ್ಲಿ ಈ ರೀತಿ ಬರೆದಿರುವರು:

"ಖ್ಯಾತಮುನ್ನಬಿಯ್ಯೀನ್ ಎಂಬುದರ ಅರ್ಥ ಮುಹಮ್ಮದ್ ಪೈಗಂಬರರು ನಬಿಗಳ ಮುದ್ರೆ ಎಂದಾಗಿದೆ. ಅವರ ಮುದ್ರೆಯಿಲ್ಲದೆ ಯಾವುದೇ ಪ್ರವಾದಿತ್ವ ಅಂಗೀಕಾರ ಪಡೆಯುವುದಿಲ್ಲ. ಯಾವುದಾದರೂ ಕಾಗದದಲ್ಲಿ ಮುದ್ರೆ ಹಾಕಿದರೆ ಆ ಕಾಗದ ಅಧಿಕೃತವೆಂದೂ ಸಪ್ರಮಾಣವಾದುದೆಂದೂ ಗ್ರಹಿಸಲ್ಪಡುತ್ತದೆ. ಆದುದರಿಂದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ)ರ ಅಂಗೀ

ಕಾರದ ಮುದ್ರೆ ದೊರೆಯದ ನುಬುವ್ವತ್ ಸರಿಯಾದುದಲ್ಲ" (ಅಲ್‌ಹಕಮ್ 17-10-1902).

ಅವರು ಪುನಃ ಹೀಗೆಂದು ಬರೆಯುತ್ತಾರೆ:

"ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರನ್ನು ಅಲ್ಲಾಹನು ಸಾಹಿಬೆಖಾತಮ್ ಆಗಿ ಮಾಡಿದನು. ಅವರಿಗೆ ತಮ್ಮ ಅನುಗ್ರಹ ದಾನಕ್ಕಾಗಿ ಬೇರೆ ಯಾವ ನಬಿಗೂ ನೀಡಿಲ್ಲದ ಮುದ್ರೆಯನ್ನು ದೇವರು ಕೊಟ್ಟನು. ಇದೇ ಕಾರಣದಿಂದ ಅವರ ಹೆಸರು ಖಾತಮುನ್ನಬಿಯ್ಯೀನ್ ಎಂದಾಯಿತು. ಅವರನ್ನು ಪರಿಪೂರ್ಣವಾಗಿ ಅನುಸರಿಸುವುದರಿಂದ ನುಬುವ್ವತ್ ದೊರೆಯುತ್ತದೆ. ಅವರ ಆಧ್ಯಾತ್ಮಿಕ ಶಕ್ತಿ ನಬಿಯನ್ನು ಕೆತ್ತುವ ರೀತಿಯಲ್ಲಿದೆ. ಈ ಪರಿಶುದ್ಧ ಶಕ್ತಿ ಬೇರೆ ಯಾವ ಪ್ರವಾದಿಗೂ ದೊರೆಯಲಿಲ್ಲ." (ಹಖೀಖತುಲ್ ವಹ್ಯ್: ಪುಟ 96–97)

### ಮುಹಮ್ಮದೀ ನುಬುವ್ವತ್ ಹೊರತು ಬೇರೆ ಎಲ್ಲಾ ಪ್ರವಾದಿತ್ವ ಕೊನೆಗೊಂಡಿವೆ

ತನ್ನ ವಾದದ ಪ್ರತ್ಯೇಕ ವಿವರಣೆ ನೀಡುತ್ತಾ ಅವರು ಈ ರೀತಿ ಬರೆದಿರುತ್ತಾರೆ:

"ಈ ಅನುಗ್ರಹ ನನಗೆ ಪ್ರವಾದಿ ಹಝ್ರತ್ ಮುಹಮ್ಮದ್(ಸ)ರ ಅನುಸರಣೆಯಿಂದ ದೊರೆತಿದೆ. ನಾನು ಪೈಗಂಬರರ ಅನುಯಾಯಿಯಾಗದೆ ಇರುತ್ತಿದ್ದರೆ, ಅವರ ಅನುಸರಣೆಯನ್ನು ಮಾಡದಿರುತ್ತಿದ್ದರೆ ಪ್ರಪಂಚದ ಎಲ್ಲಾ ಪರ್ವತಗಳಷ್ಟು ನನ್ನ ಸತ್ಕರ್ಮಗಳಾಗುತ್ತಿದ್ದರೂ ನನಗೆ ದೇವರ ವಾಣಿ ಕೇಳುವ ಭಾಗ್ಯ ದೊರೆಯುತ್ತಿರಲಿಲ್ಲ. ಏಕೆಂದರೆ ಈಗ ಮುಹಮ್ಮದೀ ನುಬುವ್ವತ್ ಹೊರತು ಬೇರೆ ಎಲ್ಲಾ ನುಬುವ್ವತ್ ಸಮಾಪ್ತವಾಗಿವೆ. ಶರೀಅತ್‌ನೊಂದಿಗೆ ಇನ್ನು ಯಾವುದೇ ನಬಿ ಬರಲಾರರು. ಆದರೆ ಶರೀಅತ್ ಇಲ್ಲದ ಪ್ರವಾದಿ ಬರಬಹುದು. ಆದರೆ ಆ ಪ್ರವಾದಿ ಪೈಗಂಬರರ ಉಮ್ಮತಿ (ಅನುಯಾಯಿ) ಆಗಿರಬೇಕು. ಇದೇ ಕಾರಣದಿಂದ ನಾನು ಉಮ್ಮತಿಯೂ ನಬಿಯೂ ಆಗಿರುವೆನು. (ತಜಲ್ಲಿಯಾತೆ ಇಲಾಹಿಯ್ಯಾ, ಪುಟ 24,25)

### ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ನಾಲ್ಕು ವಿಧ ಪರಿಹಾರ ಮಾರ್ಗಗಳು

ಪ್ರವಾದಿತ್ವ ಸಮಾಪ್ತಿಯ ಕುರಿತು ಅಹ್ಮದಿಯಾ ಜಮಾಅತ್ ಮತ್ತು ಈ ಕಾಲದ ಇತರ ಮುಸ್ಲಿಮರ ನಂಬಿಕೆಗಳ ವ್ಯತ್ಯಾಸಗಳನ್ನು ವಿವರಿಸಿದ ನಂತರ ಈ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ಹೇಗೆ ಸಾಧ್ಯವೆಂದು ಸೂಚಿಸಲು ಇಚ್ಛಿಸುತ್ತೇನೆ. ಈ ಕಾಲದ ಇತರ ಮುಸಲ್ಮಾನರ ನಂಬಿಕೆಗಳು ಸರಿಯೋ ಅಹ್ಮದಿಯಾ ಜಮಾಅತಿನ ವಿಶ್ವಾಸಗಳು ಸರಿಯೋ ಎಂಬುದನ್ನು ತೀರ್ಮಾನಿಸುವುದು ಹೇಗೆ? ಒಬ್ಬ ಮುಸಲ್ಮಾನನಿಗೆ ಎಲ್ಲಾ ಧಾರ್ಮಿಕ ಸಮಸ್ಯೆಗಳ ಪರಿಹಾರ ನಾಲ್ಕು ಮಾರ್ಗಗಳ ಮೂಲಕ ಮಾತ್ರ ಸಾಧ್ಯವೆಂಬುದು ಒಂದು ತಾತ್ವಿಕ ವಿಚಾರವಾಗಿದೆ.

ಮೊದಲನೆಯದಾಗಿ, ಪವಿತ್ರ ಖುರ್‌ಆನ್ ಸತ್ಯ ಮತ್ತು ಮಿಥ್ಯೆಯನ್ನು ವಿಂಗಡಿಸಿ ತಿಳಿಯಲು ಇರುವ ಅತ್ಯಂತ ವಿಶ್ವಸನೀಯ ಮತ್ತು ಅತ್ಯಂತ ಸ್ಪಷ್ಟ ದಾರಿಯಾಗಿದೆ. ಅದರ ಕುರಿತು ಅಲ್ಲಾಹನು ಈ ರೀತಿ ಹೇಳಿರುವನು:

"ಫಬಿಅಯ್ಯಿ ಹದೀಸಿನ್ ಬಅ್‌ದಲ್ಲಾಹಿ ವ ಆಯಾತಿಹೀ ಯುಅ್‌ಮಿನೂನ್" (45:7)

ಎಂದರೆ, "ಅಲ್ಲಾಹನ ಮತ್ತು ಅವನ ವಚನಗಳ ಸಾಕ್ಷ್ಯಗಳಿಗೆ ವಿರುದ್ಧವಾಗಿ ಜನರು ಯಾವ ಮಾತನ್ನು ಸ್ವೀಕರಿಸುವರು?"

ಎರಡನೆಯ ಸ್ಥಾನ ಮುಹಮ್ಮದ್ ಪೈಗಂಬರರ ವಚನವಾದ ಹದೀಸಿಗೆ. ಹದೀಸಿಗೆ ಪವಿತ್ರ ಗ್ರಂಥವಾದ ಖುರ್‌ಆನ್ ಶರೀಫಿನ ಶ್ರೇಷ್ಠ ಸ್ಥಾನ ಇಲ್ಲವಾದರೂ ಯಾವುದೇ ಹದೀಸಿನ ಕುರಿತು ಖಂಡಿತವಾಗಿ ಅದು ಪ್ರವಾದಿ ಮುಹಮ್ಮದ್(ಸ)ರಿಂದ ಅದೇ ರೀತಿಯಲ್ಲಿ ನುಡಿಯಲ್ಪಟ್ಟಿತ್ತೆಂದು ದೃಢವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ ಅದು ಪವಿತ್ರ ಖುರ್‌ಆನಿನ ನಂತರ ಇಸ್ಲಾಮೀ ಸಮಸ್ಯೆಗಳಿಗೆ ಪರಿಹಾರಕ್ಕಾಗಿ ಉತ್ತಮವಾದ ದಾರಿಯಾಗಿದೆ. ಆದರೆ ನಾವು ವಿವಿಧ ಹದೀಸುಗಳ ವಿಶ್ವಸನೀಯತೆಯ ಕುರಿತು ಮತ್ತು ಅವು ಸಹೀಹ್ (ಸರಿಯಾದುದು) ಅಥವಾ ಝಈಫ್ (ಬಲಹೀನವಾದುದು) ಎಂಬುದನ್ನನುಸರಿಸಿ ಪರ್ಯಾಲೋಚಿಸಬೇಕಾಗಿದೆ.

## ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ-6

# ಮುಸಲ್ಮಾನರಿಗೆ ಸಾಮಾಜಿಕ ಬಹಿಷ್ಕಾರ

★ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ವಿಶ್ವಾಸಿಗಳ ಮೇಲೆ ವಿರೋಧಿಗಳ ಆಕ್ರಮಣವೂ ಅತ್ಯಾಚಾರವೂ ಎಲ್ಲಾ ಸೀಮೆಗಳನ್ನು ಮೀರಿ ದಿನದಿಂದ ದಿನಕ್ಕೆ ಅತ್ಯಂತ ಭಯಾನಕವೂ ಅಸಹನೀಯವೂ ಆಗುತ್ತಿದ್ದವು. ಅನೇಕರು ಆಗಲೇ ಊರು ಬಿಟ್ಟು ಬೇರೆಡೆಗೆ ಅಭಯಾರ್ಥಿಗಳಾಗಿ ಹೋಗಿದ್ದರು. ಮಕ್ಕಾದಲ್ಲೇ ಉಳಿದಿದ್ದವರ ಪಾಡಂತೂ ವರ್ಣನಾತೀತ, ಮೊದಲೆಂದಿಗಿಂತಲೂ ಭಯಾನಕವಾದ ಹಿಂಸೆಗೆ ಅವರನ್ನು ಗುರಿಪಡಿಸಲಾಗುತ್ತಿತ್ತು. ಆದರೂ ಆ ಪ್ರಥಮ ವಿಶ್ವಾಸಿಗಳು ತಾವು ಸ್ವೀಕರಿಸಿದ ಸತ್ಯಪಥದಿಂದ ಕಿಂಚಿತ್ತಾದರೂ ಹಿಂಜರಿಯಲಿಲ್ಲ. ಮುಸ್ಲಿಮರ ಮನೋದಾರ್ಢ್ಯತೆಯಲ್ಲಿ ಅಲ್ಪವಾದರೂ ಚಂಚಲತೆ ಕಂಡು ಬರಲಿಲ್ಲ. ಅವರಲ್ಲಿ ಏಕದೇವ ವಿಶ್ವಾಸವೂ ಇಸ್ಲಾಂ ಧರ್ಮ ತತ್ವಗಳಲ್ಲಿ ನಿಷ್ಠೆಯೂ ದಿನೇ ದಿನೇ ವರ್ಧಿಸುತ್ತಿದ್ದವು. ಅದೇ ರೀತಿ ಮಕ್ಕಾದ ನಾಡದೇವರುಗಳ ಮೇಲೆ ಅವರಿಗೆ ಜಿಗುಪ್ಸೆಯೂ ವಿರಕ್ತಿಯೂ ಹೆಚ್ಚುತ್ತಿತ್ತು. ಸತ್ಯವಿಶ್ವಾಸವೂ ಅಂಧವಿಶ್ವಾಸವೂ ತಮ್ಮೊಳಗಿನ ಹೋರಾಟವು ಘನ ಘೋರವಾಯಿತು. ಮುಸ್ಲಿಮರನ್ನು ಅವರ ವಿಶ್ವಾಸದಿಂದ ಹಿಮ್ಮೆಟ್ಟಿಸಲು ನಡೆಸಿದ ಸರ್ವ ಪ್ರಯತ್ನಗಳೂ ವಿಫಲವಾಗುತ್ತಿರುವುದನ್ನು ಕಂಡ ಮಕ್ಕಾದ ಜನರು ಮತ್ತೊಂದು ಮಹಾಸಭೆಯನ್ನು ಕರೆದರು. ಎಲ್ಲ

---

(ಇಪ್ಪತ್ತೆಂಟನೇ ಪುಟದಿಂದ)

ಮೂರನೆಯ ಸ್ಥಾನ ಇಸ್ಲಾಮಿನಲ್ಲಿ ಜನಿಸಿದ ಹಿಂದಿನ ಸತ್ಪುರುಷರು, ಮುಜದ್ದಿದರು, ಇಮಾಮ್‌ಗಳದ್ದಾಗಿವೆ. ಈ ಮಹಾ ಪುರುಷರು ಮನುಷ್ಯ ಸಹಜವಾದ ಕುಂದು ಕೊರತೆಗಳಿಂದ ಕೂಡಿದವರಾಗಿದ್ದರೂ ಸಾಧಾರಣ ಮನುಷ್ಯರಿಗಿಂತ ಹೆಚ್ಚು ವಿಶ್ವಾಸಕ್ಕೆ ಯೋಗ್ಯರು. ಈ ಮಹನೀಯರ ಅಭಿಪ್ರಾಯಗಳು ಈಗಿನ ಕಾಲದ ಭಿನ್ನಾಭಿಪ್ರಾಯಗಳಿಗಿಂತ ಮುಂಚೆ ಸೂಚಿತವಾದವುಗಳಾದ ಕಾರಣ ಆ ಅಭಿಪ್ರಾಯಗಳು ಪಕ್ಷಪಾತದಿಂದ ಕೂಡಿದುದೆಂದು ಹೇಳಲು ಸಾಧ್ಯವಿಲ್ಲ. ಮತ್ತು ಅವರಿಗೆ, ದುರದೃಷ್ಟವಶಾತ್ ಇಂದಿನ ಮುಸ್ಲಿಮರಿಗೆ ಅಹ್ಮದಿಯರ ವಿರುದ್ಧ ಇರುವಂತಹ ದ್ವೇಷಾಸೂಯೆ ಸಹ ಇರಲಿಲ್ಲ. ಈ ಮಹನೀಯರ ಜ್ಞಾನ ಮತ್ತು ಭಕ್ತಿಯ ಸ್ಥಾನ ಖಂಡಿತವಾಗಿಯೂ ಈಗಿನ ಕಾಲದ ಮೌಲವಿಗಳಿಗಿಂತ ಎಷ್ಟೋ ಉತ್ತಮವೂ ಎಷ್ಟೋ ಉನ್ನತವೂ ಆಗಿತ್ತು.

ನಾಲ್ಕನೆಯ ಸ್ಥಾನ ಮನುಷ್ಯನ ವಿವೇಕಕ್ಕೆ ಇದೆ. ವಿವೇಕ ತಪ್ಪು ಮಾಡಲು ಸಾಧ್ಯವಿದ್ದರೂ ದೇವರಿಂದ ಸೃಷ್ಟಿಸಲ್ಪಟ್ಟ ಆಂತರಿಕ ಪ್ರಕಾಶವಾದ ಕಾರಣ ಅದರ ಮೂಲಕ ಪ್ರಪಂಚದ ಹೆಚ್ಚಿನ ಕಾರ್ಯಗಳು ಸಾಧಿತವಾಗುತ್ತಿವೆ. ಮಧ್ಯದಲ್ಲಿ ಯಾವುದೇ ಅಂಧಕಾರದ ಪರದೆ ಇಲ್ಲದಿದ್ದರೆ ತಪ್ಪು ಮತ್ತು ಸರಿಯನ್ನು ಗುರುತಿಸಲು ಅದು ಬಹಳ ಉತ್ತಮವಾದ ಒಂದು ಸಾಧನವಾಗಬಲ್ಲುದು ಎಂಬುದರಲ್ಲಿ ಸಂಶಯವಿಲ್ಲ. ಇನ್ನು ಮುಂದೆ ದೇವರ ದಯದಿಂದ ಈ ಮೇಲಿನ ನಾಲ್ಕು ಆಧಾರಗಳ ಸಹಾಯದಿಂದ ಪ್ರವಾದಿತ್ವ ಸಮಾಪ್ತಿಯ ಕುರಿತು ವಿವರಿಸಲು ಇಚ್ಛಿಸುತ್ತೇನೆ. ಅದರ ಮೂಲಕ ವಾಚಕ ಮಹನೀಯರು ಯಾವುದಾದರೂ ನಿರ್ಧಾರ ಕೈಗೊಳ್ಳಲು ಸಾಧ್ಯವಾದೀತೆಂದು ಗ್ರಹಿಸುತ್ತೇನೆ.

ವಮಾ ತೌಫೀಕೀ ಇಲ್ಲಾಬಿಲ್ಲಾಹಿಲ್ ಅಲೀಮ್
ನಿಅ್‌ಮಲ್ ಮೌಲಾ ವ ನಿಅ್‌ಮನ್ನಸೀರ್

(ಸರ್ವೋನ್ನತವಾದ ಅಲ್ಲಾಹನ ಅನುಗ್ರಹದಿಂದಲೇ ನನಗೆ ಇದು ಸಾಧ್ಯವಾಗುವುದು. ಆತನೇ ಶ್ರೇಷ್ಠ ಮಾಲಿಕ, ಶ್ರೇಷ್ಠ ಸಹಾಯಕ)

(ಮುಂದುವರಿಯುವುದು)

—ಭಾಷಾಂತರ: ಎಂ. ಉಬೈದುಲ್ಲಾ

ವಿರೋಧಿಗಳೂ ವಿರೋಧಿ ನೇತಾರರೂ ಸೇರಿದ ಈ ಸಭೆಯಲ್ಲಿ ಗಂಭೀರವಾಗಿ ಚರ್ಚಿಸಲಾಗಿ, ಸತ್ಯವಿಶ್ವಾಸಿಗಳ ಮೇಲೆ ಸಂಪೂರ್ಣ ಸಾಮಾಜಿಕ ಬಹಿಷ್ಕಾರವನ್ನು ಹೇರಲು ನಿರ್ಣಯ ಕೈಗೊಳ್ಳಲಾಯಿತು. ಮಕ್ಕಾ ನಿವಾಸಿಗಳಾದ ಯಾರೂ ಸಹ ಮುಸ್ಲಿಮರೊಂದಿಗೆ ಯಾವುದೇ ವ್ಯವಹಾರವನ್ನೂ ಮಾಡಬಾರದು. ಅವರಿಂದ ಯಾವ ಪದಾರ್ಥವನ್ನು ಕೊಳ್ಳುವುದಾಗಲೀ ಅವರಿಗೆ ಯಾವುದನ್ನೂ ಮಾರಾಟ ಮಾಡುವುದಾಗಲೀ ನಿಷಿದ್ಧವೆಂಬುದಾಗಿ ನಿರ್ಣಯಿಸಲಾಯಿತು. ಆಗ, ಹಝ್ರತ್ ಪೈಗಂಬರರು ತನ್ನ ಕುಟುಂಬ ಸದಸ್ಯರು ಹಾಗೂ ಕೆಲವು ಅನುಯಾಯಿಗಳನ್ನೊಡಗೂಡಿ ಚಿಕ್ಕಪ್ಪ ಅಬುತಾಲಿಬ್‌ರವರ ಸ್ವಾಮ್ಯತ್ವದ ಒಂದು ಹೊರವಲಯ ಪ್ರದೇಶದಲ್ಲಿ ಆಸರೆ ಪಡೆದರು. ಇಸ್ಲಾಂ ಧರ್ಮವನ್ನು ಇನ್ನೂ ಸ್ವೀಕರಿಸದಿದ್ದರೂ ಪೈಗಂಬರರ ಸಹವಾಸವನ್ನು ಬಿಡಲು ಮನಸ್ಸಿಲ್ಲದ ಕೆಲವು ಹಿತೈಷಿಗಳೂ ಅವರನ್ನು ಸೇರಿಕೊಂಡರು.

ಸಮಾಜದಿಂದ ಬಹಿಷ್ಕರಿಸಲ್ಪಟ್ಟು ಒಂದು ಪ್ರತ್ಯೇಕ ಸ್ಥಳದಲ್ಲಿ, ಅದು ಸಹ ಜೀವನೋಪಾಯದ ಯಾವ ಮಾರ್ಗವೂ ಇಲ್ಲದೆ ಮೂರು ವರ್ಷಗಳಷ್ಟು ಕಾಲ ಅವರು ಅನುಭವಿಸಿದ ಯಾತನೆಗಳನ್ನು ಊಹಿಸುವುದು ಕೂಡ ಇತರ ಮನುಷ್ಯರಿಂದ ಸಾಧ್ಯವಾಗಲಾರದು. ಅವರ ಬಳಿ ಹಣವಿರಲಿಲ್ಲ; ಆಹಾರ ಸಾಧನಗಳೇನೂ ಇರಲಿಲ್ಲ. ಈ ಘೋರ ಬಹಿಷ್ಕಾರದ ವೇಳೆಯಲ್ಲಿ ಪೈಗಂಬರರೂ ಅವರ ಕುಟುಂಬ ಸದಸ್ಯರೂ ಅತಿ ದಾರುಣವಾದ ಯಾತನೆಗಳನ್ನು ಅನುಭವಿಸಬೇಕಾಯಿತು. ಮಕ್ಕಾದ ಬಹು ಜನರ ಈ ತಡೆಯಾಜ್ಞೆಯು ಮೂರು ವರ್ಷಗಳಷ್ಟು ಕಾಲ ಸ್ವಲ್ಪವೂ ಸಡಿಲಾಗದೆ ಮುಂದುವರಿಯಿತು. ಕೊನೆಗೆ, ವಿರೋಧಿಗಳಲ್ಲಿ ಐದು ಜನ ಸಭ್ಯ ವ್ಯಕ್ತಿಗಳು ಈ ಅಮಾನವೀಯ ಪಾಶವೀ ಕೃತ್ಯದ ವಿರುದ್ಧ ಭಂಡಾಯ ಎದ್ದು ಮುಸ್ಲಿಮರ ಸಹಾಯಕ್ಕೆ ಮುಂದಾದರು. ಅವರು ಸಮಾಜದಿಂದ ತಡೆಹಿಡಿಯಲ್ಪಟ್ಟ ಮುಸಲ್ಮಾನ ಕುಟುಂಬಗಳು ನೆಲೆಗೊಂಡಿದ್ದ 'ಶುಅಬೆ ಅಬೀತಾಲಿಬಾ' ಎಂಬಲ್ಲಿಗೆ ಬಂದು ಮೂರು ವರ್ಷಗಳ ಹಿಂದೆ ಮಕ್ಕಾದ ಜನರು ಮುಸ್ಲಿಮರ ವಿರುದ್ಧ ಜಾರಿಗೊಳಿಸಿದ ಬಹಿಷ್ಕಾರ ನಿರ್ಣಯವನ್ನು ತಾವು ವಿರೋಧಿಸುವುದಾಗಿ ತಿಳಿಸಿ ಅಲ್ಲಿಂದ ಹೊರ ಬರುವಂತೆ ಆಹ್ವಾನಿಸಿದರು. ಅನ್ನಾಹಾರಗಳಿಲ್ಲದೆ ಬಹಳಷ್ಟು ದುರ್ಬಲಗೊಂಡಿದ್ದ ಅಬೂತಾಲಿಬರು ಅವರ ಬಳಿ ಬಂದು ಮಕ್ಕಾ ನಿವಾಸಿಗಳ ಈ ಹೀನ ಕೃತ್ಯವನ್ನು ಖಂಡಿಸಿದರು.

ಬಹಿಷ್ಕಾರ ನಿರ್ಣಯಕ್ಕೆ ವಿರುದ್ಧವಾಗಿ ಸಜ್ಜನರಾದ ಈ ಐದು ಮಾನ್ಯ ವ್ಯಕ್ತಿಗಳು ಸ್ವರವೆಬ್ಬಿಸಿದ ವಾರ್ತೆಯು ಮಕ್ಕಾದಲ್ಲಿಡೀ ಮಿಂಚಿನಂತೆ ಹಬ್ಬಿತು. ಆದರೆ, ಮನುಷ್ಯ ಸಹಜವಾದ ನೀತಿ ನಿಷ್ಠೆಯು ಕೆಲವು ಮಂದಿಯನ್ನಾದರೂ ಅಷ್ಟರಲ್ಲೇ ಪ್ರಜ್ಞಾವಂತರನ್ನಾಗಿ ಮಾಡಿತ್ತು. ಸದಾಚಾರಕ್ಕೆ ಅಲ್ಪಸ್ವಲ್ಪ ಶಕ್ತಿಯು ಮೈಗೂಡಿ ಬಂದಿತ್ತು. ಅದಾಗ್ಯೂ ಮುಸ್ಲಿಮರ ವಿರುದ್ಧವಾಗಿ ಜಾರಿಗೊಳಿಸಲಾದ ಈ ಕಿರಾತ ನಿಷೇಧಾಜ್ಞೆಯನ್ನು ಹಿಂದೆಗೆದುಕೊಳ್ಳಲು ಮಕ್ಕಾ ನಿವಾಸಿಗಳು ನಿರ್ಬಂಧಿತರಾದರು.

ವಿಶ್ವಾಸಿಗಳಿಗೆ ಬಹಿಷ್ಕಾರವಂತೂ ಮುಗಿಯಿತು. ಆದರೆ, ಅದರ ಪರಿಣಾಮ ಸ್ವರೂಪವು ತನ್ನ ಕರಾಳ ಹಸ್ತವನ್ನು ಚಾಚಲು ಪ್ರಾರಂಭಿಸಿತು. ಮೂರು ವರ್ಷಗಳ ಕಾಲದ ಈ ಸುದೀರ್ಘ ಕಷ್ಟಾನುಭವಗಳ ಕಾರಣದಿಂದ, ಕೆಲವೇ ದಿವಸಗಳಲ್ಲಿ ಪೈಗಂಬರರ ಪ್ರೀತಿಯ ಧರ್ಮ ಪತ್ನಿ ಹಝ್ರತ್ ಖದೀಜ(ರ)ರವರು ಇಹಲೋಕ ತ್ಯಾಗ ಮಾಡಿದರು. ಅದರ ಒಂದು ತಿಂಗಳ ಬಳಿಕ ನಬಿವರ್ಯರ ಪಿತೃ ಸಹೋದರ ಅಬೂತಾಲಿಬ್ ಕೂಡ ಮರಣಹೊಂದಿದರು.

ಹಝ್ರತ್ ಮುಹಮ್ಮದ್ ಪೈಗಂಬರರಿಗೂ ಅವರ ಅನುಯಾಯಿಗಳಿಗೂ ಈಗ ಅಬೂತಾಲಿಬ್‌ರವರ ಪ್ರಭಾವಿ ಆಸರೆಯು ಇಲ್ಲದಾಯಿತು. ಪೈಗಂಬರರಿಗೆ ತನ್ನ ಬಾಳ ಸಂಗಾತಿಯಾಗಿದ್ದ ಹಝ್ರತ್ ಖದೀಜರವರ ಪ್ರೀತಿ ವಾತ್ಸಲ್ಯವೂ ಬೆಂಬಲವೂ ನಷ್ಟವಾಯಿತು. ಇವರಿಬ್ಬರ ವಿಯೋಗದ ಕಾರಣದಿಂದ ಅದುವರೆಗೆ ಲಭಿಸುತ್ತಿದ್ದ ಇತರ ಕೆಲವರ ಸಹಾನುಭೂತಿ ಕೂಡ ಮುಸ್ಲಿಮರಿಗೆ ಸಹಜವಾಗಿಯೇ ಅಪ್ರತ್ಯಕ್ಷವಾಯಿತು. ಪೈಗಂಬರರ ಕಠಿಣ ವಿರೋಧಿಯಾಗಿದ್ದ ಅವರ ಮತ್ತೊಬ್ಬ ಚಿಕ್ಕಪ್ಪ ಹಾಗೂ ಅಬೂತಾಲಿಬ್‌ರವರ ತಮ್ಮನಾಗಿದ್ದ ಅಬೂಲಹಬ್ ಈಗ ಸ್ವಲ್ಪಕಾಲ ಮುಸಲ್ಮಾನರ ಸಹಾಯಕ್ಕೆ ಬಂದರು. ತನ್ನ ಮೃತ ಸಹೋದರನ ಅಗಲಿಕೆಯಿಂದುಂಟಾದ ದುಃಖವೂ ಅವರ ಅಂತಿಮಾಭಿಲಾಷೆಯೂ ಅಬೂಲಹಬರನ್ನು ಆ ರೀತಿ ಪೈಗಂಬರರ ಮತ್ತು ಸಂಗಡಿಗರ ಪರವಾಗಿ ನಿಲ್ಲಲು ಪ್ರೇರೇಪಿಸಿತು. ಆದರೆ, ಈ

ಸ್ಥಿತಿಯು ದೀರ್ಘಕಾಲ ಮುಂದುವರಿಯಲಿಲ್ಲ. ಮಕ್ಕಾದ ಬಹುಜನರು ಅಬೂಲಹಬರ ಮನಸ್ಸಿನಲ್ಲಿದ್ದ ಮೊದಲಿನ ಇಸ್ಲಾಂ ವಿರೋಧವನ್ನು ಬಡಿದೆಬ್ಬಿಸುವಲ್ಲಿ ಸಫಲರಾದರು. ಜಗತ್ಪಾಲಕನಾದ ಪರಮಾತ್ಮನ ಏಕತೆಯಲ್ಲಿ ವಿಶ್ವಾಸ ಹೊಂದದಿರುವುದು ಪರಲೋಕದಲ್ಲಿ ಶಿಕ್ಷೆಗೆ ಕಾರಣವಾಗುವ ಒಂದು ಅಪರಾಧವೆಂದು ಹಝ್ರತ್ ಮುಹಮ್ಮದ್ ಪೈಗಂಬರರು ಪ್ರಬೋಧಿಸುತ್ತಿರುವುದರಿಂದ ಮಕ್ಕಾದ ಜನರ ಹಳೆಯ ಆಚಾರ ವಿಚಾರಗಳಿಗೂ ವಿಶ್ವಾಸ ಕಟ್ಟಳೆಗಳಿಗೂ ಕೊಡಲಿಯೇಟು ಬೀಳುವುದೆಂದು ಮುಂತಾಗಿ ಹೇಳಿ ಅವರು ಅಬೂಲಹಬರ ದ್ವೇಷವನ್ನು ಬಡಾಯಿಸಿದರು. ತನ್ನ ಸಮುದಾಯ ಬಾಂಧವರ ಭಾವನೆಗಳನ್ನು ಮನ್ನಿಸಿದ ಅಬೂಲಹಬ್ ಮುಸಲ್ಮಾನರ ಪರ ನಿಲ್ಲುವುದನ್ನು ಬಿಟ್ಟು ಮೊದಲಿಗಿಂತಲೂ ಹೆಚ್ಚಾಗಿ ಅವರನ್ನು ವಿರೋಧಿಸುವುದಾಗಿ ಪ್ರತಿಜ್ಞೆಗೈದರು.

ಮೂರು ವರ್ಷಗಳ ಕಾಲದ ಬೇರ್ಪಟ್ಟ ಜೀವನದ ಕಾರಣದಿಂದಾಗಿ ಮಕ್ಕಾ ನಿವಾಸಿಗಳ ಮತ್ತು ಮುಸ್ಲಿಂ ವಿಶ್ವಾಸಿಗಳ ಮಧ್ಯೆ ಸಂಪರ್ಕವು ಈಗಾಗಲೇ ಶಿಥಿಲಗೊಂಡಿತ್ತು. ಅಂತೆಯೇ ಪ್ರಚಾರ ಕಾರ್ಯವೂ ಪರಸ್ಪರ ಸಮಾಲೋಚನೆಗಳೂ ಹೆಚ್ಚು ಕಡಿಮೆ ಸ್ಥಗಿತಗೊಂಡಂತಿದ್ದುವು. ಈ ಪರಿಸ್ಥಿತಿಯನ್ನು ಕಂಡು ದುಃಖಿತರಾದ ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರವರು, ಬೇರೆಡೆ ಹೋಗಿ ಇಸ್ಲಾಮಿನ ಸಂದೇಶವನ್ನು ಅಲ್ಲಿ ಪ್ರಚಾರಪಡಿಸಲು ತೀರ್ಮಾನಿಸಿದರು. ದಿನದಿಂದ ದಿನಕ್ಕೆ ಹದಗೆಡುತ್ತಾ ಬಂದಿದ್ದ ಮಕ್ಕಾ ನಿವಾಸಿಗಳ ವರ್ತನೆಯು ಪೈಗಂಬರರ ಈ ತೀರ್ಮಾನವನ್ನು ಮತ್ತಷ್ಟು ಬಲಪಡಿಸುವಂತಿತ್ತು. ಜನರು ನೀಡುತ್ತಿದ್ದ ಉಪದ್ರಗಳನ್ನೂ ಹಿಂಸೆಯನ್ನೂ ಪೈಗಂಬರರು ಅಷ್ಟೊಂದು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಜನರೊಂದಿಗೆ ಸಂಪರ್ಕ ಬೆಳೆಸಲು ಹಾಗೂ ಅವರಿಗೆ ಉಪದೇಶ ನೀಡಲು ಸಂದರ್ಭ ಲಭಿಸುವುದಾದರೆ ಅವರು ಆ ಎಲ್ಲಾ ಸಂಕಷ್ಟಗಳನ್ನೂ ಸಹಿಸಲು ತಯಾರಿದ್ದರು. ಆದರೆ, ಈಗ ಮಕ್ಕಾದಲ್ಲಿ ಆ ರೀತಿ ಸಂಭಾಷಣೆಗೂ ಪ್ರಬೋಧನೆಗೂ ಅವಕಾಶವೇ ಇಲ್ಲದಂತಾಯಿತು. ಒಂದನೆಯದಾಗಿ ಅವರು ಪೈಗಂಬರರ ಮಾತನ್ನು ಏನೇನೂ ಗಮನಿಸುತ್ತಿರಲಿಲ್ಲ. ಎರಡನೆಯದಾಗಿ ಪೈಗಂಬರರು ಈ ಕಾರ್ಯಕ್ಕಾಗಿ ತನ್ನ ನಿವಾಸದಿಂದ ಹೊರಬಿದ್ದರೆ, ರಸ್ತೆ ಬೀದಿಗಳಲ್ಲಿ ಅವರನ್ನು ಚಲಿಸಲು ಕೂಡ ಅವರು ಬಿಡುತ್ತಿರಲಿಲ್ಲ. ಅವರ ಮುಖದ ಮೇಲೆ ಮಣ್ಣು ಎರಚುತ್ತಾ ಅವರಿಗೆ ಸಂಚರಿಸಲು ಸಾಧ್ಯವಾಗದಂತೆ ಮಾಡುತ್ತಿದ್ದರು. ಒಮ್ಮೆ ಪೈಗಂಬರರು ಅದೇ ಅವಸ್ಥೆಯಲ್ಲಿ ತನ್ನ ಮನೆಗೆ ಹಿಂದಿರುಗಿದಾಗ ಅವರ ಪುತ್ರಿ ಕಣ್ಣೀರಿಡುತ್ತಾ ತಂದೆಯ ತಲೆಯಿಂದ ಧೂಳು ಮಣ್ಣನ್ನು ಒರೆಸಿ ತೆಗೆಯುತ್ತಿದ್ದರು. ಅವರು ತನ್ನ ಮಗಳನ್ನು ಸಾಂತ್ವನ ಗೊಳಿಸುತ್ತಾ ಈ ರೀತಿ ಹೇಳಿದರು: "ಮಗಳೇ ಅಳದಿರು; ಖಂಡಿತವಾಗಿಯೂ ಪರಮಾತ್ಮನು ನಿನ್ನ ತಂದೆಯ ಸಂಗಡ ಇದ್ದಾನೆ". (ಇಬ್ನುಹಿಶಾಂ)

ಜನರು ನೀಡುತ್ತಿದ್ದ ಉಪದ್ರವಗಳಿಂದ ಪೈಗಂಬರರು ಸ್ವಲ್ಪವೂ ಗಾಬರಿಪಡಲಿಲ್ಲ. ಆದರೆ, ಜನರೊಂದಿಗೆ ಸಂಪರ್ಕ ಬೆಳೆಸಲು ಸಾಧ್ಯವಾಗದೆ ಹೋಗುವುದು ಅವರಲ್ಲಿ ಅತ್ಯಂತ ದುಃಖವನ್ನುಂಟುಮಾಡುತ್ತಿತ್ತು. ಉದಾಹರಣೆಗೆ ಒಮ್ಮೆ ಮಕ್ಕಾ ನಿವಾಸಿಗಳೆಲ್ಲರೂ ಒಂದು ಪೂರ್ವಯೋಜಿತ ಸಂಚಿನ ಪ್ರಕಾರ ಹಝ್ರತ್ ಪೈಗಂಬರರೊಡನೆ ಮಾತನಾಡುವುದನ್ನು ಏಕಾಏಕಿ ಸಂಪೂರ್ಣ ನಿಲ್ಲಿಸಿಬಿಟ್ಟರು. ಅವರೊಡನೆ ಯಾವರೀತಿಯ ಸಂಭಾಷಣೆಯನ್ನೂ ಮಾಡಲಿಲ್ಲ. ಮಾತ್ರವಲ್ಲ, ಯಾರೊಬ್ಬರೂ ಅವರಿಗೆ ಯಾವ ರೀತಿಯ ತೊಂದರೆಯನ್ನೂ ನೀಡಲಿಲ್ಲ. ಈ ಅವಗಣನೆಯು ಪೈಗಂಬರರನ್ನು ಸಹಿಸಲಾರದ ದುಃಖಕ್ಕೆ ಗುರಿಪಡಿಸಿತು. ತಡೆಯಲಾರದ ವ್ಯಸನದಿಂದ ಮನೆಗೆ ಹಿಂದುರುಗಿದ ಅವರು ಯೋಚನಾ ಮಗ್ನರಾದರು. ಅದರಿಂದ ಅವರು ಎಷ್ಟು ದುಃಖಿತರಾಗಿದ್ದರೆಂದರೆ, ದೇವರು ತನ್ನ ದಿವ್ಯ ಬೋಧನೆಯ ಮೂಲಕ ಅವರನ್ನು ಸಮಾಧಾನ ಪಡಿಸಿ ಮತ್ತೂ ಮತ್ತೂ ಜನರ ಬಳಿ ಸಾಗುವಂತೆಯೂ ದಿವ್ಯ ಸಂದೇಶವನ್ನು ಅವರಿಗೆ ತಲಪಿಸುವಂತೆಯೂ ನಿರ್ದೇಶಿಸಿದನು.

# ಅಹ್ಮದಿಯಾ ವಾರ್ತೆಗಳು

## ಹೊಸ ಯುರೋಪ್ಯನ್ ಕೇಂದ್ರ

ಹೊಸ ಯುರೋಪ್ಯನ್ ಅಹ್ಮದಿಯಾ ಕೇಂದ್ರಕ್ಕಾಗಿ ಲಂಡನಿನಿಂದ 35 ಮೈಲು ದೂರದ ಸರ್ರಿ ಕಾಂಟಿ ಎಂಬಲ್ಲಿ ಒಂದು ರೆಸಿಡೆನ್ಸಿಯಲ್ ಸ್ಕೂಲ್ ಬಿಲ್ಡಿಂಗ್ ಒಳಗೊಂಡಿರುವ 25 ಎಕ್ರೆ ನಿವೇಶನವನ್ನು ಖರೀದಿಸಲಾಗಿದೆಯೆಂದು ಬ್ರಿಟನಿನ ಅಹ್ಮದಿಯಾ ಅಮೀರ್ ಮತ್ತು ಮಿಶನರಿ ಅತಾವುಲ್ ಮುಜೀಬ್ ಸಾಹೇಬ್ ರಾಶಿದ್ ತಿಳಿಸಿದ್ದಾರೆ.

## ದೆಹಲಿಯಲ್ಲಿ ಮಸೀದಿ ಮತ್ತು ಪ್ರಚಾರ ಕೇಂದ್ರ

ದೆಹಲಿಯಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಒಂದು ಹೊಸ ಮಸೀದಿ ಮತ್ತು ಪ್ರಚಾರ ಕೇಂದ್ರವನ್ನು ನಿರ್ಮಿಸಲಿಕ್ಕಾಗಿ ನಿವೇಶನವೊಂದನ್ನು ಖರೀದಿಸಲಾಗಿದೆ. ಶೀಘ್ರದಲ್ಲೇ ನಿರ್ಮಾಣ ಕಾರ್ಯ ಆರಂಭಿಸಲಾಗುವುದೆಂದು ತಿಳಿದು ಬಂದಿದೆ.

## ಬೆಂಗಳೂರು ಗುರುದ್ವಾರದಲ್ಲಿ ಭಾಷಣ

ಕಳೆದ ಆಗಸ್ಟ್ 5ರಂದು ಬೆಂಗಳೂರಿನ ಗುರುದ್ವಾರ ಸಿಂಘ್ ಸಭಾ ಅಪೇಕ್ಷೆಯ ಮೇರೆಗೆ ಸ್ಥಳೀಯ ಅಹ್ಮದಿಯಾ ಮಿಶನರಿ ಮೌಲವಿ ಬಶಾರತ್ ಅಹ್ಮದ್ ಸಾಹೇಬರು ಭಾಷಣ ಮಾಡಿದರು. ಗುರುದ್ವಾರದ ಲೈಬ್ರರಿಗೆ ಪವಿತ್ರ ಖುರ್‌ಆನಿನ ಗುರುಮುಖಿ ಭಾಷಾಂತರವನ್ನು ನೀಡಲಾಯಿತು.

## ಬ್ರಹ್ಮಸಮಾಜ ಸಮ್ಮೇಳನದಲ್ಲಿ ಭಾಷಣ

ಕಳೆದ ಮಾರ್ಚ್ 4ರಂದು ಕಲ್ಕತ್ತಾದ ಪಾರ್ಕ್ ಸರ್ಕಸ್ ಮೈದಾನದಲ್ಲಿ ಜರಗಿದ ಬ್ರಹ್ಮ ಸಮಾಜದ ವಾರ್ಷಿಕ ಸಮ್ಮೇಳನದಲ್ಲಿ ಸ್ಥಳೀಯ ಅಹ್ಮದಿಯಾ ಮಿಶನರಿ ಮೌಲವಿ ಸುಲ್ತಾನ್ ಅಹ್ಮದ್ ಸಾಹೇಬ್ ಮತ್ತು ಮಾಸ್ಟರ್ ಎಂ. ಅಲಿ ಸಾಹೇಬ್ ಎಂ. ಎ. ಭಾಗವಹಿಸಿದರು. ಮಾಸ್ಟರ್ ಎಂ. ಅಲಿ ಸಾಹೇಬರು ಪವಿತ್ರ ಖುರ್‌ಆನಿನ ಅಧ್ಯಾಪನಗಳನ್ನು ತನ್ನ ಭಾಷಣದಲ್ಲಿ ವಿವರಿಸಿದರು. ಸುಲ್ತಾನ್ ಅಹ್ಮದ್ ಸಾಹೇಬರು ಮುಹಮ್ಮದ್ ಪೈಗಂಬರರ ಜೀವನ ಮಾದರಿಯನ್ನು ಸವಿಸ್ತಾರವಾಗಿ ವಿವರಿಸಿದರು. ಭಾಷಣದ ಕೊನೆಯಲ್ಲಿ ಎಲ್ಲಾ ಧರ್ಮ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟ ಭವಿಷ್ಯ ನುಡಿಯಂತೆ ಕೊನೆಯ ಕಾಲದಲ್ಲಿ ಆಗಮಿಸಲಿದ್ದ ವಾಗ್ದತ್ತ ಲೋಕೋದ್ಧಾರಕನ ಕುರಿತು ಹೇಳಿದರು. ಅಹ್ಮದಿಯಾ ಸಂಘಟನೆಯ ಸ್ಥಾಪಕರ ಸತ್ಯತೆ ಮತ್ತು ಬೋಧನೆಗಳ ಕುರಿತು ವಿವರಿಸಿದರು.

ಸಭಿಕರಿಗೆ ಇಂಗ್ಲಿಷ್ ಮತ್ತು ಬಂಗ್ಲಾ ಭಾಷೆಯ ಸಾಹಿತ್ಯಗಳನ್ನು ಹಂಚಲಾಯಿತು.

## ಲೋಕಶಾಂತಿಗಾಗಿ ಸಹಕರಿಸಲು ಪೋಪ್ ಅವರಿಗೆ ಕರೆ

ಕಳೆದ ಸಪ್ಟೆಂಬರ್ 13ರಂದು ಪೋಪ್ ಜಾನ್ ಪಾಲ್ ದ್ವಿತೀಯ ಅವರು ಕೆನಡಾ ಸಂದರ್ಶಿಸಿದ್ದಾಗ ಸ್ಥಳೀಯ ಅಹ್ಮದಿಯಾ ಮಿಶನರಿ ಮುನೀರುದ್ದೀನ್ ಶಮ್ಸ್‌ರವರು ಅವರನ್ನು ಸ್ಯೆಂಟ್ ಪಾಲ್ ಚರ್ಚ್‌ನಲ್ಲಿ ಭೇಟಿಯಾದರು. ಜಗತ್ತಿನಲ್ಲಿ ಶಾಂತಿ ಸ್ಥಾಪಿಸಲಿಕ್ಕೆ ಅಹ್ಮದಿಯಾ ಸಂಘಟನೆಯೊಂದಿಗೆ ಸಹಕರಿಸಲು ಅವರನ್ನು ಕೋರಲಾಯಿತು. ಪವಿತ್ರ ಖುರ್‌ಆನಿನ ಇಂಗ್ಲಿಷ್ ವ್ಯಾಖ್ಯಾನ ಗ್ರಂಥವನ್ನೂ ಇನ್ನಿತರ ಅಹ್ಮದಿಯಾ ಸಾಹಿತ್ಯಗಳನ್ನೂ ಅವರಿಗೆ ಪಾರಿತೋಷಕವಾಗಿ ನೀಡಲಾಯಿತು.

## ಕೆನ್ಯಾದಲ್ಲಿ 547 ಮಂದಿ ಅಹ್ಮದಿಯತ್ ಸ್ವೀಕಾರ

ಕೆನ್ಯಾದ ಮರಖುಮುಲುಮೆ ಎಂಬಲ್ಲಿ ಕಳೆದ ಆಗಸ್ಟ್ 4ರಂದು ಅಹ್ಮದಿಯಾ ಜಮಾಅತಿನ ಹೊಸ ಘಟಕ ಸ್ಥಾಪಿ

ಸಲ್ಪಟ್ಟಿರುತ್ತದೆ, ಅಲ್ಲಿ 547 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿರುತ್ತಾರೆಂದು ಮೊಂಬಾಸಾದ ಮಿಶನರಿ ಮೌಲವಿ ಬಶೀರ್ ಅಹ್ಮದ್ ಅಖ್ತರ್ ತಿಳಿಸಿರುತ್ತಾರೆ.

## ಅಮೇರಿಕದ ಐತಿಹಾಸಿಕ ಝ್ಯೂಲಿಅನ್ ನಗರದಲ್ಲಿ ಅಹ್ಮದಿಯಾ ಕೇಂದ್ರ

ಅಮೇರಿಕದ ಝ್ಯೂಲಿಅನ್ ನಗರದಲ್ಲಿ ಅಹ್ಮದಿಯಾ ಕೇಂದ್ರವನ್ನು ಸ್ಥಾಪಿಸಲಾಗಿದೆಯೆಂದು ತಿಳಿದುಬಂದಿದೆ. ಅದಕ್ಕಾಗಿ 30 ಸಾವಿರ ಡಾಲರ್‌ಗಳಿಗೆ ಒಂದು ಕಟ್ಟಡವನ್ನು ಖರೀದಿಸಲಾಗಿದೆ.

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಅಹ್ಮದ್ ಅವರ ಪ್ರಮುಖ ಶತ್ರುಗಳಲ್ಲೋರ್ವರಾದ ಅಲೆಗ್ಸಾಂಡರ್ ಡೂವಿ ತನ್ನ ಕೇಂದ್ರವನ್ನು ಝ್ಯೂಲಿಅನ್ ನಗರದಲ್ಲಿ ಸ್ಥಾಪಿಸಿ ಕೊನೆಗೆ ನಾಮಾವಶೇಷವಾದುದರಿಂದ ಅಹ್ಮದಿಯರಿಗೆ ಸಂಬಂಧಿಸಿ ಆ ನಗರ ಐತಿಹಾಸಿಕ ಪ್ರಸಿದ್ಧಿಯನ್ನು ಪಡೆದಿದೆ.

## ಖಾದಿಯಾನಿನಲ್ಲಿ 93ನೇ ವಾರ್ಷಿಕ ಮಹಾಸಭೆ

ಭಾರತದ ಅಹ್ಮದಿಯಾ ಕೇಂದ್ರಸ್ಥಾನ ಖಾದಿಯಾನಿನಲ್ಲಿ ಕಳೆದ ಡಿಸೆಂಬರ್ 18, 19, 20ರಂದು ತ್ರಿದಿನ ವಾರ್ಷಿಕ ಮಹಾಸಭೆಯು ಜರಗಿತು.

ದೈವಾಸ್ತಿತ್ವ, ಹಝ್ರತ್ ಮುಹಮ್ಮದ್ ಪೈಗಂಬರರ ಜೀವನ ಮಾದರಿ, ಹಝ್ರತ್ ಮಸೀಹ್ ಮೌಊದರ ಜೀವನ, ಧರ್ಮ ಸಾಮರಸ್ಯ, ಇಮಾಂ ಮಹ್ದಿಯ ಆಗಮನ, ಪ್ರವಾದಿತ್ವ ಸಮಾಪ್ತಿ ಮತ್ತು ಅಹ್ಮದಿಯಾ ಜಮಾಅತ್, ಇಸ್ಲಾಂ ಧರ್ಮದಲ್ಲಿ ಮತ ಸ್ವಾತಂತ್ರ್ಯ ಹಕ್ಕು, ಇಸ್ಲಾಂ ಮತ್ತು ಜಾಗತಿಕ ಶಾಂತಿ, ಅಹ್ಮದಿಯಾ ಜಮಾಅತಿನ ಲೋಕದಾದ್ಯಂತ ಪ್ರಚಾರ ಚಟುವಟಿಕೆ ಇತ್ಯಾದಿ ವಿಷಯಗಳ ಕುರಿತು ಅಹ್ಮದಿಯಾ ವಿದ್ವಾಂಸರು ಭಾಷಣ ಮಾಡಿದರು.

## ಮೊಗ್ರಾಲ್‌ನಲ್ಲಿ ಸ್ಪೋರ್ಟ್ಸ್ ಡೇ

ಮೊಗ್ರಾಲ್ ಖುದ್ದಾಮುಲ್ ಅಹ್ಮದಿಯಾ (ಅಹ್ಮದಿಯಾ ಯುವಜನ ಸಂಘಟನೆ) ಆಶ್ರಯದಲ್ಲಿ ಕಳೆದ ನವೆಂಬರ್ 25ರಂದು ಮೊಗ್ರಾಲ್‌ನಲ್ಲಿ ಕ್ರೀಡಾ ದಿನ ಆಚರಿಸಲಾಯಿತು. ಓಟ, ಲಾಂಗ್‌ಜಂಪ್, ಹೈಜಂಪ್, ಶಾಟ್‌ಪುಟ್, ರಿಲೇ ಮೊದಲಾದ ಪಂದ್ಯಾಟಗಳನ್ನು ಏರ್ಪಡಿಸಲಾಗಿತ್ತು.

ಸೀನಿಯರ್ ವಿಭಾಗದಲ್ಲಿ ಟಿ. ಎ. ಮುಬಾರಕ್ ಅಹ್ಮದ್, ಜೂನಿಯರ್ ವಿಭಾಗದಲ್ಲಿ ಶಂಶೀರ್ ಅಹ್ಮದ್ ಮತ್ತು ಸಬ್ ಜೂನಿಯರ್ ವಿಭಾಗದಲ್ಲಿ ರಶೀದ್ ಅಹ್ಮದ್ ಸಿದ್ದೀಖ್ ವೈಯಕ್ತಿಕ ಚಾಂಪಿಯನ್‌ಶಿಪ್ ಗಳಿಸಿದರು.

ಅದೇ ದಿನ ಖುದ್ದಾಮುಲ್ ಅಹ್ಮದಿಯಾ ಮೊಗ್ರಾಲ್ ಮತ್ತು ಮಡಿಕೇರಿ ತಂಡಗಳೊಳಗೆ ಶಟ್ಲ್ ಬ್ಯಾಡ್ಮಿಂಟನ್, ಕಬಡ್ಡಿ ಮತ್ತು ರಿಲೇ ಪಂದ್ಯಾಟಗಳು ಸಹ ನಡೆದುವು. ಶಟ್ಲ್ ಬ್ಯಾಡ್ಮಿಂಟನ್ ಡಬಲ್ಸ್ ಎ ಗ್ರೂಪಿನಲ್ಲಿ ಮೊಗ್ರಾಲ್ ತಂಡ ವಿಜಯ ಗಳಿಸಿತು. ಬಿ ಗ್ರೂಪಿನಲ್ಲಿ ಮಡಿಕೇರಿ ತಂಡ ವಿಜಯಿಯಾಯಿತು. ಸಿಂಗಲ್ಸ್‌ನಲ್ಲಿ ಮಡಿಕೇರಿಯ ಎಸ್. ಎಂ. ಶರೀಫ್ ಮೊಗ್ರಾಲಿನ ನಾಸಿರ್ ಅಹ್ಮದ್ ಸಿದ್ದೀಖ್ ಅವರನ್ನೂ ಮಡಿಕೇರಿಯ ಎಂ. ಎ. ಖಮರುದ್ದೀನ್ ಮೊಗ್ರಾಲಿನ ಎಂ. ಎ. ಲತೀಫ್ ಅವರನ್ನೂ ಸೋಲಿಸಿದರು. ಕಬಡ್ಡಿ ಮತ್ತು ರಿಲೇಯಲ್ಲೂ ಮಡಿಕೇರಿ ತಂಡ ಜಯಗಳಿಸಿತು.

## ತರಬೇತಿ ಶಿಬಿರಗಳು

ಅಂಜುಮನ್ ಅಹ್ಮದಿಯಾ ವಕ್ಫ್ ಜದೀದ್‌ನ ಆಶ್ರಯದಲ್ಲಿ ಕೇರಳ ಉತ್ತರ ವಲಯ ತರಬೇತಿ ಶಿಬಿರ ಕಳೆದ ಸಪ್ಟೆಂಬರ್ 29 ಮತ್ತು 30ರಂದು ಪಯಂಗಾಡಿಯಲ್ಲೂ ದಕ್ಷಿಣ ವಲಯ ಶಿಬಿರ ಒಕ್ಟೋಬರ್ 7ರಂದು ಕರುಳಾಯಿಯಲ್ಲೂ ಕೇಂದ್ರೀಯ ವಕ್ಫ್ ಜದೀದ್‌ನ ಮೇಲಧಿಕಾರಿ ಜ| ಮಲಿಕ್ ಸಲಾಹುದ್ದೀನ್ ಸಾಹೇಬ್, ಎಂ. ಎ. ಅವರ ಮೇಲ್ನೋಟದಲ್ಲಿ ಜರಗಿದವು. ಕೇರಳದ ಚೀಫ್ ಮುಅಲ್ಲಿಂ ಮೌಲವಿ ಯು. ಅಬೂಬಕ್ಕರ್ ಸಾಹೇಬ್ ಅವರು ಶಿಬಿರಗಳ ಸಂಚಾಲಕರಾಗಿದ್ದರು.

## ಕೇರಳ ರಾಜ್ಯ ವಾರ್ಷಿಕ ಸಮ್ಮೇಳನ

ಕಲ್ಲಿಕೋಟೆ ದಾರುತಬ್ಲೀಗ್‌ನಲ್ಲಿ ಡಾ| ಮನ್‌ಸೂರ್ ಅಹ್ಮದ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿದ ಕೇರಳ ರಾಜ್ಯ ಅಹ್ಮದಿಯಾ ಜನರಲ್ ಬೋಡಿ ಸಭೆಯಲ್ಲಿ ವಾರ್ಷಿಕ ಸಮ್ಮೇಳನವನ್ನು ಫೆಬ್ರವರಿ 22, 23, 24ರಂದು ಪಾಲ್ಘಾಟ್‌ನಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

## ಕಲ್ಲಿಕೋಟೆಯಲ್ಲಿ ಬುಕ್ ಸ್ಟಾಲ್ ಮತ್ತು ರಾಜ್ಯ ಸಮಿತಿ ಕಚೇರಿ

ಕಲ್ಲಿಕೋಟೆಯ ಜಿ. ಎಚ್. ಮುಖ್ಯ ರಸ್ತೆಯಲ್ಲಿ ಕೇರಳ ಅಹ್ಮದಿಯಾ ರಾಜ್ಯ ಸಮಿತಿಯ ಕಚೇರಿ ಮತ್ತು ಒಂದು ಕೇಂದ್ರೀಕೃತ ಬುಕ್ ಸ್ಟಾಲ್‌ನ್ನು ಕೇರಳ ಅಹ್ಮದಿಯಾ ಚೀಫ್ ಮಿಶನರಿ ಮೌಲಾನ ಮುಹಮ್ಮದ್ ಅಬುಲ್ ವಫಾ ಸಾಹೇಬರು ಕಳೆದ ನವೆಂಬರ್ 15ರಂದು ಉದ್ಘಾಟಿಸಿರುವರು.

## ಪಯಂಗಾಡಿಯಲ್ಲಿ ಮಹಿಳಾ ವಾರ್ಷಿಕ ಸಮ್ಮೇಳನ

ಪಯಂಗಾಡಿ ಅಹ್ಮದಿಯಾ ಜಮಾಅತಿನ "ಲಜ್ನಾ ಇಮಾಯಿಲ್ಲಾ" (ಮಹಿಳಾ ಸಂಘ), "ನಾಸಿರಾತುಲ್ ಅಹ್ಮದಿಯಾ" (ಹೆಣ್ಮಕ್ಕಳ ಸಂಘ) ಸಂಯುಕ್ತ ವಾರ್ಷಿಕ ಸಮ್ಮೇಳನ ಕಳೆದ ನವೆಂಬರ್ 18ರಂದು ಸ್ಥಳೀಯ ಅಹ್ಮದಿಯಾ ಮದ್‌ರಸಾ ಹಾಲ್‌ನಲ್ಲಿ ಜರಗಿತು.

ಅಹ್ಮದಿಯಾ ಮಹಿಳೆಯರು ವಹಿಸಬೇಕಾದ ಘನ ಹೊಣೆಗಾರಿಕೆಗಳ ಕುರಿತೂ ಭವಿಷ್ಯತ್ಕಾಲದಲ್ಲಿ ಇಸ್ಲಾಮಿಗಾಗಿ ಜೀವಾರ್ಪಣ ಮಾಡಬೇಕಾದ ಪೀಳಿಗೆಯನ್ನು ಸೃಷ್ಟಿಸುವುದರಲ್ಲಿ ಮಹಿಳೆಯರಿಗಿರುವ ಪಾತ್ರದ ಕುರಿತೂ ಅಧ್ಯಕ್ಷ ಸ್ಥಾನ ವಹಿಸಿದ್ದ ಎಸ್. ವಿ. ರಶೀದಾ ವಿವರಿಸಿದರು.

ಸಮ್ಮೇಳನದ ಅಂಗವಾಗಿ ಖುರ್‌ಆನ್ ಕಂಠಪಾಠ, ಹಾಡುಗಳು, ಕ್ವಿಜ್ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

—o—o—

---

ನಿಧನ ವಾರ್ತೆ

# ಜ। ಪಿ. ರಮ್ಲಾನ್ ಸಾಹೇಬ್

ಮೂಲತಃ ಪಾಣೆಮಂಗಳೂರಿನವರಾದ ಜ। ಪಿ. ರಮ್ಲಾನ್ ಸಾಹೇಬರು ಕಳೆದ ಸಪ್ಟೆಂಬರ್ 26ರಂದು ಮಂಜೇಶ್ವರದಲ್ಲಿರುವ ತನ್ನ ವಸತಿಯಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್". ಮರಣ ಕಾಲದಲ್ಲಿ ಅವರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು. ಸುಮಾರು 30 ವರ್ಷಗಳ ಮೊದಲು ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು. ಅವರು ಶಾಂತ ಸ್ವಭಾವಿಯೂ ಪರೋಪಕಾರಿಯೂ ಆಗಿದ್ದರು.

ದಿವಂಗತರು ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಮತ್ತು ಅನೇಕ ಬಂಧು ಮಿತ್ರಾದಿಗಳನ್ನು ಅಗಲಿದ್ದಾರೆ. ದಿವಂಗತರಿಗೆ ಅಲ್ಲಾಹು ಮಗ್‌ಫಿರತನ್ನು ನೀಡಲಿ; ಆಮೀನ್.

ಮೃತ ದೇಹವನ್ನು ಹೊಸದಾಗಿ ಖರೀದಿಸಲಾದ ಖಬರ್‌ಸ್ತಾನದಲ್ಲಿ ದಫನ ಮಾಡಲಾಯಿತು.

---

ಓದಿದ್ದು

# ಅಹ್ಮದಿಯಾ ವಿರುದ್ಧ ಝಿಯಾ ಆರ್ಡಿನೆನ್ಸ್ ಬಗ್ಗೆ

"……ಇಸ್ಲಾಮಿಕ ಚರಿತ್ರೆ ಮತ್ತು ನ್ಯಾಯಶಾಸ್ತ್ರದ ವಿದ್ಯಾರ್ಥಿಯಾಗಿರುವ ನಾನು ಝಿಯಾರ ಆರ್ಡಿನನ್ಸನ್ನು ಬಹಳ ಆಸಕ್ತಿಯಿಂದ ಪರಿಶೀಲಿಸುವಾಗ ಆ ಅಧ್ಯಾದೇಶದ ನಿರೂಪಣೆಯ ಕುರಿತು ಸರಿಯಾದ ಗಮನ ಹರಿಸಲಾಗಿಲ್ಲವೆಂದು ನನಗೆ ಭಾಸವಾಗುತ್ತಿದೆ. ಉದಾಹರಣೆಗೆ ಅಝಾನ್ (ಪ್ರಾರ್ಥನೆಗೆ ಸೇರಲು ಮಿನಾರಗಳಿಂದ ನೀಡುವ ಕರೆ) ಅನಿಸ್ಲಾಮಿಕ ಕೃತ್ಯವೆಂದು ಹೇಗೆ ತಾನೇ ಹೇಳಲು ಸಾಧ್ಯ? ಅಝಾನ್ ಪದಗಳಲ್ಲಿ ವ್ಯತ್ಯಾಸ ಉಂಟುಮಾಡಿದರೆ ಅಥವಾ ಪ್ರಾರ್ಥನೆಯ ವೇಳೆ ಹೊರತು ಬೇರೆ ಸಮಯದಲ್ಲಿ ಕರೆ ನೀಡುವುದಾದರೆ ಅದನ್ನು ಅನಿಸ್ಲಾಮಿಕವೆಂದು ಕರೆಯಬಹುದು. ಆದರೆ ಸರಳವೂ ಪರಿಶುದ್ಧವೂ ಆದ ಅಝಾನ್ ಕರೆ ಯಾರಿಂದ ನೀಡಲ್ಪಟ್ಟರೂ ಅನಿಸ್ಲಾಮಿಕವೆಂದು ವಿಶೇಷಾಜ್ಞೆ ಪ್ರಕಾರ ಹೇಳುವುದು ಸರಿಯಲ್ಲ. ಒಬ್ಬ ಯಹೂದಿ ಹುಡುಗನು ಇಂಪಾದ ಸ್ವರದಲ್ಲಿ ಅಝಾನ್ ಉಚ್ಚರಿಸುವುದನ್ನು ಕಂಡಾಗ ಹಝ್ರತ್ ಪೈಗಂಬರರು ಆ ಹುಡುಗನೊಡನೆ ಅದನ್ನು ಉಚ್ಛ ಸ್ವರದಲ್ಲಿ ಹೇಳಲು ಅಪೇಕ್ಷಿಸಿದರು. ಆ ಹುಡುಗ ಆ ಅಪೇಕ್ಷೆಯನ್ನು ನೆರವೇರಿಸಿದನು. ಆ ಯಹೂದಿ ಹುಡುಗನ ವರ್ತನೆ ಅನಿಸ್ಲಾಮಿಕವಾಗಿತ್ತೆಂದು ಪರಿಗಣಿಸಲು ಸಾಧ್ಯವೆ?………"

—ಅನ್ವರ್ ಸಲೀಮ್, ಫೈಸಲಾಬಾದ್
(ದಿ ಪಾಕಿಸ್ತಾನ್ ಟೈಮ್ಸ್, ಲಾಹೋರ್:23-5-84)

□ □

## ನ್ಯಾಯಸಮ್ಮತವಲ್ಲ

ಕ್ವೆಟ್ಟಾ ಮೇ 8: ಸರಕಾರ ಖಾದಿಯಾನಿಗಳ ವಿರುದ್ಧ ಕೈಗೊಂಡ ಕಾರ್ಯಗಳು ನ್ಯಾಯಸಮ್ಮತವಲ್ಲವೆಂದು ಬಲೂಚಿಸ್ತಾನದ ನಾಯಕರಾದ ಮಿ। ಶೇರ್ ಮುಹಮ್ಮದ್ ಮರ್ರಿಯವರು ಹೇಳಿರುವರು. ಪತ್ರಕರ್ತರನ್ನು ಉದ್ದೇಶಿಸಿ ನಿನ್ನೆ ಮಾತಾಡುತ್ತಾ ಅವರು, ಎಲ್ಲರಿಗೂ ಮತ ಸ್ವಾತಂತ್ರ್ಯ ಇರಬೇಕೆಂದೂ ಮತ ನಿಯಮಗಳ ಪ್ರಕಾರ ಪ್ರತಿಯೊಬ್ಬನೂ ಅವನ ಕೃತ್ಯಗಳಿಗೆ ದೇವರ ಮುಂದೆ ಹೊಣೆಗಾರನಾಗಿರುವನೆಂದೂ ಹೇಳಿದರು. ಯಾರು ಮೂಮಿನ್ (ವಿಶ್ವಾಸಿ), ಯಾರು ಕಾಫಿರ್ (ಅವಿಶ್ವಾಸಿ) ಎಂಬ ಸರ್ಟಿಫಿಕೇಟು ನೀಡುವ ಹಕ್ಕು ಯಾರಿಗೂ ಇರಬಾರದು. ಅಂತಹ ಸಂಗತಿಗಳ ಕುರಿತು ಯಥಾರ್ಥ ಜ್ಞಾನ ದೇವರಿಗೆ ಮಾತ್ರ ಇರುವುದು, ಅದನ್ನು ಬೇರೆ ಮನುಷ್ಯರು ಕಂಡು ಹಿಡಿಯಲು ಅಸಾಧ್ಯ ಎಂದು ಸಹ ಅವರು ಹೇಳಿದರು.

– ಡೈಲಿ ನ್ಯೂಸ್, ಕರಾಚಿ: 8-5-84

□ □

## ಅನ್ಯಾಯಕರವಾದ ನಿರ್ಬಂಧಗಳು

"ಪಾಕಿಸ್ತಾನದ ಲಷ್ಕರಿ ಶಾಸಕರು ಖಾದಿಯಾನಿಗಳೊಡನೆ ಕೋಪದಿಂದಲೂ ದ್ವೇಷದಿಂದಲೂ ವರ್ತಿಸಿದ್ದಾರೆ. ಅವರ ಮೇಲೆ ಹೊರಿಸಿರುವ ಕಾನೂನಿನ ನಿಬಂಧನೆಗಳು ಇಸ್ಲಾಮಿನ ಮಾನವೀಯ ಸಿದ್ಧಾಂತಗಳ ಉಲ್ಲಂಘನೆಗಳಾಗಿವೆ. ……ಮತೀಯವಾದ ದ್ವೇಷ ಸಮಾಜದ ವಿನಾಶಕ್ಕೆ ಸದಾ ಕಾರಣವಾಗಿದೆಯೆಂದು ರುಜುವಾತಾಗಿದೆ……

ನಮ್ಮ ಮತೀಯ ನಾಯಕರು ಸಹಜವಾದ ಭಾವನೆಗಳನ್ನು ಅನುಸರಿಸಬೇಕಾಗಿದೆ. ಭಾರತವು ಇಂತಹ ನಿಯಮಗಳನ್ನು ಮುಸ್ಲಿಮರ ಬಗ್ಗೆ ಜಾರಿಗೊಳಿಸಿದರೆ ನಮ್ಮ ಮತ ಪಂಡಿತರು ಅವುಗಳ ಕುರಿತು ಹೇಗೆ ಭಾವಿಸುವರು. ಭಾರತೀಯ ಮುಸ್ಲಿಮರಿಗಾಗಿ ಏನು ತಾನೆ ಮಾಡಲು ಅವರಿಗೆ ಸಾಧ್ಯ?

—ಅನ್ವರ್ ಅಝೀಝ್ ಚೌಧರಿ,
ಮಾಜಿ ಕೇಂದ್ರ ಮಂತ್ರಿ ಮತ್ತು ಪೀಪಲ್ಸ್ ಪಾರ್ಟಿ ನಾಯಕ
(ಡೈಲಿ ಮುಸ್ಲಿಂ, ಇಸ್ಲಾಮಾಬಾದ್: 10-5-84)

□ □

## ಕ್ರೂರ ಕ್ರಮ

"ಖಾದಿಯಾನಿಗಳ ವಿರುದ್ಧ ಕೈಗೊಳ್ಳಲಾದ ಇತ್ತೀಚೆಗಿನ ಕ್ರಮಗಳು ನನ್ನ ಮನಸ್ಸಿನಲ್ಲಿ ಕೆಲವು ಪ್ರಶ್ನೆಗಳನ್ನು ಉಂಟುಮಾಡಿವೆ. ನಾನು ಇಸ್ಲಾಮಿನ ಕುರಿತು ಗಾಢ

ವಾಗಿ ಅಧ್ಯಯನ ಮಾಡದ ಒಬ್ಬ ಸಾಮಾನ್ಯ ಮುಸ್ಲಿಮ ನಾಗಿರುವೆನು.

ನಮಗೆ ಈ ರೀತಿ ಕಲಿಸಲಾಗಿದೆ: ಕಲಿಮವನ್ನು ಉಚ್ಚರಿಸುವವರು ಇಸ್ಲಾಮನ್ನು ಪ್ರವೇಶಿಸುತ್ತಾರೆ. ಅಲ್ಲಾಹನಲ್ಲಿಯೂ ಮಲಕುಗಳಲ್ಲಿಯೂ ಪವಿತ್ರ ಗ್ರಂಥ ಗಳಲ್ಲಿಯೂ ಪ್ರವಾದಿಗಳಲ್ಲಿಯೂ ಕೊನೆಯ ದಿನದ ಕುರಿತೂ ಶರ್ ಮತ್ತು ಖೈರ್ ದೇವರಿಂದ ಲಭಿಸುವವು ಎಂಬುದರ ಕುರಿತೂ ನಂಬುವವರು ಮುಸ್ಲಿಮರು. ಹಝ್ರತ್ ಪೈಗಂಬರರು ನುಡಿದ ಒಂದು ಹದೀಸು ಈ ರೀತಿ ಇದೆ: 'ಯಾರು ನಮ್ಮ ಹಾಗೆ ಖಿಬ್ಲಾಕ್ಕೆ ಅಭಿ ಮುಖವಾಗಿ ಪ್ರಾರ್ಥಿಸುತ್ತಾರೋ, ನಾವು ಝಿಬಹ್ ಮಾಡಿದ ಮಾಂಸವನ್ನು ತಿನ್ನುತ್ತಾರೋ ಅವರು ಮುಸ್ಲಿ ಮರು. ಅವರಿಗೆ ದೇವರ ಮತ್ತು ಅವನ ಪ್ರವಾದಿಯ ವಾಗ್ದಾನವಿದೆ'.

ಈ ಸಂಗತಿಗಳೆಲ್ಲಾ ಸರಿಯಾದರೆ ಆಗ ಉದ್ಭವಿ ಸುವ ಪ್ರಶ್ನೆ-ಖಾದಿಯಾನಿಗಳು ಈ ಆಜ್ಞೆಗಳನ್ನು ಪಾಲಿಸಿ ಅದರ ಪ್ರಕಾರ ನಡೆಯುತ್ತಾರೋ ಇಲ್ಲವೋ ಎಂಬುದು. ಖಾದಿಯಾನಿ ವಿರುದ್ಧ ಆರ್ಡಿನನ್ಸ್ ಖಾದಿಯಾನಿಗಳು ಪ್ರಾರ್ಥನೆಗೆ ಉಪಯೋಗಿಸುವ ಸ್ಥಳಗಳನ್ನು ಮಸ್‌ಜಿದ್ ಎಂದು ಕರೆಯುವುದನ್ನು ತಡೆಯುತ್ತದೆ. ಇಸ್ಲಾಮಿಗಿಂತ ಮೊದಲು ಅರಬಿಗಳು ತಮ್ಮ ದೇವಾಲಯಗಳಿಗೆ ಈ ಹೆಸರನ್ನು ಪ್ರಯೋಗಿಸಿದ್ದರು. ಇದು ಶುದ್ಧವಾದ ಒಂದು ಇಸ್ಲಾಮಿ ಪಾರಿಭಾಷಿಕ ಪದವಲ್ಲ......."

**—ಎ. ಜಮಾಲ್, ಪೇಶಾವರ್**

(ದಿ ಮುಸ್ಲಿಂ, ಇಸ್ಲಾಮಾಬಾದ್: 24-5-'84)

□ □

### ಏಕ ಪಕ್ಷೀಯ

ಭಾರತ ಉಪ ಭೂಖಂಡದಲ್ಲಿ ಸ್ವಾತಂತ್ರ್ಯಕ್ಕೆ ಮೊದ ಲು ಮತ್ತು ಅನಂತರ ಹಲವು ಪ್ರಖ್ಯಾತ ಉರ್ದು ಮತ್ತು ಇಂಗ್ಲಿಷ್ ಪತ್ರಿಕೆಗಳಲ್ಲಿ ಪತ್ರಕರ್ತನಾಗಿ ಕೆಲಸ ಮಾಡಿದ ವಯೋವೃದ್ಧನಾದ ನನಗೆ ರಾಷ್ಟ್ರೀಯ ಪತ್ರಿಕೆಗಳಲ್ಲಿ ಅಹ್ಮದೀಯರ ವಿರುದ್ಧವಾಗಿ ಪ್ರಕಟವಾಗುವ ಏಕ ಪಕ್ಷೀ ಯವಾದ ವಾರ್ತೆಗಳಿಂದ ದಿಗ್ಭ್ರಮೆಯಾಗುತ್ತಿದೆ. ಅಹ್ಮ ದೀಯರು ಸಂವಿಧಾನ ಬದ್ಧವಾಗಿ ಅಮುಸ್ಲಿಮರೆಂದು ಘೋಷಿಸಲ್ಪಟ್ಟರು. ಅನಂತರ ಇತ್ತೀಚೆಗೆ ಅವರು ಅಝಾನ್ ಕರೆ ನೀಡುವುದನ್ನು ತಡೆಯಲಾಗಿದೆ ಮತ್ತು ಅವರ ಪ್ರಾರ್ಥನಾಲಯಗಳನ್ನು ಮಸ್‌ಜಿದ್ ಎಂದು ಕರೆಯುವುದನ್ನು ಸಹ ತಡೆಯಲಾಗಿದೆ. ಆಗಲಿ; ಆದರೆ ಅವರು ಪಾಕಿಸ್ತಾನದ ಪ್ರಜೆಗಳಾಗಿಯೇ ಇರುವರಷ್ಟೇ. ಒಬ್ಬ ಅತ್ಯಂತ ದುಷ್ಟ ಅಪರಾಧಿಗೆ ಸಹ ತನ್ನ ಪರವಾಗಿ ಕೋರ್ಟಿನಲ್ಲಿ ವಾದಿಸಲು ಹಕ್ಕಿದೆ. ಪಾಕಿಸ್ತಾನದ ಪತ್ರಿಕೆ ಗಳು ಸಂಪೂರ್ಣವಾಗಿ ಅಹ್ಮದೀಯರಿಗೆ ಉತ್ತರಿಸುವ ಹಕ್ಕನ್ನು ನಿರಾಕರಿಸಿವೆ. ಇದು ಮೊದಲೇ ನಾನಾ ವಿಧದ ನಿಬಂಧನೆಗಳಿಗೊಳಗಾಗಿರುವ ಪಾಕಿಸ್ತಾನದ ಪತ್ರಿಕೆಗಳ ಕುರಿತು ಸದಭಿಪ್ರಾಯವನ್ನು ಮೊಟಕುಗೊಳಿಸುತ್ತದೆ.

ಸೆಮಿಟಿಕ್ ವಿರೋಧಿ ಮನೋವೃತ್ತಿ ನಾಝೀ ಸರ್‌ಗೆ ಎರಡನೆಯ ಮಹಾಯುದ್ಧದ ಮೊದಲು ಪ್ರೋತ್ಸಾಹ ನೀಡಿ ಅಂತಾರಾಷ್ಟ್ರೀಯ ಶಾಂತಿಯನ್ನು ಭಂಗಗೊಳಿಸಿದಂತೆ ಅಹ್ಮದೀ ವಿರೋಧಿ ಪ್ರವೃತ್ತಿಗಳು ಪಾಕಿಸ್ತಾನದಲ್ಲಿ ಮುಲ್ಲಾ ರಾಜ್ಯಾಡಳಿತೆ ಮತ್ತು ಆದರಿಂದ ಇಸ್ಲಾಮಿನ ಸರ್ವಾಂಗ ಸುಂದರ ಭವ್ಯತೆಗೆ ಘೋರ ಆಘಾತಗಳನ್ನು ಉಂಟುಮಾಡುವುದರಲ್ಲಿ ಸಂಶಯವಿಲ್ಲ. ಅಲ್ಲಾಮ ಇಕ್ಬಾಲ್ ಇದನ್ನು ಈ ರೀತಿ ವ್ಯಕ್ತಗೊಳಿಸಿರು ವರು: ದೀನೆ ಮುಲ್ಲಾ ಫೀ ಸಬೀಲಿಲ್ಲಾಹಿ ಫಸಾದ್ (ಮುಲ್ಲಾಗಳ ಮತ ದೇವರ ದಾರಿಯಲ್ಲಿ ಕಲಹ)

**—ಮುಹಮ್ಮದ್ ಶಫೀ (ಮಿೂಮ್ ಶೀನ್)**

(ಪಾಕಿಸ್ತಾನದ ಪ್ರಖ್ಯಾತ ಅಂಕಣ ಬರಹಗಾರ)

ವ್ಯೂಪೊಯಿಂಟ್, ಲಾಹೋರ್.

□ □

## ★ ಝಿಯಾ ಜನಮತಗಣನೆ ಕುರಿತು ★

ಜನರಲ್ ಝಿಯಾ ಹೇಳುವುದು ನೊಂದಾಯಿಸ ಲ್ಪಟ್ಟ ಮತದಾರರಲ್ಲಿ 62 ಶೇಕಡಾ ಮತದಾನ ನೀಡಿದ ರೆಂದೂ ಮತದಾನ ಮಾಡಿದವರ ಪೈಕಿ 97·71 ಶೇಕಡಾ ತನ್ನ ಪರವಾಗಿದೆಯೆಂದೂ ಆಗಿದೆ. ಆದರೆ ಪತ್ರಿಕಾ ವರದಿ ಗಾರರನ್ನು ಭೇಟಿಯಾದ ಎಂ. ಆರ್. ಡಿ. (ಪ್ರಜಾ ಪ್ರಭುತ್ವ ಪುನಸ್ಥಾಪನಾರಂಗ) ನಾಯಕರು ತಮ್ಮ ನಿಲುವನ್ನು ಜನತೆ ಬೆಂಬಲಿಸಿದರೆಂದು ಹೇಳಿರುವರು. ಸಿಂಧ್ ಪ್ರಾಂತ್ಯದ ಹಲವಾರು ಮತದಾನ ಕೇಂದ್ರಗಳಲ್ಲಿ

ಯಾವುದೇ ಮತದಾನ ನಡೆಯಲಿಲ್ಲವೆಂದೂ ಕೆಲವು ಸ್ಥಳಗಳಲ್ಲಿ ಅಲ್ಪ ಸ್ವಲ್ಪ ಮತದಾನವಾಗಿದೆಯೆಂದೂ ಪಾಕಿಸ್ತಾನದಾದ್ಯಂತ ಕೇವಲ ಶೇಕಡಾ 5ರಷ್ಟು ಮಾತ್ರ ಜನರು ಮತದಾನ ನೀಡಿದರೆಂದೂ ಅವರು ಹೇಳಿದರು. ಝಿಯಾರ ಜನಾಭಿಪ್ರಾಯ ಮತದಾನದ ಬೆಂಬಲಿಗರಾದ ಜಮಾಅತೆ ಇಸ್ಲಾಮಿ ಸಂಘಟನೆಯ ಉಪಾಧ್ಯಕ್ಷ ಪ್ರೊಫೆಸರ್ ಗಫೂರ್ ಅಹ್ಮದ್‌ರವರ ಅಭಿಪ್ರಾಯದ ಪ್ರಕಾರ ಕೇವಲ ಶೇಕಡಾ 20ರಷ್ಟು ಮತದಾರರು ಮಾತ್ರ ಮತ ಚಲಾಯಿಸಿದ್ದಾರೆ. ಅವರು ಸ್ವತಃ ಮತ ನೀಡಲಿಲ್ಲ..........

ಝಿಯಾ ನಡೆಸಿದ ಜನ ಮತ ಗಣನೆ ಜಮಾಅತೆ ಇಸ್ಲಾಮಿ ಮತ್ತು ಪೀರ್ ಪಗಾಡೋ ಮುಸ್ಲಿಮ್ ಲೀಗಿನ ಬಲಹೀನತೆಯನ್ನು ಸ್ಪಷ್ಟಗೊಳಿಸಿದೆ. ಈ ಎರಡು ಪಕ್ಷಗಳೇ ಝಿಯಾರ ಶಕ್ತವಾದ ಬೆಂಬಲಿಗರು.

—**ಸುಲ್ತಾನ್ ಅಹ್ಮದ್**, ಕರಾಚಿಯಿಂದ ನೀಡಿದ ವರದಿ (ದಿ ಟೈಮ್ಸ್, ಬೆಂಗಳೂರು: 29-12-'84)

□ □

ಜನಮತಗಣನೆಯ ಮತದಾನದ ಸಂದರ್ಭದಲ್ಲೂ, ಮತದಾನದ ಮೊದಲು ಮತ್ತು ನಂತರವೂ ನಡೆದ ಮೋಸವನ್ನು ತಡೆಗಟ್ಟಲು ಮುಖ್ಯ ಚುನಾವಣಾಧಿಕಾರಿ ಜಸ್ಟಿಸ್ ಎಸ್. ಎ. ನುಸ್ರತ್ ವಿಫಲರಾಗಿದ್ದರಿಂದ ಅವರು ತನ್ನ ಹುದ್ದೆಗೆ ರಾಜೀನಾಮೆ ನೀಡಬೇಕೆಂದು ಪ್ರಜಾಪ್ರಭುತ್ವ ಪುನಸ್ಥಾಪನಾರಂಗ (ಎಂ. ಆರ್. ಡಿ ) ವಕ್ತಾರ ಮಲಿಕ್ ಕಾಸಿಂ ಒತ್ತಾಯಿಸಿದ್ದಾರೆ.

—**ಇಂಡಿಯನ್ ಎಕ್ಸ್‌ಪ್ರೆಸ್: 22-12-'84**

□ □

ಲಷ್ಕರೀ ನಿಷೇದಾಜ್ಞೆ ಹೇರಲಾಗಿದ್ದರೂ ಅನೇಕ ವಿರೋಧಿ ನಾಯಕರು ಸೋಮವಾರದಂದು ಬಂಧಿಸಲ್ಪಟ್ಟಿದ್ದರೂ ಝಿಯಾ ವಿರೋಧಿಗಳು ಮಂಗಳವಾರದಂದು ಶಾಂತಿಪರ ಪ್ರತಿಭಟನಾ ಸಭೆಯೊಂದನ್ನು ನಡೆಸಿದರು.

97 ಶೇಕಡಾ ಝಿಯಾ ಪರ ಬೆಂಬಲ ಲಭಿಸಿದೆಯೆಂದು ಹೇಳಲಾಗುತ್ತಿರುವ ಜನಮತಗಣನೆಯು ವಂಚನೆಯೆಂದೂ ಅದರ ಫಲಿತಾಂಶವು ಮೋಸವೆಂದೂ ಭಾಷಣಗಾರರು ಆಪಾದಿಸಿದರು.

—**ಇಂಡಿಯನ್ ಎಕ್ಸ್‌ಪ್ರೆಸ್: 27-12-'84**

□ □

"ಜನರಲ್ ಝಿಯಾರ ಜನಮತಗಣನೆ ಚುನಾವಣಾ ಇತಿಹಾಸದಲ್ಲೇ ಅತಿದೊಡ್ಡ ಮೋಸವಾಗಿದೆ. ಅದನ್ನು ಎಂದಿಗೂ ಅಂಗೀಕರಿಸಲು ಸಾಧ್ಯವಿಲ್ಲ. ಜನಮತಗಣನೆಯ ವಿಜಯದ ಬಗ್ಗೆ ಪದೇ ಪದೇ ಹೇಳಲಾಗುವ ಸುಳ್ಳನ್ನು ಸತ್ಯವಾಗಿ ಪರಿಗಣಿಸಲು ಬಿಡಲಾಗದು."

—**ಮಿ। ಅಸಫ್ ವರ್ದಾಗ್**
ತಹ್ರೀರ್ ಇಸ್ತಿಖ್‌ಲಾಲ್ ಪಕ್ಷದ ಪ್ರಧಾನ ಕಾರ್ಯದರ್ಶಿ
(**ಇಂಡಿಯನ್ ಎಕ್ಸ್‌ಪ್ರೆಸ್: 16-1-'85**)


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಪುಟ: **60** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: Book Secretary, Ahmadiyya Muslim Mission,
10-23/1008, Ansari Road, Bunder, Mangalore-575 001

# ಇಂದಿರಾ ನೆನಹು

1984 ಅಕ್ಟೋಬರ್ 31 ಭಾರತದ ಪ್ರಜೆ ಮರೆಯಲಾಗದ ದುರ್ದಿನ. ಭಾರತ ದೇಶವನ್ನು ಸುಮಾರು 16 ವರ್ಷಗಳ ಕಾಲ ಆಳಿದ ಶ್ರೀಮತಿ ಇಂದಿರಾ ಗಾಂಧಿ ಅಂದು ತನ್ನ ಬೆಂಗಾವಲಿನ ಇಬ್ಬರು ಭಟರಿಂದಲೇ ದಾರುಣವಾದ ಹತ್ಯೆಗೀಡಾದ ದಿನ. ಈ ಕುಕೃತ್ಯಕ್ಕಾಗಿ ಭಾರತೀಯ ಪ್ರಜೆ ಲಜ್ಜೆಯಿಂದ ತಲೆತಗ್ಗಿ ಸಬೇಕಾದ ದಿನ.

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶದ ನಾಯಕಿಯಾಗಿದ್ದರು ಶ್ರೀಮತಿ ಇಂದಿರಾ ಗಾಂಧಿ. ಅವರು ಪ್ರಜೆಗಳ ನೆಚ್ಚಿನ ಪ್ರಧಾನ ಮಂತ್ರಿಯಾಗಿ ಸುದೀರ್ಘ ಕಾಲ ದೇಶವನ್ನು ಆಳಿದ ಭಾರತ ರತ್ನ. ದೇಶದ ಪ್ರಗತಿಗಾಗಿ ಅವರು ಹತ್ತು ಹಲವು ದಿಟ್ಟ ಹೆಜ್ಜೆ ಗಳನ್ನಿರಿಸಿದರು. ದೀನ ದಲಿತರ ಏಳಿಗೆಗಾಗಿ ಅತ್ಯಂತ ಶ್ರಮಿಸಿದರು. ಆಂತರಿಕ ಹಾಗೂ ಬಾಹ್ಯ ಅಪಾಯಗಳಿಗೆ ದೇಶ ಸಿಲುಕಿದಾಗ ಧೀರ ಕ್ರಮಗಳನ್ನು ಕೈಗೊಂಡರು. ಅಂತಾರಾಷ್ಟ್ರೀ ಯ ಮಟ್ಟದಲ್ಲಿ ದೇಶಕ್ಕೆ ಉನ್ನತ ಕೀರ್ತಿಯನ್ನು ಗಳಿಸಿ ಕೊಟ್ಟರು.

ಅನಿವಾರ್ಯ ಘಟ್ಟಗಳಲ್ಲಿ ದೇಶದ ಒಳಿತಿಗಾಗಿ ಅವರಿಟ್ಟ ಹೆಜ್ಜೆಗಳು ಕೆಲವರನ್ನು ರೇಗಿ ಸಿದುವು. ಅಂತಹ ಕ್ರಮಗಳು ತನಗೇ ಅಪಾಯಕರವೆಂದು ಅವರು ಮನಗಂಡಿದ್ದರೂ ದೇಶದ ಶ್ರೇಯೋಭಿವೃದ್ಧಿಯನ್ನು ಮುಂದಿಟ್ಟು, ಹಿಂದೇಟು ಹಾಕಲಿಕ್ಕೆ ಮನಸ್ಸು ಮಾಡಲಿಲ್ಲ. ಕೊನೆಗೂ ಅವರು ದೇಶಕ್ಕಾಗಿ ಬಲಿಯಾಗಬೇಕಾಯಿತು. ಅವರು ಚರಿತ್ರೆಯಲ್ಲಿ ಅವಿಸ್ಮರ ಣೀಯರಾಗಿದ್ದಾರೆ. ಅಬ್ರಹಾಂ ಲಿಂಕನ್, ಜೋಸೆಫ್ ಕೆನಡಿ, ಅನ್ವರ್ ಸಾದಾತ್, ಲಿಯಾ ಖತಲೀ ಖಾನ್ ಮೊದಲಾದ ರಾಷ್ಟ್ರನಾಯಕರ ಶ್ರೇಣಿಯಲ್ಲಿ ಇಂದಿರಾ ಗಾಂಧಿ ಸಹ ಸೇರಿ ದರು.

ಇಂದಿರಾ ಗಾಂಧಿಯವರ ಮರಣದ ಸಂತಾಪದಲ್ಲಿ ಜನಕೋಟಿಗಳೊಂದಿಗೆ ನಾವೂ ಸಹಭಾಗಿಯಾಗಿದ್ದೇವೆ. ಅವರಿಗೆ ಗೌರವಾರ್ಪಿಸಿಕೊಳ್ಳುತ್ತೇವೆ.

ಶ್ರೀಮತಿ ಇಂದಿರಾಗಾಂಧಿ ಸಾಕಿ ಸಲಹಿದ ಕಾಂಗ್ರೆಸ್-ಐ, ಅವರ ತರಬೇತಿ ಪಡೆದ ಪುತ್ರ ರಾಜೀವ ಗಾಂಧಿಯವರ ನೇತೃತ್ವದಲ್ಲಿದ್ದು ಜನಮನ್ನಣೆ ಗಳಿಸುತ್ತಿದೆ. ಕಳೆದ ಡಿಸೆಂಬರ್‌ನಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್-ಐ ಐತಿಹಾಸಿಕ ದಾಖಲೆಯ ವಿಜಯವನ್ನು ಪಡೆಯಿತು. ಪ್ರಧಾನಿ ಶ್ರೀ ರಾಜೀವ ಗಾಂಧಿಯವರ ನಾಯಕತ್ವದಲ್ಲಿ ಸಚ್ಚರಿತ, ಶುದ್ಧ, ದಕ್ಷ ಆಡಳಿತ ಸಾಧಿತವಾಗಿ ದೇಶವು ಸುಖ ಶಾಂತಿ ಸಮೃದ್ಧಿಯಿಂದ ಪ್ರಗತಿ ಗಳಿಸಲೆಂದು ಹಾರೈಸು ತ್ತೇವೆ.


—ಸಂಪಾದಕ.

# AHMADIYYA ENGLISH LITERATURE

| No. | Title | Price |
|---|---|---|
| 1 | INTRODUCTION TO THE STUDY OF THE HOLY QURAN<br>By Hazrat Mirza Bashiruddin Mahmood Ahmad | 16-00 |
| 2. | THE PHILOSOPHY OF THE TEACHINGS OF ISLAM<br>By Hazrat Mirza Ghulam Ahmad | 6-00 |
| 3. | CHARA CTERISTICS OF THE QURANIC TEACHINGS<br>By Hazrat Mirza Bashiruddin Mahmood Ahmad | 2-00 |
| 4 | THE HOLY PROPHET MUHAMMAD<br>By Hazrat Mirza Bashiruddin Mahmood Ahmad | 2-00 |
| 5. | AHMADIYYA MOVEMENT<br>By Hazrat Mirza Bashiruddin Mahmood Ahmad | 2-25 |
| 6. | WHAT IS AHMADIYYAT?<br>By Hazrat Mirza Bashiruddin Mahmood Ahmad | 1-50 |
| 7. | THE ECONOMIC STRUCTURE OF ISLAMIC SOCIETY<br>By Hazrat Mirza Bashiruddin Mahmood Ahmad | 2-50 |
| 8. | THE NEW WORLD ORDER OF ISLAM<br>By Harzat Mirza Bashiruddin Mahmood Ahmad | 2 25 |
| 9. | TRUTH ABOUT KHATME NABUWAT<br>By Hazat Mirza Bashir Ahmed M A. | 2-50 |
| 10. | Islam and Slavery By Harzat Mirza Bashir Ahmad, M.A. | 1-25 |
| 11. | Forty Gems of Beauty By Hazrat Mirza Bashir Ahmad. M.A. | 2-50 |
| 12. | Our Teachings By Hazrat Mirza Ghulam Ahmad | 1-00 |
| 13. | An Interpretation of Islam By Laura Viccia Vaglieri | 3-00 |
| 14. | Muhammad the Most Successful Prophet<br>By Moulana Sharif Ahmad Amini | 1-00 |
| 15: | The Goal of Man and the Way to Reach it<br>By Muhammad Karimullah Naujawan & Dr Hafiz Saleh Muhammad Allahdin. Ph D. | 0-50 |
| 16. | Jesus in India By Hazrat Mirza Ghulam Ahmad | 2-25 |
| 17. | A Review of Christianity By Hazrat Mirza Ghulam Ahmad | 1-00 |
| 18. | Four Questions by a Christian and their Answers<br>By Hazrat Mirza Ghulam Ahmad | 1-25 |
| 19. | How to get rid of the Bondage of Sin<br>By Hazrat Mirza Ghulam Ahmad | 1-25 |
| 20. | Where did Jesus Die? By J. D Shams | 5-00 |
| 21. | Did Jesus Redeem Mankind? | 2-50 |
| 22. | The Tomb of Jesus By Sufi Mutiur Rahman Bengalee, M.A. | 1-00 |
| 23. | The Christian Doctrine of Atonement<br>By Dr. M. M. Sadiq, D. D., LL.D., S.S.P., (London) | 1-00 |
| 24. | Why did early Christians accept Islam? By J D. Shams | 1-00 |
| 25. | Latest Findings about Jesus Christ | 0-50 |

Write to : **Secretary for Mission Works,**
Sadr Anjuman Ahmadiyya, Qadian–143 516 (Punjab)

Regd. with the Registrar of Newspapers for India. Regd No. R. N. 27354/75
**YUGARASHMI Kannada Quarterly, January 1985 / Sulh 1364**




**English Translation of the**

**HOLY QURAN**

**with Arabic Text & Extensive Index**

**Price : Rs. 20-00**
**Postage Extra**

**Write to:**

**NAZIR DAWAT-O-TABLIGH**
Sadr Anjuman Ahmadiyya
Qadian-143 516 [Punjab]

ಎಲ್ಲಾ ಬಗೆ ಹಂಚುಗಳಿಗೆ ವಿಚಾರಿಸಿರಿ:

# STANDARD TILERY

## KADUR

CHICKMAGALUR DISTRICT

★

RAJA MARK Roofing Tiles, Ridges, Wall Tiles,
Span Tiles, Floorings, Decorative Tiles, Ceilings, Etc , Etc.

All Clay Products Available.

**Edited and Published by Muhammad Yusuf on behalf of Jamath Ahmadiyya at 10-23-1008, Ansari Road, Bunder, Mangalore-575 001.**
**Printed at Karavali Printers, Azizuddin Road, Bunder, Mangalore-575 001.**